ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 24 ಸೋಮವಾರ 2025

ಸಂಪುಟ: 45 | ಸಂಚಿಕೆ: 307 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೈ ವೋಲ್ಟೇಜ್ ಕದನದಲ್ಲಿ ಗೆದ್ದು ಬೀಗಿದ ಭಾರತ

● ಕಿಂಗ್ ಕೊಹ್ಲಿ ಭರ್ಜರಿ ಶತಕ ● ಸೆಮೀಸ್‌ಗೆ ಎಂಟ್ರಿ ಕೊಟ್ಟ ಟೀಂ ಇಂಡಿಯಾ; ಟೂರ್ನಿಯಿಂದ ಹೊರಬಿದ್ದ ಪಾಕ್

ದುಬೈ, ಫೆ.23– ವಿರಾಟ್ ಕೊಹ್ಲಿ ಅವರ ಭರ್ಜರಿ ಶತಕದ ನೆರವಿನಿಂದ ಪಾಕಿಸ್ತಾನ ವಿರುದ್ಧದ ಚಾಂಪಿಯನ್ ಟ್ರೋಫಿಯ ಹೈ ವೋಲ್ಟೇಜ್ ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಟೂರ್ನಿಯಲ್ಲಿ ಸತತ 2ನೇ ಗೆಲುವು ದಾಖಲಿಸಿದ ಭಾರತ ಸೆಮಿ ಫೈನಲ್‌ಗೆ ಲಗ್ಗೆ ಹಾಕಿದರೇ, ಸತತ 2ನೇ ಸೋಲು ಅನುಭವಿಸಿದ ಅತಿಥೇಯ ಪಾಕಿಸ್ತಾನ ಟೂರ್ನಿಯಿಂದ ಹೊರ ಬಿದ್ದಿದೆ.

ದುಬೈನ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 49.4 ಓವರ್‌ಗಳಲ್ಲಿ 241ರನ್‌ಗಳಿಗೆ ಆಲೌಟಾಯಿತು. ನಂತರ ಪಾಕಿಸ್ತಾನ ನೀಡಿದ 242ರನ್‌ಗಳ ಗುರಿ ಬೆನ್ನತ್ತಿದ ಭಾರತ ಇನ್ನು 7.3 ಓವರ್‌ಗಳಿರುವಾಗಲೇ 42.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 244 ರನ್ ಗಳಿಸುವ ಮೂಲಕ ಜಯದ ನಗೆ ಬೀರಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಜೋಡಿ ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿತು. ವೇಗವಾಗಿ ಆಡುತ್ತಿದ್ದ ರೋಹಿತ್ ಶರ್ಮಾ ಕೇವಲ 15 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಒಳಗೊಂಡ 20 ರನ್ ಗಳಿಸಿ ಶಹೀನ್ ಆಫ್ರಿದಿ ಅವರಿಗೆ ವಿಕೆಟ್ ಒಪ್ಪಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ಶುಭ್‌ಮನ್ ಗಿಲ್ ಹಾಗೂ ವಿರಾಟ್ ಕೊಹ್ಲಿ ತಾಳ್ಮೆಯ ಆಟವಾಡಿ 69 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಅಲ್ಲದೇ ನಿಧಾನವಾಗಿ ಪಂದ್ಯವನ್ನು ಪಾಕಿಸ್ತಾನದ ಕೈಯಿಂದ ಕಿತ್ತುಕೊಂಡರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಶುಭಮನ್ ಗಿಲ್ ಅವರು 52 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 46 ರನ್ ಗಳಿಸಿ ಅಬ್ರಾರ್ ಅಹ್ಮದ್ ಅವರ ಬೌಲಿಂಗ್‌ನಲ್ಲಿ ಔಟಾದರು. ಆಗ ತಂಡದ ಮೊತ್ತ 2 ವಿಕೆಟ್ ನಷ್ಟಕ್ಕೆ 100 ರನ್ ಆಗಿತ್ತು.

ಕೊಹ್ಲಿ– ಅಯ್ಯರ್ ಶತಕದ ಜೊತೆಯಾಟ: ಬಳಿಕ ಶ್ರೇಯಸ್ ಅಯ್ಯರ್ ಜೊತೆಗೂಡಿದ ಕೊಹ್ಲಿ ಶತಕದ ಜೊತೆಯಾಟವಾಡಿದರು. ಇವರಿಬ್ಬರೂ 114 ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ದಡಕ್ಕೆ ತಂದರು. ಈ ವೇಳೆ 67 ಎಸೆತಗಳಲ್ಲಿ 5 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 56 ರನ್ ಗಳಿಸಿದ್ದ ಶ್ರೇಯಸ್ ಅಯ್ಯರ್ ಕುಶ್ದಿಲ್ ಶಾ ಅವರ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ಕವರ್ಸ್‌ನಲ್ಲಿದ್ದ ಇಮಾಮ್ ಉಲ್ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿಕೊಂಡರು. ನಂತರ ಬ್ಯಾಟಿಂಗ್‌ಗೆ ಬಂದ ಹಾರ್ದಿಕ್ ಪಾಂಡ್ಯ 8 ರನ್ ಗಳಿಸಿ ನಿರ್ಗಮಿಸಿದರು. ಆದರೆ ಆಗಲೇ ಭಾರತ ವಿಜಯದ ಹೊಸ್ತಿಲಲ್ಲಿತ್ತು. ಅಕ್ಷರ್ ಪಟೇಲ್ (3)ಗೆ ಹೆಚ್ಚು ಕೆಲಸ ಉಳಿದಿರಲಿಲ್ಲ.

51ನೇ ಶತಕ ಸಿಡಿಸಿದ ಕಿಂಗ್ ಕೊಹ್ಲಿ: ಕಳೆದ ಕೆಲವು ಪಂದ್ಯಗಳಿಂದ ಲಯ ಕಂಡುಕೊಳ್ಳಲು ಪರದಾಡುತ್ತಿದ್ದ ವಿರಾಟ್ ಕೊಹ್ಲಿ ತಾಳ್ಮೆ ಹಾಗೂ ■6ನೇ ಪುಟಕ್ಕೆ





ಮುಗಿಲು ಮುಟ್ಟಿದ ಸಂಭ್ರಮಾಚರಣೆ

ದುಬೈನಲ್ಲಿ ನಡೆದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸುತ್ತಿದ್ದಂತೆಯೇ ಕರ್ನಾಟಕ ಸೇರಿದಂತೆ ದೇಶಾದ್ಯಂತ ಸಂಭ್ರಮಾಚರಣೆ ಮುಗಿಲು ಮುಟ್ಟಿತ್ತು. ಅಸಂಖ್ಯಾತ ಕ್ರಿಕೆಟ್ ಅಭಿಮಾನಿಗಳು ಸಿಹಿ ಹಂಚಿ ಕೊಹ್ಲಿ ಸೇರಿದಂತೆ ನೆಚ್ಚಿನ ಆಟಗಾರರಿಗೆ ಜೈಕಾರ ಕೂಗುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ಅಜರುದ್ದೀನ್ ದಾಖಲೆ ಮುರಿದ ಕೊಹ್ಲಿ

ಚಾಂಪಿಯನ್ಸ್ ಟ್ರೋಫಿಯ ಎ ಗುಂಪಿನ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ 158 ಕ್ಯಾಚ್‌ಗಳನ್ನು ಪಡೆಯುವ ಮೂಲಕ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್ ಅತಿ ಹೆಚ್ಚು ಕ್ಯಾಚ್ ಪಡೆದ ಫೀಲ್ಡರ್ ಎನಿಸಿಕೊಂಡರು. ಈ ಮೂಲಕ ಮೊಹಮ್ಮದ್ ಅಜರುದ್ದೀನ್ ಅವರ ದಾಖಲೆಯನ್ನು ಹಿಂದಿಕ್ಕಿದರು. 47ನೇ ಓವರ್‌ನಲ್ಲಿ ಕುಲದೀಪ್ ಯಾದವ್ ಅವರ ಬೌಲಿಂಗ್‌ನಲ್ಲಿ ನಸೀಮ್ ಶಾ ಅವರ ಕ್ಯಾಚ್ ಪಡೆಯುವ ಮೂಲಕ ಕೊಹ್ಲಿ ಈ ದಾಖಲೆ ಮಾಡಿದರು. ಅಂತಿಮ ಓವರ್‌ನಲ್ಲಿ ಖುಶ್ದಿಲ್ ಷಾ ಅವರ ಕ್ಯಾಚ್ ಪಡೆದು ಕ್ಯಾಚ್‌ಗಳ ಸಂಖ್ಯೆಯನ್ನು ಹಿಗ್ಗಿಸಿಕೊಂಡರು. ಮೊಹಮ್ಮದ್ ಅಜರುದ್ದೀನ್ (156) ಸಚಿನ್ ತೆಂಡೂಲ್ಕರ್ (140), ರಾಹುಲ್ ದ್ರಾವಿಡ್ (124) ಮತ್ತು ಸುರೇಶ್ ರೈನಾ (102) ಕ್ಯಾಚ್ ಪಡೆದಿರುವ ಭಾರತದ ಇತರ ಆಟಗಾರರು.

14000 ರನ್ ಪೂರೈಸಿ ಕೊಹ್ಲಿ ವಿಶ್ವ ದಾಖಲೆ

ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ವೇಗವಾಗಿ 14 ಸಾವಿರ ರನ್ ಪೂರೈಸಿ ವಿಶ್ವದಾಖಲೆ ಬರೆದಿದ್ದಾರೆ. ಚಾಂಪಿಯನ್ಸ್ ಟ್ರೋಫಿಯ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ 15 ರನ್ ಬಾರಿಸುವ ಮೂಲಕ ಈ ವಿಶ್ವ ದಾಖಲೆ ಬರೆದಿದ್ದಾರೆ. ಕೊಹ್ಲಿ ಈವರೆಗೂ ಒಟ್ಟು 298 ಪಂದ್ಯಗಳ ಪೈಕಿ 287 ಇನ್ನಿಂಗ್ಸ್‌ನಲ್ಲಿ 14 ಸಾವಿರ ರನ್ ಕಲೆ ಹಾಕಿದ್ದಾರೆ. ಇದೇ ವೇಳೆ ಏಕದಿನದಲ್ಲಿ 14 ಸಾವಿರ ರನ್ ಪೂರೈಸಿದ 3ನೇ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ. ಇದಕ್ಕೂ ಮೊದಲು ಈ ದಾಖಲೆ ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿತ್ತು. 350 ಇನ್ನಿಂಗ್ಸ್‌ಗಳಲ್ಲಿ ಸಚಿನ್ 14 ಸಾವಿರ ರನ್ ಪೂರೈಸಿದ್ದರು. ಸಚಿನ್ ನಂತರ ಶ್ರೀಲಂಕಾದ ಮಾಜಿ ಕ್ರಿಕೆಟಿಗ ಕುಮಾರ್ ಸಂಗಕ್ಕಾರ 14,000 ರನ್ ಗಡಿ ದಾಟಿದ 2ನೇ ಆಟಗಾರ ಎನಿಸಿದ್ದಾರೆ. 378 ಇನ್ನಿಂಗ್ಸ್ ಗಳಲ್ಲಿ ಸಂಗಕ್ಕಾರ ಈ ದಾಖಲೆ ಬರೆದಿದ್ದರು.

ಏ. 8, 9ರಂದು ಎಐಸಿಸಿ ಅಧಿವೇಶನ

ನವದೆಹಲಿ, ಫೆ.23– ಬಿಜೆಪಿಯ ಜನವಿರೋಧಿ ನೀತಿಗಳು ಒಡ್ಡಿರುವ ಸವಾಲು ಗಳು ಮತ್ತು ಪಕ್ಷದ ಭವಿಷ್ಯದ ಹಾದಿಯ ಕುರಿತು ಚರ್ಚಿಸಲು ಏಪ್ರಿಲ್ 8 ಮತ್ತು 9ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಎಐಸಿಸಿ ಅಧಿವೇಶನ ನಡೆಸುವುದಾಗಿ ಕಾಂಗ್ರೆಸ್ ಭಾನುವಾರ ಪ್ರಕಟಿಸಿದೆ.

ಈ ಕುರಿತು ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಮುಂಬರುವ ಅಧಿವೇಶನವು ನಿರ್ಣಾಯಕ ಚರ್ಚೆಗಳಿಗೆ ವೇದಿಕೆಯೊದಗಿಸಲಿದೆ. ಮಾತ್ರವಲ್ಲ, ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ಮತ್ತು ದೇಶಕ್ಕೆ ಪರ್ಯಾಯ ದೃಷ್ಟಿಕೋನವನ್ನು ಪ್ರಸ್ತುತಪಡಿಸುವ ಕಾಂಗ್ರೆಸ್ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸುತ್ತದೆ' ಎಂದು ಹೇಳಿದ್ದಾರೆ. ಏ.8ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆ ನಡೆಯಲಿದೆ. ಮರುದಿನ (ಏ.9) ಎಐಸಿಸಿ ಪ್ರತಿನಿಧಿಗಳ ಸಭೆ ■6ನೇ ಪುಟಕ್ಕೆ

ಬಾಹ್ಯಾಕಾಶ ವಲಯದಲ್ಲಿ ಇಸ್ರೋ ಯಶಸ್ಸಿನ ವ್ಯಾಪ್ತಿ ವಿಶಾಲವಾಗಿದೆ

ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಮೋದಿ ಶ್ಲಾಘನೆ

ನವದೆಹಲಿ, ಫೆ.23– ಬಾಹ್ಯಾಕಾಶ ವಲಯದಲ್ಲಿ ನಮ್ಮ ಯಶಸ್ಸಿನ ಪಟ್ಟಿ ಹೆಚ್ಚು ಉದ್ದವಾಗಿದೆ. ಉಡಾವಣಾ ವಾಹನಗಳ ತಯಾರಿಕೆಯಾಗಿರಲಿ, ಚಂದ್ರಯಾನ, ಮಂಗಳಯಾನ, ಆದಿತ್ಯ ಎಲ್ –1ರ ಯಶಸ್ಸಾಗಿರಲಿ ಅಥವಾ ಒಂದೇ ರಾಕೆಟ್‌ನಿಂದ ಒಂದೇ ಬಾರಿಗೆ 104 ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಅಭೂತಪೂರ್ವ ಧ್ಯೇಯವಾಗಿರಲಿ. ಇಸ್ರೋ ಯಶಸ್ಸಿನ ವ್ಯಾಪ್ತಿ ವಿಶಾಲವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.



ಮನ್ ಕೀ ಬಾತ್‌ನಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷಗಳಲ್ಲಿ ಸುಮಾರು 460 ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ. ಇವುಗಳಲ್ಲಿ ಇತರ ದೇಶಗಳ ಅನೇಕ ಉಪಗ್ರಹಗಳು ಸಹ ಸೇರಿವೆ. ಕಳೆದ ತಿಂಗಳು ದೇಶವು ಇಸ್ರೋದ 100ನೇ ರಾಕೆಟ್ ಉಡಾವಣೆಗೆ ಸಾಕ್ಷಿಯಾಯಿತು. ಇದು ಕೇವಲ ಒಂದು ಸಂಖ್ಯೆಯಲ್ಲ. ಪ್ರತಿದಿನ ಬಾಹ್ಯಾಕಾಶ ವಿಜ್ಞಾನದಲ್ಲಿ ಹೊಸ ಎತ್ತರವನ್ನು ಮುಟ್ಟುವ ನಮ್ಮ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದರು. ■6ನೇ ಪುಟಕ್ಕೆ

ಉದಯಗಿರಿ ಠಾಣೆ ಮುಂದೆ ಗಲಭೆ ಪ್ರಕರಣ

ಇಂದಿನ ರಾಷ್ಟ್ರ ಸುರಕ್ಷಾ ಸಮಿತಿ, ದಲಿತ ಮಹಾಸಭಾ ರ್‍ಯಾಲಿಗಳಿಗೆ ಅನುಮತಿ ನಿರಾಕರಣೆ

ಮೈಸೂರು, ಫೆ.23(ಎಂಟಿವೈ)– ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಫೆ.10ರಂದು ನಡೆದ ಗಲಭೆ ಪ್ರಕರಣವನ್ನು ಖಂಡಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ಮೈಸೂರು ಚಲೋ ಹಾಗೂ ದಲಿತ ಮಹಾಸಭಾ ಸಂಘಟನೆ ಸಮುದಾಯವೊಂದರ ವಿರುದ್ಧ ತಪ್ಪು ಮಾಹಿತಿ ನೀಡಲಾಗುತ್ತಿದೆ ಎಂದು ಆರೋಪಿಸಿ ಸಮಾವೇಶ ನಡೆಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ನಾಳೆ (ಫೆ.24) ಮೈಸೂರಿನಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ–163ರ ಬಿಎನ್‌ಎಸ್‌ಎಸ್ ನಿಯಮ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಿ, ಸಭೆ ಹಾಗೂ ಮೆರವಣಿಗೆ ನಡೆಸಲು ಅವಕಾಶ ನಿರಾಕರಿಸಲಾಗಿದೆ.

ಉದಯಗಿರಿ ಠಾಣೆ ಮೇಲೆ ನಡೆದ ಕಲ್ಲು ತೂರಾಟ ಪ್ರಕರಣವನ್ನು ಬಿಜೆಪಿ, ಕಾಂಗ್ರೆಸ್ ಹಾಗೂ ಕೆಲವು ಸಂಘಟನೆಗಳು ಜನ ಜಾಗೃತಿ ಸಮಾವೇಶ ಮತ್ತು ಮೈಸೂರು ಚಲೋ ಮೆರವಣಿಗೆ ನಡೆಸಲು ಮುಂದಾಗಿದ್ದು, ಒಂದೇ ಸ್ಥಳದಲ್ಲಿ ಪರ ಮತ್ತು ವಿರೋಧದ ನಿಲುವು ಹೊಂದಿರುವ ಸಂಘಟನೆಗಳು ಮತ್ತು ರಾಜಕೀಯ ಸಂಘಟನೆಗಳ ಕಾರ್ಯಕರ್ತರು ಪ್ರತ್ಯೇಕವಾಗಿ ಸಭೆ ನಡೆಸಲು ಬಯಸಿರುವುದರಿಂದ ಶಾಂತಿ–ಸುವ್ಯವಸ್ಥೆ ಕದಡುವ ಸಾಧ್ಯತೆ ಇರುವುದನ್ನು ಗುಪ್ತಚರ ಇಲಾಖೆ ಮಾಹಿತಿ ನೀಡಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರ ವ್ಯಾಪ್ತಿಯಲ್ಲಿ ಫೆ.23ರ ಮಧ್ಯರಾತ್ರಿಯಿಂದ ಫೆ.24ರ ಮಧ್ಯ ರಾತ್ರಿಯವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 163 ಬಿಎನ್‌ಎಸ್‌ಎಸ್ ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಲಾಗಿದೆ.

ಮೈಸೂರು ನಗರದಾದ್ಯಂತ ನಿಷೇಧಾಜ್ಞೆ ಜಾರಿ

ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಮೈಸೂರು ನಗರ ವ್ಯಾಪ್ತಿ ಯಲ್ಲಿ ನಾಳೆ (ಸೋಮವಾರ) ಯಾವುದೇ ಮೆರವಣಿಗೆ, ಪ್ರತಿಭಟನೆ, ವಾಹನ ರ್‍ಯಾಲಿ ನಡೆಸುವುದಕ್ಕೆ ನಿರ್ಬಂಧ ಹೇರಲಾಗಿದೆ. ಅಲ್ಲದೇ ಪರ ಮತ್ತು ವಿರೋಧದ ಘೋಷಣೆ ಕೂಗುವುದು, ಐದು ಜನರಿಗಿಂತ ಹೆಚ್ಚಿನ ಜನ ಗುಂಪು ಸೇರುವುದು, ಯಾವುದೇ ಬಹಿರಂಗ ಸಭೆ–ಸಮಾರಂಭ ನಡೆಸುವುದು, ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕ ಬಳಕೆ, ಫ್ಲೆಕ್ಸ್ , ಬ್ಯಾನರ್ ಅಳವಡಿಕೆ, ಕರಪತ್ರ ಹಂಚುವಿಕೆ, ಮೂರ್ತಿ ಮೆರವಣಿಗೆ ಹಾಗೂ ಗುಪ್ತವಾಗಿ ■6ನೇ ಪುಟಕ್ಕೆ

ದೆಹಲಿ ವಿರೋಧ ಪಕ್ಷದ ನಾಯಕಿಯಾಗಿ ಅತಿಶಿ

ನವದೆಹಲಿ, ಫೆ.23– ದೆಹಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕಿಯಾಗಿ ದೆಹಲಿ ಮಾಜಿ ಸಿಎಂ ಅತಿಶಿ ಅವರನ್ನು ಆಯ್ಕೆ ಮಾಡಲಾಗಿದೆ.



ಈ ಹುದ್ದೆಗೆ ಮಹಿಳೆಯೊಬ್ಬರು ಆಯ್ಕೆಯಾಗಿರುವುದು ಇದೇ ಮೊದಲು. ಅಷ್ಟೇ ಅಲ್ಲದೇ ಮುಂಬರುವ ವಿಧಾನ ಸಭಾ ಅಧಿವೇಶನದ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳಾ ವಿರೋಧ ಪಕ್ಷದ ನಾಯಕಿಯೊಬ್ಬರು ದೆಹಲಿ ಮುಖ್ಯಮಂತ್ರಿಯನ್ನು ಎದುರಿಸಲಿದ್ದಾರೆ.

ಭಾನುವಾರ ನಡೆದ ಎಎಪಿ ಶಾಸಕಾಂಗ ಸಭೆಯಲ್ಲಿ ಅತಿಶಿ ಅವರನ್ನು ವಿರೋಧ ಪಕ್ಷದ ನಾಯಕಿಯಾಗಿ ಆಯ್ಕೆ ಮಾಡಲಾಯಿತು. ಶಾಸಕ ಸಂಜೀವ್ ಝಾ ಅವರು ಪ್ರಮುಖ ಹುದ್ದೆಗೆ ಅತಿಶಿ ಅವರ ಹೆಸರನ್ನು ಪ್ರಸ್ತಾಪಿಸಿದರು.

ನನ್ನ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಮತ್ತು ಶಾಸಕಾಂಗ ಪಕ್ಷಕ್ಕೆ ಧನ್ಯವಾದಗಳು. ಬಲವಾದ ವಿರೋಧ ಪಕ್ಷವು ಜನರ ಪರವಾಗಿ ಧ್ವನಿಯನ್ನು ಎತ್ತುತ್ತದೆ. ಬಿಜೆಪಿ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸುವಂತೆ ಆಮ್ ಆದ್ಮಿ ಪಕ್ಷ ನೋಡಿಕೊಳ್ಳುತ್ತದೆ ಎಂದು ಅತಿಶಿ ತಿಳಿಸಿದ್ದಾರೆ. ದೆಹಲಿ ವಿಧಾನಸಭೆಯ ಮೊದಲ ಅಧಿವೇಶನ ಸೋಮವಾರ ಆರಂಭವಾಗಲಿದೆ. ■6ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ನಿಯಮ ಪಾಲಿಸಿದ್ದರೂ ನೋಟಿಸ್; ತಪ್ಪು ಸರಿಪಡಿಸಲು ಪೊಲೀಸ್ ಇಲಾಖೆ ವಿನೂತನ ವ್ಯವಸ್ಥೆ



ಎಡಿಜಿಪಿ ಶರತ್ ಚಂದ್ರ ಸ್ಪಷ್ಟನೆ

● ಸೀಟ್ ಬೆಲ್ಟ್ ಹಾಕಿದ್ದರೂ ನೋಟಿಸ್ ● ಮನೆಯಲ್ಲೆ ಕಾರು ನಿಲ್ಲಿಸಿದ್ದರೂ ನೋಟಿಸ್ ● adgpcts@bgl.vsnl.net.in ವಿಳಾಸಕ್ಕೆ ದೂರು ನೀಡಿ ● ಪೊಲೀಸ್ ಆಯುಕ್ತರು ಇಲ್ಲವೆ, ಎಸ್ಪಿ ಕಚೇರಿಗೆ ದೂರು ನೀಡಿ

ಮೈಸೂರು, ಫೆ.23(ಬಿಎಲ್‌ಯು)– ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಳವಡಿಸಿರುವ ಎಐ (ಕೃತಕ ಬುದ್ಧಿಮತ್ತೆ) ಕ್ಯಾಮರಾಗಳ ತಾಂತ್ರಿಕ ದೋಷದಿಂದ ಸಂಚಾರ ನಿಯಮ ಉಲ್ಲಂಘನೆ ಮಾಡದಿದ್ದರೂ ವಾಹನ ಚಾಲಕರಿಗೆ ನೋಟಿಸ್ ಜಾರಿ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ವಾಹನ ಚಾಲಕರು ಪೊಲೀಸ್ ಇಲಾಖೆಯ ಇ ಮೇಲ್, ನಗರ ಪೊಲೀಸ್ ಆಯುಕ್ತರ ಕಚೇರಿ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ದೂರು ನೀಡಬಹುದು ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಕೆ.ವಿ.ಶರತ್ ಚಂದ್ರ ಪರಿಹಾರ ಮಾರ್ಗೋಪಾಯ ತಿಳಿಸಿದ್ದಾರೆ.

ಮೈಸೂರು ಬೆಂಗಳೂರು ಎಕ್ಸ್ ಪ್ರೆಸ್ ವೇನಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ ಸೀಟ್ ಬೆಲ್ಟ್ ಧರಿಸಿ, ಅತಿ ವೇಗದ ಚಾಲನೆ ಮಾಡದೆ ಎಲ್ಲಾ ರೀತಿಯ ಸಂಚಾರ ನಿಮಯ ಪಾಲಿಸುತ್ತಿದ್ದರೂ ಬಹಳಷ್ಟು ವಾಹನ ಚಾಲಕರಿಗೆ ಸಂಚಾರ ನಿಯಮ ಉಲ್ಲಂಘನೆ ಮಾಡಲಾಗಿದೆ ಎಂದು ಪೊಲೀಸ್ ಇಲಾಖೆಯಿಂದ ನೋಟಿಸ್ ಜಾರಿಯಾಗುತ್ತಿದೆ.



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಳವಡಿಸಿರುವ ಎಐ ಕ್ಯಾಮರಾಗಳು.

ಎಕ್ಸ್‌ಪ್ರೆಸ್ ಹೈವೆ ಕ್ಯಾಮರಾ ತಾಂತ್ರಿಕ ಸಮಸ್ಯೆಗೆ ಹಲವು ಕಾರಣ

ಹರಿಯಾಣದ ಗುರಂಗಾವ್ ಮೂಲದ ಟೆಕ್ಸಿಡೆಲ್ ಕಂಪನಿ ಮೈಸೂರು–ಬೆಂಗಳೂರು ಎಕ್ಸ್ ಪ್ರೆಸ್ ವೇ ನ ಮೂರು ಸ್ಥಳಗಳಲ್ಲಿ ಒಟ್ಟು 24 ಸ್ವಯಂ ಚಾಲಿತ ನಂಬರ್ ಪ್ಲೇಟ್ ಗುರುತು ದಾಖಲಿಸುವ ಕ್ಯಾಮರಾ (ಎಎನ್ ಪಿಆರ್) ಅಳವಡಿಸಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಟೆಕ್ಸಿಡೆಲ್ ಕಂಪನಿಯ ಸಿಇಒ ಆಕಾಶ್ ಸಿನ್ಹಾ, ನಾವು ಅಳವಡಿಸಿರುವ ಕ್ಯಾಮರಾಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದರೆ ಅದರ ವಿವರ ಕಂಟ್ರೋಲ್ ರೂಂನಲ್ಲಿ ದಾಖಲಾಗುತ್ತದೆ. ಅಲ್ಲಿನ ಸಿಬ್ಬಂದಿ ಪರಿಶೀಲನೆ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಮೈಸೂರು–ಬೆಂಗಳೂರು ಎಕ್ಸ್ ಪ್ರೆಸ್ ವೇ ನಲ್ಲಿ ಒಂದು ಸ್ಥಳದಲ್ಲಿ 8 ಕ್ಯಾಮರಾಗಳಂತೆ ಮೂರು ಸ್ಥಳಗಳಲ್ಲಿ ಒಟ್ಟು 24 ಕ್ಯಾಮರಾಗಳನ್ನು ಅಳಡಿಸಲಾಗಿದೆ ಎಂದು ತಿಳಿಸಿದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ನಾವು 24 ಕ್ಯಾಮರಾಗಳನ್ನು ಅಳವಡಿಸಿದ್ದು, ಕೆಲವು ಖಾಸಗಿ ಕಂಪನಿಗಳ ಸಹ ಭಾಗಿತ್ವದಲ್ಲಿ ಪೊಲೀಸ್ ಇಲಾಖೆ ಅಳವಡಿಸಿರುವ ತಾಂತ್ರಿಕ ದೋಷಕ್ಕೆ ನಾವು ಕಾರಣರಲ್ಲ ಎಂದು ಆಕಾಶ್ ಸಿನ್ಹಾ ಸ್ಪಷ್ಟನೆ ನೀಡಿದರು.

ಹವಾಮಾನ ವೈಪರಿತ್ಯ ಸಂದರ್ಭದಲ್ಲಿ ಮಾತ್ರ ನಮ್ಮ ಕ್ಯಾಮರಾಗಳಲ್ಲಿ ತಾಂತ್ರಿಕ ದೋಷ ಎದುರಾಗುತ್ತದೆ. ಮುಂಜಾನೆ 5 ಗಂಟೆಯಿಂದ 6 ಗಂಟೆವರೆಗೆ ದಟ್ಟ ಮಂಜು ಆವರಿಸಿದ ಸಂದರ್ಭದಲ್ಲಿ ಇಂತಹ ತಾಂತ್ರಿಕ ದೋಷವಾಗುತ್ತದೆ. ದಟ್ಟ ಮಂಜು ಕ್ಯಾಮರಾ ಲೆನ್ಸ್ ಮೇಲೆ ಕೂತಾಗ ಅಸ್ಪಷ್ಟವಾಗುತ್ತದೆ. ಬಿಸಿಲಿನ ಕಿರಣ ಹೆಚ್ಚಾದಾಗ ಸರಿಯಾಗುತ್ತದೆ ಎಂದರು. ಇದೇ ರೀತಿಯ ಅತಿಯಾದ ಸೂರ್ಯನ ಬೆಳಕು ಇದ್ದಾಗ ಕೂಡ ತಾಂತ್ರಿಕ ಸಮಸ್ಯೆ ಎದುರಾಗುತ್ತದೆ. ಇದು ಬಿಟ್ಟು ನಮ್ಮ ಕ್ಯಾಮರಾಗಳಲ್ಲಿ ಯಾವುದೇ ತಾಂತ್ರಿಕ ದೋಷ ಉಂಟಾಗುವುದಿಲ್ಲ. ಅಷ್ಟಾಗಿಯೂ ನಮ್ಮ ಕ್ಯಾಮರಾದಿಂದ ತಾಂತ್ರಿಕ ದೋಷವಿದೆ ತಿಳಿಸಿದರೆ ನಾವು ಅದನ್ನು ಸರಿಪಡಿಸುತ್ತೇವೆ ಎಂದು ಆಕಾಶ್ ಸಿನ್ಹಾ ಭರವಸೆ ನೀಡಿದರು.

ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಶರತ್ ಚಂದ್ರ ಅವರು, ಇಂತಹ ಸಂದರ್ಭದಲ್ಲಿ ವಾಹನ ಚಾಲಕರು ಆತಂಕಗೊಳ್ಳದೆ ಎಡಿಜಿಪಿ ಕಚೇರಿಯ ಇ ಮೇಲ್ ವಿಳಾಸ adgpcts@bgl.vsnl.net.inಗೆ ದೂರು ನೀಡಬಹುದು. ಇಲ್ಲವೆ ನಗರ ಪೊಲೀಸ್ ಆಯುಕ್ತರ ಕಚೇರಿ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ದೂರು ನೀಡಬಹುದು ಎಂದು ಸಲಹೆ ನೀಡಿದ್ದಾರೆ.

ವಾಹನ ಚಾಲಕರ ಸಂಚಾರ ನಿಯಮ ಉಲ್ಲಂಘನೆ ಕುರಿತಂತೆ ನಿಖರ ಮಾಹಿತಿ ದಾಖಲಿಸಲು ಪೊಲೀಸ್ ಸಿಬ್ಬಂದಿ ಕೊರತೆ ಇದೆ ಎಂದು ತಿಳಿಸಿದರು.

ಮೈಸೂರು ಬೆಂಗಳೂರು ಎಕ್ಸ್ ಪ್ರೆಸ್ ವೇನಲ್ಲಿ ಎಐ ಆಧಾರಿತ ಸ್ವಯಂ ಚಾಲಿತ ನಂಬರ್ ಪ್ಲೇಟ್ ಗುರುತು ದಾಖಲಿಸುವ ಕ್ಯಾಮರಾ ಅಳವಡಿಸಲಾಗಿದೆ. ಆದರೆ ಈ ಕ್ಯಾಮರಾಗಳ ತಾಂತ್ರಿಕ ದೋಷದಿಂದ ಯಾವುದೇ ರೀತಿಯ ಸಂಚಾರ ನಿಯಮ ಉಲ್ಲಂಘನೆ ಮಾಡದಿದ್ದರೂ ದಂಡ ಪಾವತಿ ಮಾಡುವಂತೆ ಕೆಲವರಿಗೆ ನೋಟಿಸ್ ಜಾರಿ ಮಾಡಲಾಗುತ್ತಿದೆ. ■6ನೇ ಪುಟಕ್ಕೆ

ಹಾಸನ ಮಿತ್ರ

ಬಸ್ ಹರಿದು ಧರ್ಮಸ್ಥಳಕ್ಕೆ ಹೊರಟಿದ್ದ ಇಬ್ಬರು ಪಾದಯಾತ್ರಿಗಳ ದುರ್ಮರಣ



ಸುರೇಶ್ ಕುಮಾರ್

ಹಾಸನ,ಫೆ.23–ಶಿವರಾತ್ರಿಗಾಗಿ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಪಾದಚಾರಿಗಳ ಮೇಲೆ ಖಾಸಗಿ ಬಸ್ ಹರಿದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಓರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಹಾಸನ ತಾಲೂಕಿನ ಕೆಂಚಟ್ಟಹಳ್ಳಿ ಬಳಿ ನಡೆದಿದೆ.
ಮಂಡ್ಯ ಜಿಲ್ಲೆ, ಕೆಆರ್ ಪೇಟೆ ತಾಲೂಕಿನ ಅಗನೂರು ಗ್ರಾಮದ ಸುರೇಶ್ (60), ಕುಮಾರ್ (55) ಮೃತ ದುರ್ದೈವಿಗಳು. ಘಟನೆಯಲ್ಲಿ ಗಂಭೀರ ಗಾಯಗೊಂಡ ದಿನೇಶ್‌ಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.
ಹಾಸನ ನಗರದ ಹೊರವಲಯದ ಹೆಚ್‌ಕೆಎಸ್ ಇಂಟರ್‌ನ್ಯಾಷನಲ್ ಶಾಲೆ ಬಳಿ ಘಟನೆ ನಡೆದಿದ್ದು, ಅತಿವೇಗವಾಗಿ ಬಂದ ಬಸ್ ಚಾಲಕ ಪ್ರಯಾಣಿಕರನ್ನು ಬಿಟ್ಟು ಅಲ್ಲಿಂದ ಪರಾರಿಯಾಗಿದ್ದಾನೆ. ವಿಷಯ ತಿಳಿದು ಹಾಸನ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಬಸ್ ಜಪ್ತಿ ಮಾಡಿದ್ದಾರೆ. ಚೆನ್ನೈಗೆ ಹೋಗಬೇಕಿದ್ದ ಪ್ರಯಾಣಿಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ಹೊರಟ ದ್ವಾರದ ಮೇಲೆ ಬಸ್ ಹರಿದಿದೆ. ಈ ವೇಳೆ ಒಬ್ಬಾತ ಸ್ಥಳದಲ್ಲೇ ಮೃತಪಟ್ಟರೆ, ಇನ್ನೊಬ್ಬಾತ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಮತ್ತೊಬ್ಬನ ಸ್ಥಿತಿಯೂ ಗಂಭೀರವಾಗಿದ್ದು ಆತನಿಗೆ ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ತಿರುಪತಿ ಬೆಟ್ಟ ಹತ್ತುವಾಗ ಹೃದಯಾಘಾತ: ವ್ಯಕ್ತಿ ಸಾವು




ಹೊಳೆನರಸೀಪುರ: ಗೆಳೆಯರೊಂದಿಗೆ ತಿರುಪತಿ ದರ್ಶನಕ್ಕೆ ತೆರಳಿದ್ದ ಪಟ್ಟಣದ ನಿವಾಸಿ ಆರ್.ಪ್ರಶಾಂತ್ (48) ಭಾನುವಾರ ಬೆಳಗ್ಗೆ ಬೆಟ್ಟ ಹತ್ತುವಾಗ ತೀವ್ರ ಹೃದಯಾಘಾತಕ್ಕೊಳಗಾಗಿ ಮೃತಪಟ್ಟಿದ್ದಾರೆ. ಮೃತರು ಬಸವೇಶ್ವರ ಬೀದಿ ನಿವಾಸಿ, ದೇವಾಂಗ ಸಮಾಜದ ನಿವೃತ್ತ ಶಿಕ್ಷಕ ರಾಜಣ್ಣ ಅವರ ಪುತ್ರ. ಅವರು ಎಲೆಕ್ಟ್ರಾನಿಕ್ ವಸ್ತುಗಳ ಅಂಗಡಿ ನಡೆಸುತ್ತಿದ್ದರು. ಹೃದಯಾಘಾತವಾದಾಗ ತಿರುಪತಿಯಲ್ಲಿರುವ ಕರ್ನಾಟಕ ವಿಶೇಷಾಧಿಕಾರಿ ಕೆ.ಕೋದಂಡರಾಮ್ ಅವರು ತಕ್ಷಣ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರಾದರೂ ಸ್ಪಂದಿಸಲಿಲ್ಲ ಎಂದು ಕುಟುಂಬದವರು ತಿಳಿಸಿದ್ದಾರೆ. ಇವರಿಗೆ ತಂದೆ, ಪತ್ನಿ, ಪುತ್ರಿ ಇದ್ದಾರೆ. ಭಾನುವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.

ಅಭಿಯಂತರ ಸಂಸ್ಥೆಯಿಂದ ಮೈಸೂರಲ್ಲಿ ಐದು ದಿನಗಳ ರಾಷ್ಟ್ರೀಯ ರಂಗ ಉತ್ಸವ

ಫೆ.26ರಿಂದ ದಿನಕ್ಕೊಂದು ನಾಟಕ ಪ್ರದರ್ಶನ

ಮೈಸೂರು, ಫೆ.23(ಜಿಎ)–ಇಂಜಿನಿಯರ್‌ಗಳೇ ಕಟ್ಟಿಕೊಂಡಿರುವ ಅಭಿಯಂತರರ ಸಂಸ್ಥೆ ವತಿಯಿಂದ ಫೆ.26ರಿಂದ ಮಾರ್ಚ್ 2ರವರೆಗೆ ನಗರದ ಕಲಾಮಂದಿರದ ಕಿರುರಂಗಮಂದಿರದಲ್ಲಿ 5 ದಿನಗಳ ರಾಷ್ಟ್ರೀಯ ರಂಗ ಉತ್ಸವ ಆಯೋಜಿಸಿದೆ.
ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು ಈ ವಿಷಯ ತಿಳಿಸಿ, ಫೆ.26ರ ಸಂಜೆ 6.30ಕ್ಕೆ ಹಿರಿಯ ಸಾಹಿತಿ ಡಾ.ಎಲ್.ಹನುಮಂತಯ್ಯ ಉತ್ಸವವನ್ನು ಉದ್ಘಾಟಿಸಲಿದ್ದಾರೆ. ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀನಿವಾಸ್ ಜಿ.ಕಪ್ಪಣ್ಣ ಅಧ್ಯಕ್ಷತೆ ವಹಿಸುವರು. ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ವೇದಿಕೆ ಕಾರ್ಯಕ್ರಮದ ನಂತರ ಸಂಜೆ 7 ಗಂಟೆಗೆ 'ಶಿವೋಹಂ' (ಕನ್ನಡ), 27ರಂದು ರಾತ್ರಿ 7ಕ್ಕೆ 'ಒಂದು ವಿಲಯ ಕಥೆ' (ಕನ್ನಡ), 28ರಂದು ರಾತ್ರಿ 7ಕ್ಕೆ 'ಬ್ಯಾಗ್ ಡ್ಯಾನ್ಸಿಂಗ್' (ಇಂಗ್ಲಿಷ್), ಮಾ.1ರಂದು ರಾತ್ರಿ 7ಕ್ಕೆ 'ತೂ ಜಿಂದಾ ಭೀ ಹೈ' (ಹಿಂದಿ), ಮಾ.2ರಂದು ರಾತ್ರಿ7 ಗಂಟೆಗೆ 'ಕಳಸೂತ್ರ' (ಕನ್ನಡ) ನಾಟಕ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.
ಸುದ್ದಿಗೋಷ್ಠಿಯಲ್ಲಿ ರಾಜಶೇಖರ ಕದಂಬ, ಯಶವಂತ್, ಪ್ರಶಾಂತ್‌ಗೌಡ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಪ್ರಧಾನಿ ಮೋದಿಗೆ ಎರಡನೇ ಪ್ರಧಾನ ಕಾರ್ಯದರ್ಶಿಯಾಗಿ ಆರ್‌ಬಿಐ ಮಾಜಿ ಗವರ್ನರ್ ಶಕ್ತಿಕಾಂತ ದಾಸ್ ನೇಮಕ



ಶಕ್ತಿಕಾಂತ ದಾಸ್

ನವದೆಹಲಿ, ಫೆ.23–ಆರ್‌ಬಿಐ ಮಾಜಿ ಗವರ್ನರ್ ಶಕ್ತಿಕಾಂತ ದಾಸ್ ಅವರನ್ನು ಪ್ರಧಾನಿ ಮೋದಿ ಅವರ 2ನೇ ಪ್ರಧಾನ ಕಾರ್ಯದರ್ಶಿಯಾಗಿ ಕೇಂದ್ರ ಸರ್ಕಾರ ನೇಮಿಸಿದೆ. ನಿವೃತ್ತ ಐಎಎಸ್ ಅಧಿಕಾರಿ ಶಕ್ತಿಕಾಂತ ದಾಸ್ ಅವರನ್ನು ಪ್ರಧಾನ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ–2 ಆಗಿ ನೇಮಕ ಮಾಡಲು ಸಂಪುಟ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ. ಅವರು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ಸುತ್ತೋಲೆ ತಿಳಿಸಿದೆ.
ಶಕ್ತಿಕಾಂತ್ ಅವರು ಡಿಸೆಂಬರ್ 2018ರಿಂದ ಡಿಸೆಂಬರ್ 2024ರವರೆಗೆ 6 ವರ್ಷಗಳ ಕಾಲ ಆರ್‌ಬಿಐ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದರು. ಕಳೆದ ಡಿಸೆಂಬರ್ 10ರಂದು ನಿವೃತ್ತರಾಗಿದ್ದರು. 1980ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಶಕ್ತಿಕಾಂತ್ ದಾಸ್, ಕಳೆದ 38 ವರ್ಷಗಳಲ್ಲಿ ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಅಪಾರ ಅನುಭವ ಹೊಂದಿದ್ದಾರೆ. ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಹಣಕಾಸು, ತೆರಿಗೆ, ಕೈಗಾರಿಕೆಗಳು ಮತ್ತು ಮೂಲಸೌಕರ್ಯ ಇತರ ಕ್ಷೇತ್ರಗಳಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಫೆ.27ರಿಂದ ಸಾಂಸ್ಕೃತಿಕ ಸ್ಪರ್ಧೆ ಸ್ಪೆಕ್ಟ್ರಾ ಉತ್ಸವ

ಮೈಸೂರು, ಫೆ.23(ಜಿಎ)–ಹಿಂದೂಸ್ತಾನ್ ಕಾಲೇಜಿನಲ್ಲಿ ಫೆ.27 ಮತ್ತು 28ರಂದು ಡಾ.ಕೆ.ಸಿ.ಜಿ.ವರ್ಗೀಸ್ ಸ್ಮರಣಾರ್ಥ ಟ್ರೋಫಿಯ ಎರಡು ದಿನದ ರಾಷ್ಟ್ರ ಮಟ್ಟದ ಅಂತರ ಕಾಲೇಜು ವ್ಯವಹಾರ ನಿರ್ವಹಣೆ, ಮಾಹಿತಿ ತಂತ್ರಜ್ಞಾನ, ವಾಣಿಜ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆ ಸ್ಪೆಕ್ಟ್ರಾ ಉತ್ಸವ ಹಮ್ಮಿಕೊಳ್ಳಲಾಗಿದೆ.
ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಸಿ.ಜೆ.ಪ್ರಿಯಾ ಈ ವಿಷಯ ತಿಳಿಸಿ, ಫೆ.27ರಂದು ಬೆಳಗ್ಗೆ 9.30ಕ್ಕೆ ಬಸಂತ್ ಕನ್ವೆನ್ಷನ್ ಹಾಲ್‌ನಲ್ಲಿ ಉದ್ಘಾಟನೆ ನಡೆಯಲಿದೆ, ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿಯ ಈಗಿನ ನಿರ್ದೇಶಕರಾದ ಪ್ರೊ.ಕೆ.ಮಂಟೆಲಿಂಗು ಮುಖ್ಯ ಅತಿಥಿಗಳಾಗಿರುವರು. ಇನ್ನು ಫೆ.28ರ ಸಂಜೆ 6.30ಕ್ಕೆ ಬಸಂತ್ ಕನ್ವೆನ್ಷನ್ ಹಾಲ್‌ನಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಈ ವೇಳೆ ಪೊಸಿಟ್ಟಾ ಬಯೋಕೆಮಿಸ್ಟ್ರಿ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಡಾ.ಎಂ.ಧರ್ಮಪಾಲ್ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.
ಈ ಎರಡು ದಿನಗಳ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಸ್ಪರ್ಧೆಯಲ್ಲಿ ವಿವಿಧ ರೀತಿಯ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಒಳಗೊಂಡಂತೆ ಒಟ್ಟು 14 ಸ್ಪರ್ಧೆಗಳು ನಡೆಯಲಿವೆ. ಅತಿ ಹೆಚ್ಚು ಸ್ಪರ್ಧೆಯಲ್ಲಿ ವಿಜೇತರಾದ ತಂಡಕ್ಕೆ 20 ಸಾವಿರ ನಗದು, ಎರಡನೇ ತಂಡಕ್ಕೆ 10 ಸಾವಿರ, ಎರಡೂ ತಂಡಕ್ಕೆ ಟ್ರೋಫಿ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಶಿವಕುಮಾರ್, ಈಶ್ವರ್, ರಘುನಂದನ್ ಉಪಸ್ಥಿತರಿದ್ದರು.

ಇಂದು 'ಭೀಮ್ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಫೆ.23(ಎಂಟಿವೈ)–ಮೈಸೂರಿನ ಪುರಭವನದಲ್ಲಿ ಫೆ.24ರ ಬೆಳಗ್ಗೆ 11ಕ್ಕೆ ಸಂವಿಧಾನ ದಿನಾಚರಣೆ ಕಾರ್ಯಕ್ರಮದ ಪ್ರಯುಕ್ತ ಭೀಮ್ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಭೀಮ್ ಸೇನೆ ರಾಜ್ಯ ಉಸ್ತುವಾರಿ ಜಿ.ಎನ್.ದೇವರಾಜ್ ತಿಳಿಸಿದ್ದಾರೆ.
ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 19 ಮಂದಿಗೆ ಈ ಬಾರಿ ಭೀಮ್ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಫೆ.24ರಂದು ಬೆಳಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಾಂಧಿನಗರದ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಸಂಸದ ಯದುವೀರ ಒಡೆಯರ್ ಉದ್ಘಾಟಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮುಖ್ಯ ಭಾಷಣ ಮಾಡಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ ಹಾಗೂ ಇನ್ನಿತರರು ಅತಿಥಿಗಳಾಗಿ ಪಾಲ್ಗೊಳ್ಳುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ವಹಿಸಲಿದ್ದಾರೆ ಎಂದು ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಭೀಮ್ ಸೇನೆಯ ಎಂ.ಎಸ್.ವೈರಮುಡಿ, ವಿ.ಎಂ.ಮಲ್ಲೇಶ್, ಕೆ.ಸಿ.ಸಿದ್ದರಾಮು, ಮಹಮ್ಮದ್ ಶಫಿ ಇನ್ನಿತರರು ಇದ್ದರು.

ಪ್ರಜ್ವಲ್ ಅವಿರೋಧ ಆಯ್ಕೆ



ಮೈಸೂರು: ರೋಟರಿ ಮೈಸೂರು, ರೋಟರ‍್ಯಾಕ್ಟ್ ಮೈಸೂರು ಸದಸ್ಯ ಆರ್.ಪ್ರಜ್ವಲ್, 2025–26ರ ರೋಟರಿ ಅಂತರರಾಷ್ಟ್ರೀಯ ಜಿಲ್ಲೆ 3181ರ ಜಿಲ್ಲಾ ರೋಟರ‍್ಯಾಕ್ಟ್ ಪ್ರತಿನಿಧಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ವೈವಿಧ್ಯಮಯ ಕಾರ್ಯಕ್ರಮ ನೀಡುತ್ತಿರುವುದು ಮೈಸೂರು ಆಕಾಶವಾಣಿಯ ಹೆಗ್ಗಳಿಕೆ

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಣ್ಣನೆ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಸಮುದ್ಯತಾ ಶ್ರೋತೃ ಸಂಘವು ಭಾನುವಾರ ಏರ್ಪಡಿಸಿದ್ದ 13ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸದ್ಭಾವನಾ ಪ್ರಶಸ್ತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಫೆ.23(ಜಿಎ)–ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಮೈಸೂರು ಆಕಾಶವಾಣಿಯ ಹೆಗ್ಗಳಿಕೆಯಾಗಿದೆ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಣ್ಣಿಸಿದರು.
ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಸಮುದ್ಯತಾ ಶ್ರೋತೃ ಸಂಘವು ಏರ್ಪಡಿಸಿದ್ದ 13ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಆಕಾಶವಾಣಿಯು ಫೋನ್ ಇನ್, ಕೃಷಿ ರಂಗ, ಶಾಸ್ತ್ರೀಯ ಸಂಗೀತ, ಚಲನಚಿತ್ರಗೀತೆಗಳು, ವಿಚಾರ ವಿನಿಮಯ ಸೇರಿದಂತೆ ಹಲವಾರು ಅತ್ಯುತ್ತಮ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದು, ಬೆಳಗಿನ ಜಾವ 5.55ರಿಂದ ರಾತ್ರಿ 11.10 ರವರೆಗೆ ನಿರಂತರವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುತ್ತಿರುವುದು ಮೈಸೂರು ಆಕಾಶವಾಣಿಯ ಹೆಗ್ಗಳಿಕೆ ಎಂದರು.
ಮೈಸೂರು ಆಕಾಶವಾಣಿ ಕೇಂದ್ರದ ಉಪನಿರ್ದೇಶಕ ಎಸ್.ಎಸ್.ಉಮೇಶ್ ಮಾತನಾಡಿ, ಆಕಾಶವಾಣಿ ಕೇಳುಗರೇ ಸೇರಿಕೊಂಡು ಸಂಘ ರಚಿಸಿಕೊಂಡು ನಮ್ಮೊಂದಿಗೆ ಸೇರಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಅಪರೂಪದ ಸಂಗತಿ ಇದಾಗಿದ್ದು, ಬೇರೆಲ್ಲಿಯೂ ಈ ರೀತಿಯ ಸಂಘಗಳು ಇದ್ದಂತಿಲ್ಲ. ಇದ್ದರೂ ಇಷ್ಟೊಂದು ಸಕ್ರಿಯವಾಗಿರುವುದನ್ನು ನಾನು ಕಂಡಿಲ್ಲ, ಕೇಳಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.
ಮೈಸೂರು ಆಕಾಶವಾಣಿಗೆ 90 ವರ್ಷ ಆಗಿರುವ ಹಿನ್ನೆಲೆಯಲ್ಲಿ ಮಾ.7 ರಂದು ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಪ್ರಸಾರ ಭಾರತಿ ಮಹಾ ನಿರ್ದೇಶಕರು, ಸುತ್ತೂರು ಶ್ರೀಗಳು, ರಾಜವಂಶಸ್ಥೆ ಪ್ರಮೋದಾದೇವಿ, ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರನ್ನು ಆಹ್ವಾನಿಸಲಾಗಿದೆ ಎಂದರು.
ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಸದಭಿರುಚಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಏಕೈಕ ಮಾಧ್ಯಮ ಆಕಾಶವಾಣಿ. ಇದರಿಂದಾಗಿಯೇ ಸಾಕಷ್ಟು ಮಂದಿ ಮನೆಯಲ್ಲಿ ಇರುವಾಗ, ವಾಯುವಿಹಾರ ಮಾಡುವಾಗ ಅಷ್ಟೇ ಏಕೆ ಕಾರುಗಳಲ್ಲಿ ಪ್ರಯಾಣ ಮಾಡುವಾಗ ಆಕಾಶವಾಣಿ ಕಾರ್ಯಕ್ರಮಗಳನ್ನು ಆಲಿಸುತ್ತಾರೆ ಎಂದರು.
ಪ್ರಕೃತಿ ವಿಕೋಪಗಳು ನಡೆದಾಗ ಜನರನ್ನು ತಲುಪುದು ಆಕಾಶವಾಣಿ ಮಾತ್ರ. ಕನ್ನಡದ ವರನಟ ಡಾ.ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದಟ್ಟ ಕಾಡಿನಲ್ಲಿಟ್ಟಿದ್ದಾಗ ಆಕಾಶವಾಣಿಯ ಮೂಲಕ ಸಂದೇಶ ಕಳುಹಿಸಲಾಗಿತ್ತು ಎಂದು ಅವರು ಸ್ಮರಿಸಿದರು.
ಕಾರ್ಯಕ್ರಮದಲ್ಲಿ ಸದ್ಭಾವನಾ ಪ್ರಶಸ್ತಿಯನ್ನು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ವಿಭಾಗದ ಲೆಕ್ಕ ಪರಿಶೋಧನಾಕಾರಿ, ಸಾಹಿತಿ ಕಾಳಿಹುಂಡಿ ಶಿವಕುಮಾರ್ ಅವರಿಗೆ ನೀಡಲಾಯಿತು. ಹೊಯ್ಸಳ ಕನ್ನಡ ಸಂಘದ ಕಾರ್ಯದರ್ಶಿ ರಂಗನಾಥ್ ಮೈಸೂರು, ನಂಜನಗೂಡು ತಾಲೂಕಿನ ಮಲ್ಲಹಳ್ಳಿಯಲ್ಲಿ ಜೇಡಿಮಣ್ಣು ಮಾರಾಟ ಮಾಡುವ ಮೂಲಕ ಬದುಕು ರೂಪಿಸಿಕೊಂಡಿರುವ ಸಿದ್ದಮ್ಮ, ಅಗ್ನಿಶಾಮಕದಳದಲ್ಲಿ ಕರ್ತವ್ಯ ನಿರ್ವಹಿಸುತ್ತಾ ಮುಖ್ಯಮಂತ್ರಿ ಹಾಗೂ ರಾಷ್ಟ್ರಪತಿಗಳ ಪದಕಕ್ಕೆ ಭಾಜನರಾಗಿರುವ ಬಾಬುರಾವ್ ಅವರನ್ನು ಸನ್ಮಾನಿಸಲಾಯಿತು. ಹೆಚ್ಚು ಅಂಕ ಪಡೆದಿರುವ ಪಿಯುಸಿಯ ಬಿ.ಎಸ್. ವರ್ಷಿತಾ, ಎಸ್‌ಎಸ್‌ಎಲ್‌ಸಿಯ ಎಸ್.ಸಂಜನಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘದ ಅಧ್ಯಕ್ಷ ವಿ.ಗೋವಿಂದಾಚಾರಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಟಿ.ಎನ್.ರಾಜೇಶ್ವರಿ, ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕ ಶ್ರೀನಿವಾಸ್, ಕೆ.ಪಿ. ವೀಣಾ, ಲೋಕೇಶ್ವರಿ, ಚಂದ್ರಕಲಾ, ಭಾಗ್ಯಲಕ್ಷ್ಮಿ, ಭಗವತಿ, ದುಗ್ಗಹಳ್ಳಿ ಪರಶಿವಮೂರ್ತಿ, ಶ್ರೀಧರ್, ಎಂ.ಆರ್. ಶ್ರೀಕಂಠ, ಶಶಿಕಲಾ ಪ್ರಸಾದ್, ಶ್ರುತಿ ಲಕ್ಷ್ಮಣ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು–ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಚುನಾವಣೆ ವಿಜೇತರಿಗೆ 'ಲಾ ಗೈಡ್'ನಿಂದ ಅಭಿನಂದನೆ




ಮೈಸೂರು–ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ವಿಜೇತರಾಗಿರುವ ಸದಸ್ಯರಿಗೆ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಬಳಗದ ವತಿಯಿಂದ ಆತ್ಮೀಯವಾಗಿ ಗೌರವಿಸಿ, ಸನ್ಮಾನಿಸಲಾಯಿತು.

ಮೈಸೂರು, ಫೆ.23–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ವಿಜೇತರಾಗಿರುವ ಸದಸ್ಯರಿಗೆ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಬಳಗದ ವತಿಯಿಂದ ಆತ್ಮೀಯವಾಗಿ ಗೌರವಿಸಿ, ಸನ್ಮಾನಿಸಲಾಯಿತು.
ಲಾಗೈಡ್ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರು ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ವಿ.ಶೇಷಾದ್ರಿ, ಉಪಾಧ್ಯಕ್ಷರಾದ ಯಂಕನಾಯಕ ಅವರಿಗೆ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಹಾರ ಹಾಕಿ ಗೌರವಿಸಿದರು.
ಇದೇ ವೇಳೆ ಮಾತನಾಡಿದ ಹೆಚ್.ಎನ್.ವೆಂಕಟೇಶ್ ಅವರು, ಸಹಕಾರ ಸಂಘದ ಮುಂದಿನ ಐದು ವರ್ಷಗಳ ಅವಧಿಗೆ ಚುನಾಯಿತರಾಗಿರುವ ಎಲ್ಲರೂ ಒಳ್ಳೆ ಕೆಲಸ ಮಾಡಿ ಎಂದು ಶುಭ ಹಾರೈಸಿ ಕಿವಿಮಾತು ಹೇಳಿದರು. ಇದೇ ವೇಳೆ ಸಂಘದ ನೂತನ ಸದಸ್ಯರಾದ ದೇವರಾಜೇಗೌಡ, ಅಭಿಲಾಷ್, ಪರಶಿವ ಮೂರ್ತಿ, ಪ್ರಕಾಶ್, ಸತೀಶ್ ಅವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಶಂಭು, ಮೈಸೂರು ಮಹಾ ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪ್ರಿಯ, ಮನು, ಜಯಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಅವಧಿ ವಿಸ್ತರಣೆ

ಮೈಸೂರು: 2024–2025ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ 'ಶುಲ್ಕ ಮರುಪಾವತಿ' ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಮಾ.10ರವರೆಗೆ ವಿಸ್ತರಿಸಲಾಗಿದೆ. www.https:ssp.post matric. karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು, ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಮಾಹಿತಿಗೆ www.https:bcwd. karnataka.gov.in ಸಂಪರ್ಕಿಸಬಹುದು. ಮಾಹಿತಿಗೆ ದೂ.ಸಂ. 8050 770005 ಸಂಪರ್ಕಿಸಬಹುದು.

ಖೋ ಖೋ ವಿಶ್ವಕಪ್ ವಿಜೇತೆ ಚೈತ್ರಾಗೆ ಸನ್ಮಾನ




ಶ್ರೀರಂಗಪಟ್ಟಣದ ಪರಿವರ್ತನಾ ವಸತಿ ಪದವಿಪೂರ್ವ ಕಾಲೇಜಿನಲ್ಲಿ 2025ರ ವಿಶ್ವಕಪ್ ವಿಜೇತ ಭಾರತೀಯ ಖೋ–ಖೋ ತಂಡದ ಭಾಗವಾಗಿದ್ದ ಚೈತ್ರಾ ಬಿ. ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ನಿರ್ದೇಶಕ ಮಂಜು ರಾಮ್, ಪರಿವರ್ತನಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಚೆನ್ನಕೇಶವ, ಅರ್ಜುನ ಅಕಾಡೆಮಿ ಫಾರ್ ಅಚೀವರ್ಸ್‌ನ ಸಂಸ್ಥಾಪಕ ಪಿ.ಕೆ.ಹರೀಶ್ ಇದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು: ಶ್ರೀರಾಂಪುರ ಪಪಂ ವ್ಯಾಪ್ತಿಯ ಡೇ–ನಲ್ಮ್‌ಯಡಿ ರಚಿಸಲಾದ ಮಹಿಳಾ ಸ್ವ–ಸಹಾಯ ಸಂಘಗಳಿಗೆ ಆಸ್ತಿ ತೆರಿಗೆ, ನೀರಿನ ತೆರಿಗೆಯನ್ನು ವಾರ್ಷಿಕ ಬೇಡಿಕೆಯನ್ನು ವಸೂಲಿ ಮಾಡಲು ಮಹಿಳಾ ಸ್ವ–ಸಹಾಯ ಗುಂಪುಗಳ ಸೇವೆಯನ್ನು ಸದರಿ ಸ್ವಸಹಾಯ ಗುಂಪುಗಳಿಗೆ ವಸೂಲಿಯಾದ ಮೊತ್ತದಲ್ಲಿ ಶೇ.5ರಷ್ಟು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಫೆ.25ರಂದು ಸಂಜೆ 4 ಗಂಟೆಯೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.02.2025 ಸೋಮವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪೂಷಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು:** ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯದರ್ಶನ ಮೇಳ, ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ವಲಯ ಪ್ರಮುಖ ಡಾ.ವಿ.ರಂಗನಾಥ್ ಅವರಿಂದ ಉಪನ್ಯಾಸ, ವಿಷಯ: ಭಾರತದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ, ಸ್ಥಳ: ಭಾರತೀಯ ವಿದ್ಯಾಭವನದ ಮುಂಭಾಗದ ನಿವೇಶನ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 8.30ಕ್ಕೆ.

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ ಮತ್ತು ಅಭಿನವ ಬೆಂಗಳೂರು:** 'ಕನ್ನಡವೆಂದರೆ ಬರಿ ನುಡಿಯಲ್ಲ ಅದಕ್ಕಿದೆ ವಿಜ್ಞಾನದ ಸ್ಪರ್ಶ' ಕುರಿತು ಎರಡು ದಿನಗಳ ಅಂತರ ಕಾಲೇಜು ವಿಚಾರ ಸಂಕಿರಣ, ತೋರಣ ನಾಂದಿ: ಬಹುಮುಖಿ ಚಿಂತಕರಾದ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಕ್ಷಿ ನುಡಿ: ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ ಟಿ.ವಿಜಯಲಕ್ಷ್ಮಿ ಮುರಳೀಧರ್, ನುಡಿ ತೋರಣ: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ, ವಿನ್ಯಾಸದ ನುಡಿ: ಅಭಿನವದ ನ. ರವಿಕುಮಾರ್, ನಂತರ ವಿಚಾರ ಸಂಕಿರಣ, ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾ ಸಂಸ್ಥೆ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಮೃತಾಂಶು ಟ್ರಸ್ಟ್ (ಮೈಸೂರು), ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ, ಕೆ.ಆರ್. ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಮಸೂರ (ಲೆನ್ಸ್) ಅಳವಡಿಕೆ, ಬಿಪಿ, ಶುಗರ್, ಇಸಿಜಿ ಪರೀಕ್ಷೆ, ಸ್ಥಳ: 2767, ಪಾಂಚಜನ್ಯ, 5ನೇ ಮೇನ್, ಮೇದರಕೇರಿ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ಭೀಮ್ ಸೇನೆ:** ಸಂವಿಧಾನ ದಿನಾಚರಣೆ, ಭೀಮ್ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಉರಿಲಿಂಗ ಪೆದ್ದಿ ಮಠದ ಪೀಠಾಧೀಶರಾದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಕೆ. ವಿವೇಕಾನಂದ, ಮುಖ್ಯ ಭಾಷಣ: ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಸ್ಥಳ: ಪುರಭವನ, ಬೆಳಗ್ಗೆ 11 ಗಂಟೆಗೆ.

■ **ದೇವರತ್ನ ಫೌಂಡೇಷನ್, ಚಾರ್ವಾಕ ಸೋಷಿಯಲ್ ಅಂಡ್ ಕಲ್ಚರಲ್ ಟ್ರಸ್ಟ್:** ಸಂವಿಧಾನ ಉತ್ಸವ, 75ನೇ ವರ್ಷಗಳ ವಜ್ರ ಮಹೋತ್ಸವ ಅಂಗವಾಗಿ ಗಿರೀಶ್ ಮಾಚಳ್ಳಿಯವರ ರಚನೆ ಮತ್ತು ನಿರ್ದೇಶನದ 'ಮನುಸ್ಮೃತಿ V/s ಭಾರತ ಸಂವಿಧಾನ' ನಾಟಕ ಪ್ರದರ್ಶನ ಹಾಗೂ ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ: ವಕೀಲರು ಮತ್ತು ಸಮಾಜದ ಮುಖಂಡರಾದ ಶಿವಪ್ರಕಾಶ್ ಎಂ.ಸಿ.ಹುಂಡಿ, ಮುಖ್ಯ ಭಾಷಣ: ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್, ವಿಷಯ: 'ಭಾರತ ಸಂವಿಧಾನ ಧರ್ಮ ವಿರೋಧಿಯೋ? ಅಥವಾ ದುಷ್ಟ ನಿಯಮಗಳ ವಿರೋಧಿಯೋ?', ಮುಖ್ಯ ಅತಿಥಿಗಳು: ಜಾನಪದ ಚಿಂತಕ ಪ್ರೊ. ಕಾಳೇಗೌಡ ನಾಗವಾರ, ರಂಗಾಯಣ ನಿರ್ದೇಶಕ ಸತೀಶ್ ತಿಪ್ಟೂರು, ಸಾಧಕರಿಗೆ ಸಂವಿಧಾನ ಸೇವಾರತ್ನ ಪ್ರಶಸ್ತಿ ಪ್ರದಾನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 4 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಸಿ.ಹೆಚ್.ಭಾಗ್ಯ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ–ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು–Indian Cancer Society, Karnataka Chapter, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಲೇಖಕರಾದ ಪ್ರೊ.ಕೆ.ಬಿ.ಪ್ರಭುಪ್ರಸಾದ್ ಅವರೊಂದಿಗೆ ದಿವಾಕರ ಹೆಗಡೆ ಅವರು ನಡೆಸಿದ್ದ ಸಂವಾದ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಜಿ.ಉಷಾ, ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ, **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ–ಪಿ.ರಮಾ, 12.45–ನಮ್ಮ ಆರೋಗ್ಯ–ರೋಗಿಗಳು ಮತ್ತು ವೈದ್ಯರ ಬಾಂಧವ್ಯ ಕುರಿತು ಹಿರಿಯ ಹೃದ್ರೋಗ ತಜ್ಞರಾದ ಡಾ.ಕೇಶವಮೂರ್ತಿ ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಪ್ರಗತಿಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆ ಕುರಿತು ಮಾತನಾಡುತ್ತಾರೆ ಡಾ. ಬೋರೇಗೌಡ. ಎಸ್.ಬಿ., 1.20–ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ: ಪ್ರಾಯೋಜಕರು–Indian Cancer Society, Karnataka Chapter, 1.25–ಭಾವಗೀತೆಗಳು–ಎ.ಎನ್.ಶೀಲಾ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಸತ್ಯನಾರಾಯಣ –ಕೀಬೋರ್ಡ್ ವಾದನ, 4.00–ಮಹಿಳಾರಂಗ, 4.45–ಹಿಂದಿ ಪಾಠ–ಪ್ರಸ್ತುತಿ: ಕಿಶೋರ್ ಎಂ.ಕಾಕಡೆ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ರೇಡಿಯೋ ಕಿಸಾನ್ ದಿನದ ಅಂಗವಾಗಿ ಮೈಸೂರಿನ ಆಯಿಷ್ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಾಗಿದ್ದ ವೇದ ಕೃಷಿ ಕಾರ್ಯಾಗಾರದಲ್ಲಿ ಕಿವಿ ಮಾತಿನ ಕಥೆ ಕೃಷಿಕರ ಜೊತೆ ಈ ವಿಷಯವಾಗಿ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಭಾಷಾ ವಿಜ್ಞಾನ ಪ್ರಾಧ್ಯಾಪಕರಾದ ಡಾ.ಎನ್.ಶ್ರೀದೇವಿ ಅವರು ಮಾಡಿದ್ದ ಭಾಷಣದ ಅವತರಣಿಕೆ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ–ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಶಿವಮಾಲಾ ಪ್ರಸಾರವಾಗಲಿದೆ. ಪ್ರಸ್ತುತ ಪಡಿಸುತ್ತಾರೆ –ಮೈಸೂರಿನ ಸವಿಗಾನ ಸಂಗೀತ ಶಾಲೆಯ ವಿದ್ಯಾರ್ಥಿಗಳು. ನಿರ್ದೇಶನ– ವಿದುಷಿ ಗಾಯತ್ರಿ ಸತ್ಯನಾರಾಯಣ, 9.30 –ಕರ್ನಾಟಕ ಶಾಸ್ತ್ರೀಯ ಸಂಗೀತ: ಗಣೇಶ್ ಕುಮರೇಶ್–ಯುಗಳ ವೈಯೋಲಿನ್ ವಾದನ, 10.00–ರೂಪಕ, ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು.

ಹುಯಿಲಾಳು, ಮೈಸೂರು ತಾ॥

■ **ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–2024–25, ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಪ್ರೊ. ಸೋಮಣ್ಣ, ವಿಶೇಷ ಆಹ್ವಾನಿತರು, ನಾಗವಾಲ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಾಯಪ್ಪ ಎಂ.ಡಿ, ಹುಯಿಲಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ನಾಗಸುಂದರ್, ಸಮಾರೋಪ ಭಾಷಣ: ಚನ್ನಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕ ಜಗದೀಶ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಯಿಲಾಳು, ಮಧ್ಯಾಹ್ನ 12 ಗಂಟೆಗೆ.

ಮೈಸೂರು ಮಿತ್ರ


ಚಾಮುಂಡಿಬೆಟ್ಟದ ಸಾರ್ವಜನಿಕ ಪ್ರೌಢಶಾಲೆ ಸಹಾಯಾರ್ಥ ಸಂಗೀತ ಕಾರ್ಯಕ್ರಮ

ಗಾನ ಮಾಧುರ್ಯಕ್ಕೆ ಶ್ರೋತೃಗಳಲ್ಲಿ ಹೊಮ್ಮಿದ ಸಂತಸದ ಹೊನಲು

● ರೋಟರಿ ಐವರಿ ಮೈಸೂರು ವತಿಯಿಂದ ಆಯೋಜನೆ ● ಸುಸಿದ ಕನ್ನಡ ಚಿತ್ರಗೀತೆಗಳ ಇಂಪು




ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಗಾಯನ ಸಾದರಪಡಿಸಿದ ಗಾಯಕರನ್ನು ಚಿತ್ರದಲ್ಲಿ ಕಾಣಬಹುದು.



ವಿ.ಎನ್.ಪ್ರಸಾದ್ ಗಾಯನ



ಹಂಸಿನಿ ಕುಮಾರ್ ಹಾಡಿದ ಸಂದರ್ಭ.



ಇಂಪಾಗಿ ಹಾಡಿದ ಡಾ.ನಟಶೇಖರ್

ಮೈಸೂರು,ಫೆ.23(ಪಿಎಂ)– ಭಾವ ತುಂಬಿದ ಗಾನ ಮಾಧುರ್ಯದ ನಶೆಗೆ ಶ್ರೋತೃಗಳಲ್ಲಿ ಹೊಮ್ಮಿದ ಸಂತಸದ ಹೊನಲು... ಕಂಚಿನ ಕಂಠದ ಪಿ.ಬಿ.ಶ್ರೀನಿವಾಸ್ ಹಾಗೂ ಗಾನ ಗಂಧರ್ವ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಹಾಡುಗಳ ಸಾದರಪಡಿಸಿದ ಗಾಯಕರು, ಹೀಗೆ ನಾದಮಯ ಲೋಕದಲ್ಲಿ ಸಭಿಕರು ತೇಲಾಡುವಂತೆ ಮಾಡಿದರು.

ಮೈಸೂರಿನ ಕಲಾಮಂದಿರದಲ್ಲಿ ವಿ.ಎನ್.ಪ್ರಸಾದ್ ಮತ್ತು ಅವರ ತಂಡದಿಂದ 'ಪಿಬಿಎಸ್–ಎಸ್‌ಪಿಬಿ ಸಂಗೀತ ಸಂಜೆ' ಶೀರ್ಷಿಕೆಯಡಿ ಭಾನುವಾರ ನಡೆದ ಗಾಯನ ಕಾರ್ಯಕ್ರಮದ ಮೋಡಿ ಇದು. ಕರೋಕೆ ಸಂಗೀತದಲ್ಲಿ ಗಾಯಕರು ಸಾದರಪಡಿಸಿದ ಕನ್ನಡ ಚಿತ್ರಗೀತೆಗಳ ಇಂಪಿಗೆ ಸಭಿಕರು ಮನಸೋತರು.

ದಿವಂಗತ ಟಿ.ಎಸ್.ಸುಬ್ಬಣ್ಣ ಅವರು ಸ್ಥಾಪಿಸಿರುವ ಚಾಮುಂಡಿ ಬೆಟ್ಟದ ಸಾರ್ವಜನಿಕ ಪ್ರೌಢಶಾಲೆಗೆ ಕಾಂಪೌಂಡ್ ಗೋಡೆ ಹಾಗೂ ಗೇಟ್‌ಗಳ ನಿರ್ಮಾಣಕ್ಕೆ ತಗಲುವ 12 ಲಕ್ಷ ರೂ. ವೆಚ್ಚ ಭರಿಸುವ ಸಲುವಾಗಿ ಸಹಾಯಾರ್ಥವಾಗಿ ರೋಟರಿ ಐವರಿ ಸಿಟಿ ಮೈಸೂರು ವತಿಯಿಂದ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ರೋಟರಿ ಸದಸ್ಯರೂ ಆದ ಗಾಯಕ ವಿ.ಎನ್.ಪ್ರಸಾದ್ ಸೇರಿದಂತೆ 6 ಮಂದಿ ಗಾಯಕರು ತಮ್ಮ ಗಾಯನ ಲೋಕದಲ್ಲಿ ಸಭಿಕರನ್ನು ರಂಜಿಸಿದರು.

ವಿ.ಎನ್.ಪ್ರಸಾದ್, ವೈದ್ಯ ಡಾ.ಎಂ.ಎಸ್.ನಟಶೇಖರ್, ವೃತ್ತಿಪರ ಗಾಯಕ ತ್ಯಾಗರಾಜ್, ಎಸ್‌ಬಿಐ ನಿವೃತ್ತ ಅಧಿಕಾರಿ ಜಯಂತಿ ಭಟ್, ರೈಲ್ವೆ ಅಧಿಕಾರಿಯೂ ಆದ ಗಾಯಕಿ ಹಂಸಿನಿ ಕುಮಾರ್ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಯೂ ಆದ ಉದಯೋನ್ಮುಖ ಗಾಯಕ ರುತ್ವಿಕ್ ರಾಜ್ ತಮ್ಮ ಕಂಠಸಿರಿಯಲ್ಲಿ ಹಾಡುಗಳನ್ನು ಪ್ರಸ್ತುತಪಡಿಸಿ ಸಭಿಕರ ಮನ ತಣಿಸಿದರು.

'ಹೊಸ ಬೆಳಕು' ಚಿತ್ರದ 'ತೆರೆದಿದೆ ಮನೆ ಓ ಬಾ ಅತಿಥಿ' ಗೀತೆಯನ್ನು ಹಂಸಿನಿ ಕುಮಾರ್ ಮತ್ತು ತ್ಯಾಗರಾಜ್ ಸುಶ್ರಾವ್ಯವಾಗಿ ಹಾಡುವ ಮೂಲಕ ಸಭಿಕರನ್ನು ಸ್ವಾಗತಿಸಿ, ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ಬಳಿಕ 'ಮಾಂಗಲ್ಯಭಾಗ್ಯ' ಚಿತ್ರದ ಎಸ್.ಪಿ.ಬಾಲಸುಬ್ರಹ್ಮಣ್ಯಂ ಕಂಠಸಿರಿಯಲ್ಲಿ ಮೂಡಿಬಂದಿರುವ 'ಆಸೆಯ ಭಾವ ಒಲವಿನ ಜೀವ...' ಗೀತೆಯನ್ನು ಭಾವ ತುಂಬಿ ಹಾಡಿದ ವಿ.ಎನ್.ಪ್ರಸಾದ್, ಸಭಿಕರ ಮನಕ್ಕೆ ಲಗ್ಗೆಯಿಟ್ಟು ಸಭಿಕರೂ ಹಾಡನ್ನು ಗುನುಗುವಂತೆ ಮಾಡಿ ಚಪ್ಪಾಳೆ ಸಹ ಗಿಟ್ಟಿಸಿದರು.

'ಶರಪಂಜರ' ಚಿತ್ರದ ಪಿ.ಬಿ.ಶ್ರೀನಿವಾಸ್ ಅವರು ಹಾಡಿರುವ 'ಕೊಡಗಿನ ಕಾವೇರಿ... ಕಾವೇರಿ ನೀ ಬೆಡಗಿನ ವಯ್ಯಾರಿ...' ಗೀತೆಯನ್ನು ತ್ಯಾಗರಾಜ್ ಮತ್ತು ಹಂಸಿನಿ ಕುಮಾರ್ ಸಾದರಪಡಿಸಿ ಸಭಿಕರ ಮನಕ್ಕೆ ಮುದ ನೀಡಿದರು. ನಂತರ 'ಗಂಧದ ಗುಡಿ' ಚಿತ್ರದ 'ನಾವಾಡುವ ನುಡಿಯೇ ಕನ್ನಡ ನುಡಿ... ನಾವಿರುವಾ ತಾಣವೇ ಗಂಧದ ಗುಡಿ...' ಗೀತೆಯನ್ನು ಡಾ.ನಟಶೇಖರ್ ಹಾಡುವ ಮೂಲಕ ಕನ್ನಡ ನಾಡಿನ ಅರಣ್ಯ ಹಾಗೂ ವನ್ಯಜೀವಿ ಸಂಪತ್ತನ್ನು ಕಣ್ಮುಂದೆ ತಂದರು.

'ನ್ಯಾಯವೇ ದೇವರು' ಚಿತ್ರದ 'ಆಕಾಶವೇ ಬೀಳಲಿ ಮೇಲೆ ನಾನೆಂದು ನಿನ್ನವನು...' ಗೀತೆಯನ್ನು ವಿ.ಎನ್.ಪ್ರಸಾದ್, 'ಮನ ಮೆಚ್ಚಿದ ಮಡದಿ' ಚಿತ್ರದ 'ತುಟಿಯ ಮೇಲೆ ತುಂಟ ಕಿರುನಗೆ...' ಗೀತೆಯನ್ನು ವಿ.ಎನ್.ಪ್ರಸಾದ್ ಮತ್ತು ಜಯಂತಿ ಭಟ್, 'ದೇವರ ಗುಡಿ' ಚಿತ್ರದ 'ಮಾಮರವೆಲ್ಲೋ ಕೋಗಿಲೆ ಎಲ್ಲೋ...' ಗೀತೆಯನ್ನು ಡಾ.ನಟಶೇಖರ್, 'ಬೆಳ್ಳಿ ಮೋಡ' ಚಿತ್ರದ 'ಬೆಳ್ಳಿ ಮೋಡದ ಅಂಚಿನಿಂದ...' ಗೀತೆಯನ್ನು ಹಂಸಿನಿ ಕುಮಾರ್ ಮತ್ತು ವಿ.ಎನ್.ಪ್ರಸಾದ್, 'ಗಾಂಧಿನಗರ' ಚಿತ್ರದ 'ನೀ ಮುಡಿದ ಮಲ್ಲಿಗೆ ಹೂವಿನ ಮಾಲೆ...' ಗೀತೆಯನ್ನು ತ್ಯಾಗರಾಜ್ ಮತ್ತು ಜಯಂತಿ ಭಟ್, 'ಎರಡು ಕನಸು' ಚಿತ್ರದ 'ತಮ್ ನಮ್ ಮನಸು ಮಿಡಿಯುತಿದೆ...' ಗೀತೆಯನ್ನು ರುತ್ವಿಕ್ ರಾಜ್ ಮತ್ತು ಹಂಸಿನಿ ಕುಮಾರ್ ಪ್ರಸ್ತುತಪಡಿಸಿ ಸಭಿಕರ ಮನ ಗೆದ್ದು, ಅಭಿಮಾನದ ಚಪ್ಪಾಳೆಗೆ ಪಾತ್ರರಾದರು.

25ಕ್ಕೂ ಹೆಚ್ಚಿನ ಹಾಡುಗಳನ್ನು ಸಾದರಪಡಿಸಿ ಗಾನ ರಸಧಾರೆ ಹರಿಸಿದ ಗಾಯಕರು ಸಭಿಕರ ಮನಕ್ಕೆ ಮೋಡಿ ಮಾಡಿದರು. ಗಾಯಕರು ಹಾಡುಗಳನ್ನು ಸಾದರಪಡಿಸುತ್ತಿದ್ದರೆ, ಹಿಂಬದಿಯ ಎಲ್‌ಇಡಿ ಪರದೆಯಲ್ಲಿ ಆಯಾಯ ಗೀತೆಗಳ ವಿಡಿಯೋ ಪ್ರಸಾರ ಮಾಡಿದ್ದು ವಿಶೇಷವಾಗಿತ್ತು ಬಿಎಐ ಮಹಿಳಾ ವಿಭಾಗವಾದ 'ಸ್ಫೂರ್ತಿ'ಯ ಶಾಂತಿ ಭಾರದ್ವಾಜ್ ಕಾರ್ಯಕ್ರಮ ನಿರೂಪಿಸಿದರು.

ರಸ್ತೆ ಬದಿಯಲ್ಲಿನ ಗಿಡಗಳಿಗೆ ನೀರುಣಿಸಿದ 'ಟೀಂ ಮೈಸೂರು'



'ಟೀಂ ಮೈಸೂರು' ವತಿಯಿಂದ ನೆಟ್ಟಿರುವ ಗಿಡಗಳಿಗೆ ದಾನಿಗಳ ನೆರವಿನೊಂದಿಗೆ ನೀರುಣಿಸಲಾಯಿತು.

ಮೈಸೂರು, ಫೆ.23(ಎಸ್‌ಬಿಡಿ)– ಬೇಸಿಗೆ ಹಿನ್ನೆಲೆಯಲ್ಲಿ ರಸ್ತೆ ಬದಿಯ ಗಿಡಗಳಿಗೆ ದಾನಿಗಳ ನೆರವಿನೊಂದಿಗೆ ನೀರುಣಿಸುವ ಸತ್ಕಾರ್ಯವನ್ನು 'ಟೀಂ ಮೈಸೂರು' ಸಂಘಟನೆ ಕೈಗೊಂಡಿದೆ.

'ಹಸಿರು ಮೈಸೂರು' ಅಭಿಯಾನದಡಿ ನಗರದ ವಿವಿಧ ರಸ್ತೆಗಳ ಬದಿಯಲ್ಲಿ ತಂಡದ ವತಿಯಿಂದ ನೆಟ್ಟು ಪೋಷಿಸಿದ್ದ ನೂರಾರು ಗಿಡಗಳು ಬಿರು ಬೇಸಿಗೆಯಲ್ಲಿ ಒಣಗದಂತೆ ಟ್ಯಾಂಕರ್ ಮೂಲಕ ನೀರುಣಿಸಲಾಗುತ್ತಿದೆ. ಈ ಕಾರ್ಯಕ್ಕೆ ದಾನಿಗಳು ತಮ್ಮ ಹುಟ್ಟುಹಬ್ಬ ಇನ್ನಿತರ ಸಮಾರಂಭಗಳ ನೆಪದಲ್ಲಿ ನೆರವಾಗುತ್ತಿದ್ದಾರೆ.

ರಮಾವಿಲಾಸ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ ಹಾಗೂ ಜಾಕಿ ಕ್ವಾರ್ಟರ್ಸ್ ಬಳಿ ನೆಟ್ಟಿರುವ ನೂರಾರು ಗಿಡಗಳಿಗೆ ಟೀಂ ಮೈಸೂರು ಸದಸ್ಯ ಹರೀಶ್ ಪುತ್ರಿ ಭಾನುಪ್ರಿಯಾ ಹುಟ್ಟುಹಬ್ಬದ ಪ್ರಯುಕ್ತ ಟ್ಯಾಂಕರ್ ಮೂಲಕ ನೀರುಣಿಸಲಾಯಿತು. ಈ ವೇಳೆ ಹರೀಶ್, ಅವರ ಪತ್ನಿ ಸೌಮ್ಯ, ಪುತ್ರಿ ರಕ್ಷಾ ಇದ್ದರು. ಹಾಗೆಯೇ ವಿಜಯನಗರ 4ನೇ ಹಂತದ ಮುಖ್ಯ ರಸ್ತೆಯಲ್ಲಿ ನೆಡಲಾಗಿರುವ 135 ಗಿಡಗಳಿಗೆ ಸ್ಥಳೀಯ ನಿವಾಸಿ ಗೌರಿ ಅವರ ನೆರವಿನಿಂದ ನೀರುಣಿಸಲಾಯಿತು.

ದಾನಿಗಳೊಂದಿಗೆ ತಂಡದ ಸದಸ್ಯರಾದ ಗೋಕುಲ್ ಗೋವರ್ಧನ್, ಕಿರಣ್ ಜೈರಾಮಗೌಡ, ಬಾಲಕೃಷ್ಣ, ಮಂಜು ಹುಣಸೂರು, ಹೇಮಂತ್, ಸೃಜನ್, ನವೀನ್, ಹಿರಿಯಣ್ಣ ಅನಿಲ್ ಜೈನ್, ಹರೀಶ್ ಶೆಟ್ಟಿ, ಬಸವರಾಜು, ಬಸವರಾಜು ಬಳ್ಳಾರಿ, ತ್ರಿಮೂರ್ತಿ, ಸಹನಾ, ಸುಕೃತ, ಪ್ರಿಯಾಂಕ, ವಿಸ್ಮಯ ಮತ್ತಿತರರು ಗಿಡಗಳಿಗೆ ಜೀವಜಲ ನೀಡಲು ಕೈ ಜೋಡಿಸಿದರು.

ಗಿಡ ನೆಡುವುದರ ಜೊತೆಗೆ ಅವುಗಳನ್ನು ಕೆಲ ವರ್ಷಗಳ ಕಾಲ ಪೋಷಿಸಬೇಕು. ಅದರಲ್ಲೂ ಬೇಸಿಗೆಯಲ್ಲಿ ನಿಯಮಿತವಾಗಿ ನೀರುಣಿಸುವುದು ಬಹಳ ಮುಖ್ಯ. ಎಲ್ಲಾ ಗಿಡಗಳಿಗೂ ನಗರ ಪಾಲಿಕೆ ವತಿಯಿಂದ ನೀರುಣಿಸಲು ಸಾಧ್ಯವಿಲ್ಲ. ಈ ಸತ್ಕಾರ್ಯದಲ್ಲಿ ಎಲ್ಲರೂ ಭಾಗಿಯಾಗಬೇಕಿದೆ. ಆ ನಿಟ್ಟಿನಲ್ಲಿ ಟೀಂ ಮೈಸೂರು ವತಿಯಿಂದ ನೆಟ್ಟಿರುವ ಗಿಡಗಳಿಗೆ ನೀರು ನೀಡಲು ಸಾಕಷ್ಟು ಮಂದಿ ಕೈಜೋಡಿಸುತ್ತಿದ್ದಾರೆ. ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಇನ್ನಿತರ ಸಮಾರಂಭಗಳ ಪ್ರಯುಕ್ತ ಗಿಡಗಳಿಗೆ ನೀರು ನೀಡಲು ಸಹಾಯ ಮಾಡುತ್ತಿದ್ದಾರೆ. ಈ ಸಹೃದಯಿಗಳಿಗೆ ತಂಡದ ವತಿಯಿಂದ ಕೃತಜ್ಞತೆಗಳು ಎಂದು ಗೋಕುಲ್ ಗೋವರ್ಧನ್ ತಿಳಿಸಿದ್ದಾರೆ.

ಪದವಿ ಕಾಲೇಜು ಪ್ರವೇಶಾತಿ ಅಭಿಯಾನ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವತಿಯಿಂದ ಪ್ರವೇಶಾತಿ ಅಭಿಯಾನ ನಡೆಸಲಾಯಿತು.

ಮೈಸೂರು, ಫೆ.23(ಎಸ್‌ಬಿಡಿ)– ನಗರದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವತಿಯಿಂದ ಪದವಿ ಕಾಲೇಜು ಪ್ರವೇಶಾತಿ ಅಭಿಯಾನ ನಡೆಸಲಾಯಿತು.

ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಉನ್ನತ ಶಿಕ್ಷಣ ಇಲಾಖೆ ಈ ವಿಶೇಷ ಅಭಿಯಾನಕ್ಕೆ ಆದೇಶಿಸಿರುವ ಹಿನ್ನೆಲೆಯಲ್ಲಿ ಮಹಾರಾಣಿ ವಿಜ್ಞಾನ ಕಾಲೇಜು ಪ್ರಾಂಶುಪಾಲರ ನೇತೃತ್ವದಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ಉನ್ನತ ಶಿಕ್ಷಣದ ಬಗ್ಗೆ ಅರಿವು ಮೂಡಿಸಲಾಯಿತು.

ಸರ್ಕಾರಿ ಮಹಾರಾಣಿ ಪದವಿ ಪೂರ್ವ ಕಾಲೇಜು, ದೇವರಾಜ ಬಾಲಕಿಯರ ಪದವಿ ಪೂರ್ವ ಕಾಲೇಜು, ಚಾಮರಾಜ ಜೋಡಿ ರಸ್ತೆಯ ಬಾಲಕಿಯರ ಪದವಿ ಪೂರ್ವ ಕಾಲೇಜು, ನಿಜಾಮಿಯಾ ಕಾಲೇಜು ಹಾಗೂ ರಾಜೀವ್‌ನಗರದ ಸರ್ಕಾರಿ ಕಾಲೇಜುಗಳಲ್ಲಿ ಅಭಿಯಾನ ನಡೆಸಿ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ 2025–26ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಿ, ಯಾವುದೇ ಕಾರಣಕ್ಕೂ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸಲಹೆ ನೀಡಲಾಯಿತು.

ಈ ವೇಳೆ ಪ್ರಾಂಶುಪಾಲ ಡಾ.ಅಬ್ದುಲ್ ರಹಿಮಾನ್, ಸಂಚಾಲಕ ಡಾ.ಸಿ.ಎಸ್.ಕೆಂಡಗಣ್ಣೇಗೌಡ, ಡಾ.ಟಿ.ಶೀಲಾ, ಡಾ.ಎಸ್.ಸಿದ್ದೇಗೌಡ, ಡಾ.ವಿ.ಆರ್.ರಮೇಶ ಬಾಬು, ಡಾ.ರೆಹಮತ್, ಸರ್ದಾರ್ ಹುಸೇನ್, ಮಮತಾದೇವಿ, ಡಾ.ವಿಂದುವಾಹಿನಿ, ಬೃಂದ, ಚೇತನ್ ಮಾಳಗಿ, ಚೇತನ್ ಹಂಜಿ, ಸಿದ್ದರಾಜು, ಡಾ.ರಾಮಚಂದ್ರ ಸೋಮಶೇಖರ್, ಡಾ. ಪರಶುರಾಮ ಮೂರ್ತಿ, ಡಾ.ಹೆಚ್.ಜೆ.ಭೀಮೇಶ್, ಡಾ.ನಟರಾಜ ಮತ್ತಿತರರು ಅಭಿಯಾನದಲ್ಲಿ ಭಾಗವಹಿಸಿದ್ದರು.

ತುಮಕೂರು ಜೆಡಿಎಸ್ ಮುಖಂಡನ ಕಾರು ಅಪಘಾತ; ಮಹಿಳೆ ಸಾವು

ಇಬ್ಬರಿಗೆ ಗಂಭೀರ ಗಾಯ

ತುಮಕೂರು, ಫೆ.23: ಕೆಲವು ದಿನಗಳ ಹಿಂದೆಯಷ್ಟೇ ಖರೀದಿ ಮಾಡಿದ್ದ ಹೊಸ ಕಾರಿನಲ್ಲಿ ಸಂಬಂಧಿಕರ ಮದುವೆಗೆ ಹೋಗಿದ್ದ ಪಾವಗಡದ ಸ್ಥಳೀಯ ಜೆಡಿಎಸ್ ಮುಖಂಡ ಶಿವಪ್ಪ ನಾಯಕ ಕಾರು ಅಪಘಾತಕ್ಕೀಡಾಗಿದ್ದು, ಒಬ್ಬ ಮಹಿಳೆ ಸಾವಿಗೀಡಾಗಿದ್ದಾರೆ. ಉಳಿದಂತೆ ಕಾರಿನಲ್ಲಿದ್ದ ಗಂಡ ಹೆಂಡತಿ ಗಂಭೀರ ಗಾಯಗೊಂಡಿದ್ದು, ಇಬ್ಬರನ್ನೂ ಸ್ಥಳೀಯರು ಆಸ್ಪತ್ರೆ ದಾಖಲಿಸಿದ್ದಾರೆ.

ಈ ಘಟನೆ ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಿಡಿಗೇಶಿ ಹೋಬಳಿಯ ಬೇಡತ್ತೂರು ಗೇಟ್ ಸಮೀಪ ಸಂಜೆ 6 ಗಂಟೆಗೆ ಸಂಭವಿಸಿದೆ. ಪಾವಗಡದ ಸ್ಥಳೀಯ ಜೆಡಿಎಸ್ ಮುಖಂಡ ಶಿವಪ್ಪ ನಾಯಕ ಹಾಗೂ ಅವರ ಧರ್ಮಪತ್ನಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮತ್ತೋರ್ವ ಮಹಿಳೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ. ಮೃತ ಮಹಿಳೆಯ ಬಗ್ಗೆ ಮಾಹಿತಿ ಇನ್ನೂ ಲಭ್ಯವಾಗಿಲ್ಲ.

ಜೆಡಿಎಸ್ ಮುಖಂಡ ಶಿವಪ್ಪ ಕೆಲವು ದಿನಗಳ ಹಿಂದಷ್ಟೇ ಖರೀದಿ ಮಾಡಿದ್ದ ಕಾರಿನಲ್ಲಿ ಸಂಬಂಧಿಕರ ಮದುವೆಗೆ ಹೋಗಿದ್ದಾರೆ ಹೊಸ ಕಾರನ್ನು ಡೆಲಿವರಿ ಕೊಡುವಾಗ ಕಟ್ಟುವ ರಿಬ್ಬನ್ ಕೂಡ ತೆಗೆದಿರಲಿಲ್ಲ ಆದರೂ, ಡ್ರೈವರ್ ಇಟ್ಟುಕೊಳ್ಳದೇ ಸಂಬಂಧಿಕರ ಮದುವೆಗೆ ಹೋಗಿದ್ದರು. ಆದರೆ, ಮದುವೆ ಮುಗಿಸಿಕೊಂಡು ವಾಪಸ್ ಬರುವಾಗ ಕಾರಿನ ನಿಯಂತ್ರಣ ತಪ್ಪಿ ರಸ್ತೆ ಬದಿಯಲ್ಲಿದ್ದ ನೀರಿನ ಸಂಪ್‌ಗೆ ಗುದ್ದಿದ್ದಾರೆ. ಸಿಮೆಂಟ್‌ನಿಂದ ನಿರ್ಮಿಸಲಾದ ನೀರಿನ ತೊಟ್ಟಿಗೆ ಡಿಕ್ಕಿ ಹೊಡೆದ ವೇಳೆ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಮಹಿಳೆ ಕಾರಿನ ಗಾಜಿನಿಂದ ಸೀದಾ ನೀರಿನ ತೊಟ್ಟಿಯೊಳಗೆ ಬಿದ್ದಿದ್ದಾರೆ ಎನ್ನಲಾಗಿದೆ. ನಂತರ ಸ್ಥಳೀಯರ ಸಹಾಯದೊಂದಿಗೆ ಗಾಯಾಳುಗಳಾದ ಶಿವಪ್ಪ ನಾಯಕ ಮತ್ತು ಅವರ ಪತ್ನಿಯನ್ನು ಮಧುಗಿರಿ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರು ಜಿಲ್ಲಾ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಪ್ರಕರಣ ಮಿಡಿಗೇಶಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ವಿಶ್ವದ ದಾರ್ಶನಿಕರ ತತ್ವಗಳು ಯುವ ಸಮುದಾಯಕ್ಕೆ ತಲುಪದಿದ್ದರೆ ಜಗತ್ತು ನೈತಿಕ ಅಧಃಪತನ



ವಚನ ಸಾಹಿತ್ಯ ಮತ್ತು ಶಿಕ್ಷಣ ಮೌಲ್ಯಗಳು ವಿಚಾರ ಸಂಕಿರಣವನ್ನು ಉದ್ಘಾಟಿಸಲಾಯಿತು.

ಮೈಸೂರು, ಫೆ.23(ಎಸ್‌ಪಿಎನ್)– ವಿಶ್ವದ ದಾರ್ಶನಿಕ ವ್ಯಕ್ತಿಗಳ ತತ್ವಗಳು ಇಂದಿನ ಯುವ ಸಮುದಾಯಕ್ಕೆ ತಲುಪದೇ ಪರಸ್ಪರ ಚರ್ಚೆಯಾಗದೇ ಹೋದರೆ ಜಗತ್ತು ನೈತಿಕವಾಗಿ ಅಧಃಪತನಗೊಳ್ಳುತ್ತದೆ ಎಂದು ಬಿಜಿಎಸ್ ಬಿಇಡಿ ಕಾಲೇಜು ಪ್ರಾಧ್ಯಾಪಕ ಡಾ.ಎಚ್.ಬಿ.ಬೆಟ್ಟಸ್ವಾಮಿ ಎಚ್ಚರಿಕೆ ನೀಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪನವರ ವಸತಿ ನಿಲಯದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ವತಿಯಿಂದ ಏರ್ಪಡಿಸಿದ್ದ ವಚನ ಸಾಹಿತ್ಯ ಮತ್ತು ಶಿಕ್ಷಣ ಮೌಲ್ಯಗಳು ವಿಷಯ ಕುರಿತು ಮಾತನಾಡಿದರು.

ಅಧ್ಯಾಪಕರು ಅಧ್ಯಯನವನ್ನು ಎಲ್ಲಿ, ಯಾವಾಗ ನಿಲ್ಲಿಸುವವರೋ, ಅಂದು ಅಲ್ಲಿಯೇ ವಿದ್ಯಾರ್ಥಿಗಳು ಕಲಿಕೆಯನ್ನು ಸ್ಥಗಿತಗೊಳಿಸುತ್ತಾರೆ. ಹಾಗಾಗಿ ಶಿಕ್ಷಕರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದಾ ಓದುತ್ತಿರಬೇಕು. ಅದು ಕಲಿಕಾ ವಿದ್ಯಾರ್ಥಿಯಂತೆ ನಿತ್ಯ ಕಲಿಯುತ್ತಿರಬೇಕು. ಶಿಕ್ಷಕರ ಈ ಗುಣವನ್ನು ಹತ್ತಿರದಿಂದ ಗಮನಿಸುವ ವಿದ್ಯಾರ್ಥಿಗಳು ತಾವು ಸಹ ಅಧ್ಯಾಪಕರನ್ನು ಫಾಲೋ ಮಾಡುತ್ತಾರೆ ಎಂದು ಹೇಳಿದರು.

ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿರುವಂತೆ 'ನರೆ ಕೆನ್ನೆಗೆ ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಪೂಜಿಸು ಕೂಡಲಸಂಗಮದೇವ' ಈ ವಚನವನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳ ಓದಬೇಕು. ಇದರ ಅರ್ಥ ಅರಿಯಬೇಕು ಎಂದರು.

ಹಿಂದಿನ ಕಲಿಕಾ ಗುಣಮಟ್ಟ ತುಂಬಾ ಖುಷಿ ನೀಡುತ್ತಿತ್ತು. ಇಂದು ಆ ಖುಷಿ ಇಲ್ಲದಾಗಿದೆ. ಪುಸ್ತಕಗಳನ್ನು ಓದುವುದರಿಂದ ಅಲ್ಲಿನ ಸಂಸ್ಕಾರ ನಮ್ಮದಾಗುತ್ತಿತ್ತು. ಅಪರಾಧ, ಭ್ರಷ್ಟಾಚಾರ ಮತ್ತು ಕಂದಚಾರ ವ್ಯವಸ್ಥೆಗಳಿಂದ ಮನುಷ್ಯ ದೂರವಿರುತ್ತಿದ್ದ. ಇಂದು ಓದು ಕಡಿಮೆಯಾಗಿದೆ. ಸಮಾಜದಲ್ಲಿ ಅಪರಾಧ ಚಟುವಟಿಕೆಗಳ ಮನಸ್ಥಿತಿ ಹೆಚ್ಚಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ನಮ್ಮ ನೆಚ್ಚಿನ ವಿಷಯಕ್ಕೆ ಬೇಕಾದ ಜ್ಞಾನ ಮತ್ತು ಕೌಶಲ್ಯ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು ಆಧ್ಯಾತ್ಮದ ತಳಹದಿಯಲ್ಲಿ ಸಾಮಾಜಿಕ ಮೌಲ್ಯಗಳು ಬೆಳೆದಾಗ ಮಾತ್ರ ಸುಂದರ ತೋಟ ಆಗಬಲ್ಲದು. ಓರ್ವ ವ್ಯಕ್ತಿ ಅನ್ನಕ್ಕಿಂತ ಅರಿವು ಅರಿವಿನಷ್ಟೇ ದುಡಿಮೆ ಎಂದು ತಿಳಿದಾಗ ಮಾತ್ರ ಆ ವ್ಯಕ್ತಿಯನ್ನು ಎತ್ತರಕ್ಕೆ ಬೆಳೆಸಬಲ್ಲದು ಎಂದು ಉದಾಹರಣೆ ಸಹಿತ ವಿವರಿಸಿದರಲ್ಲದೆ, ವಿದ್ಯಾರ್ಥಿಗಳಿಗೆ ದತ್ತಿ ದಾಸೋಹಿಗಳಾದ ದಿವಂಗತ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರನ್ನು ಪ್ರತಿನಿತ್ಯ ನೆನಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹೆಚ್.ಜಿ ಗುರುಪ್ರಸಾದ್ ವಚನ ಸಾಹಿತ್ಯ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಮತ್ತು ಬಹುಮಾನವನ್ನು ವಿತರಿಸಿದರು. ಪ್ರಜ್ವಲ್ ಪ್ರಾರ್ಥಿಸಿದರೆ, ರಾಜಶೇಖರ್ ಸ್ವಾಗತಿಸಿದರು. ಎಂ ಮಹದೇವಸ್ವಾಮಿ, ಅಭಿಷೇಕ್ ಕಾರ್ಯಕ್ರಮ ನಿರೂಪಿಸಿದರು. ಈ ವೇಳೆ ಮೋಹನ್ ಶಂಕರ್, ನಂದೀಶ್ ಬಸವರಾಜ್ ಮುಂತಾದವರಿದ್ದರು. ಈ ವೇಳೆ ಕರ್ನಾಟಕ ಸರ್ಕಾರದಿಂದ ಶಿಶುನಾಳ ಶರೀಫ ಪ್ರಶಸ್ತಿ ಪಡೆದ ಹಿರಿಯ ಸುಗಮ–ಸಂಗೀತ ಗಾಯಕರಾದ ಪ್ರೊ.ಎಸ್ ಮಲ್ಲಣ್ಣ ಅವರನ್ನು ಸನ್ಮಾನಿಸಲಾಯಿತು.

ಕಾಂಗ್ರೆಸ್‌ಗೆ ನೇಮಕ



ಮೈಸೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಇಂಟಕ್ (ಐಎನ್‌ಟಿಯುಸಿ) ವಿಭಾಗದ ರಾಜ್ಯ ಕಾರ್ಯದರ್ಶಿಯನ್ನಾಗಿ ಮೈಸೂರಿನ ರಾಜೀವ್ ನಗರ 2ನೇ ಹಂತದ ಮೊಹಮ್ಮದ್ ರಫಿ ಅವರನ್ನು ನೇಮಕ ಮಾಡಲಾಗಿದೆ.



ಬಿ.ಮೋಹನ್‌ಕುಮಾರ್

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳದ ಮೈಸೂರು ನಗರ ಜಿಲ್ಲಾ ಸೇವಾದಳದ ಕಾರ್ಯಾಧ್ಯಕ್ಷರನ್ನಾಗಿ ಮೈಸೂರಿನ ವಿದ್ಯಾನಗರದ ನಿವಾಸಿ ಬಿ.ಮೋಹನ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ ; ಲಕ್ಷಾಂತರ ಮೌಲ್ಯದ ಸಾಮಗ್ರಿ ಬೆಂಕಿಗಾಹುತಿ



ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ಕಟ್ಟಡವೊಂದರ ಮೊದಲ ಅಂತಸ್ತಿನಲ್ಲಿರುವ ಮನೆಯೊಂದರಲ್ಲಿ ಹೊತ್ತಿ ಉರಿಯುತ್ತಿರುವ ಬೆಂಕಿಯನ್ನು ನಂದಿಸುವ ಕಾರ್ಯಾಚರಣೆ ನಡೆಸುತ್ತಿರುವ ಅಗ್ನಿಶಾಮಕ ಸಿಬ್ಬಂದಿಯನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.23(ಪಿಎಂ)– ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಮನೆಯೊಂದರಲ್ಲಿ ಬೆಂಕಿ ಹೊತ್ತಿ ಉರಿದ ಪರಿಣಾಮ ಲಕ್ಷಾಂತರ ರೂ. ಮೌಲ್ಯದ ಪೀಠೋಪಕರಣ ಸೇರಿದಂತೆ ಇನ್ನಿತರ ಸಾಮಗ್ರಿ ಸುಟ್ಟು ಕರಕಲಾದ ಘಟನೆ ನಗರದ ದೇವರಾಜ ಮೊಹಲ್ಲಾದಲ್ಲಿ ಭಾನುವಾರ ನಡೆದಿದೆ.

ಇಲ್ಲಿನ ನಾರಾಯಣಶಾಸ್ತ್ರಿ ರಸ್ತೆ ಮತ್ತು ಬಿಡರಂ ಕೃಷ್ಣಪ್ಪ ರಸ್ತೆ ಜಂಕ್ಷನ್‌ನಲ್ಲಿರುವ ಕಟ್ಟಡದ ಮೊದಲ ಅಂತಸ್ತಿನಲ್ಲಿರುವ ಮನೆಯೊಂದರಲ್ಲಿ ಇಂದು ಸಂಜೆ ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ದಟ್ಟ ಹೊಗೆ ಆವರಿಸಿಕೊಂಡಿತ್ತು.

ಅದೃಷ್ಟವಶಾತ್ ಮನೆಯಲ್ಲಿ ಯಾರೂ ಇಲ್ಲದ ಹಿನ್ನೆಲೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಆದರೆ ದಟ್ಟ ಹೊಗೆ ಆವರಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಇಲ್ಲಿನ ಸುತ್ತಮುತ್ತಲ ನಿವಾಸಿಗಳು ಆತಂಕಗೊಂಡಿದ್ದರು. ವಿಷಯ ತಿಳಿದು ಕೂಡಲೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದರು. ಆದರೆ ವಿದ್ಯುತ್ ಶಾರ್ಟ್‌ಸರ್ಕ್ಯೂಟ್ ನಿಂದ ಬೆಂಕಿ ಹೊತ್ತಿದ್ದ ಹಿನ್ನೆಲೆಯಲ್ಲಿ ನೀರಿನ ಮೂಲಕ ಬೆಂಕಿ ನಂದಿಸಲು ತೊಡಕಾಗಿತ್ತು.

ಸ್ಥಳಕ್ಕಾಗಮಿಸಿದ ಸೆಸ್ಕ್ ಸಿಬ್ಬಂದಿ, ಇಲ್ಲಿನ ವಿದ್ಯುತ್ ಲೈನ್‌ಗಳನ್ನು ನಿಷ್ಕ್ರಿಯಗೊಳಿಸಿ ವಿದ್ಯುತ್ ಪ್ರಸರಣಕ್ಕೆ ತಡೆಯೊಡ್ಡಿದ ಬಳಿಕ ಎರಡು ಅಗ್ನಿಶಾಮಕ ವಾಹನಗಳೊಂದಿಗೆ ಕಾರ್ಯಾಚರಣೆ ತೀವ್ರಗೊಳಿಸಿದ ಅಗ್ನಿಶಾಮಕ ಸಿಬ್ಬಂದಿ, 2 ಗಂಟೆಗೂ ಅಧಿಕ ಕಾಲ ಶ್ರಮಿಸಿ ಕೊನೆಗೂ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಮಂಜುನಾಥ್ ಎಂಬುವವರಿಗೆ ಸೇರಿದ ಮನೆ ಇದಾಗಿದ್ದು, ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿತ್ತು. ಪೀಠೋಪಕರಣ, ಉಡುಪುಗಳು ಒಳಗೊಂಡಂತೆ ಸುಮಾರು 2 ಲಕ್ಷ ರೂ. ಮೌಲ್ಯದ ಸಾಮಗ್ರಿಗಳು ಸುಟ್ಟು ಕರಕಲಾಗಿವೆ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಮೇಶ್, ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಸಹಾಯಕ ಅಗ್ನಿಶಾಮಕ ಅಧಿಕಾರಿ ಮಂಟಯ್ಯ ನೇತೃತ್ವದಲ್ಲಿ ಮಹೇಶ್‌ಕುಮಾರ್, ಮನು, ಕೆ.ಟಿ.ಸ್ವಾಮಿ, ಮೂರ್ತಿಶೆಟ್ಟಿ, ಫಿರೋಜ್‌ಖಾನ್, ವೆಂಕಟಪ್ಪ, ಮಂಜುನಾಥ್ ಕಾರ್ಯಾಚರಣೆ ನಡೆಸಿದರು.

ಸಾಧನೆಗೆ ಶಾರ್ಟ್‌ಕಟ್ ಇಲ್ಲ; ಶ್ರಮದಿಂದ ಮಾತ್ರ ಸಾಧ್ಯ

ಸಹ ಪ್ರಾಧ್ಯಾಪಕ ಡಾ.ಹೇಮಚಂದ್ರ ಅಭಿಮತ



ದಿ ಅನಾಥಾಲಯ ಸಾಹಿತ್ಯ ಸಂಘದ ವಾರ್ಷಿಕೋತ್ಸವ, ಲೋಕಸೇವಾನಿರತ ವಿ.ನಾರಾಯಣರಾವ್ ಸ್ಮಾರಕ ರಾಜ್ಯಮಟ್ಟದ ಅಂತರ ಪದವಿ ಕಾಲೇಜು 20ನೇ ವಾರ್ಷಿಕ ಕನ್ನಡ ಪ್ರಬಂಧ, 3ನೇ ವಾರ್ಷಿಕ ಶಾಸ್ತ್ರೀಯ ಸಂಗೀತ ವಾದ್ಯ ಹಾಗೂ 29ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ದಿ ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ಹೇಮಚಂದ್ರ ಮತ್ತಿತರರಿದ್ದರು.

ಮೈಸೂರು, ಫೆ.23(ಎಂಕೆ)– ಸಾಧನೆಗೆ ಶಾರ್ಟ್‌ಕಟ್ ಎಂಬುದಿಲ್ಲ. ನಿಧಾನವಾಗಿ ಭವಿಷ್ಯ ಕಟ್ಟಿ, ಆಳವಾದ ಜ್ಞಾನ ಪಡೆಯಿರಿ ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ಹೇಮಚಂದ್ರ ಪದವಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ದಿ ಅನಾಥಾಲಯ(ತಾತಯ್ಯನವರ ಅನಾಥಾಲಯ) ಆವರಣದಲ್ಲಿ ಸಾಹಿತ್ಯ ಸಂಘದ ವಾರ್ಷಿಕೋತ್ಸವ ಹಾಗೂ ಲೋಕಸೇವಾನಿರತ ವಿ.ನಾರಾಯಣ ರಾವ್ ಸ್ಮಾರಕ ರಾಜ್ಯಮಟ್ಟದ ಅಂತರ ಪದವಿ ಕಾಲೇಜು 20ನೇ ವಾರ್ಷಿಕ ಕನ್ನಡ ಪ್ರಬಂಧ ಸ್ಪರ್ಧೆ, 3ನೇ ವಾರ್ಷಿಕ ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ ಹಾಗೂ 29ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಎಲ್ಲವೂ ಬೇಗ ಸಿಗಬೇಕು ಎನ್ನಬೇಡಿ. ಹತ್ತಿರದ ಸಕ್ಸಸ್ ಬೆನ್ನಟ್ಟಬೇಡಿ. ಬಿದಿರಿನಂತೆ ಎತ್ತರವಾಗಿ ಬೆಳೆಯಬೇಕಾದರೆ ಅದರ ಬೇರಿನಂತೆ ನಿಮ್ಮ ಜ್ಞಾನವೂ ವಿಶಾಲವಾಗಿರಬೇಕು ಎಂದು ಕಿವಿಮಾತು ಹೇಳಿದರು.

ಇವತ್ತು ನಿಮಗೆ ಬೇಕಾಗಿರುವುದನ್ನು (ಮೊಬೈಲ್, ಮೋಜು–ಮಸ್ತಿ ಇನ್ನಿತರೆ) ತ್ಯಾಗ ಮಾಡದಿದ್ದರೆ, ಕೊನೆಗೆ ನಿಮಗೆ ನಿಜವಾಗಿಯೂ ಬೇಕಾಗಿರುವುದನ್ನೇ ತ್ಯಾಗ ಮಾಡಬೇಕಾಗುತ್ತದೆ. ಪ್ರತಿ ದಿನ ಓದುತ್ತಿರಬೇಕು. ಅಪ್‌ಡೇಟ್ ಆಗುತ್ತಿರಬೇಕು. ಸೆಮಿಸ್ಟರ್ ಪರೀಕ್ಷೆಗಳನ್ನು ಬರೆದರೆ ಇವತ್ತಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಕ್ಸಸ್ ಕಾಣಲು ಸಾಧ್ಯವಿಲ್ಲ. ನಿಧಾನವಾಗಿ ನಿಮ್ಮ ಸಾಧನೆಯತ್ತ ಸಾಗಿ. ನಾವು ಅನಾಥಾಲಯದಲ್ಲಿದ್ದೇವೆ. ಬಡವರು ಎಂಬ ಅಂಜಿಕೆಯನ್ನು ಮೊದಲು ಬಿಡಬೇಕು. ಕಷ್ಟಪಟ್ಟರಷ್ಟೇ ರೂಪಾಂತರಗೊಳ್ಳಲು ಸಾಧ್ಯ. ಇವತ್ತು ಕಠಿಣ ಪರಿಶ್ರಮ ಪಡೆದೆ ಆರಾಮವಾಗಿದ್ದರೆ, ಮುಂದಿನ ದಿನಗಳಲ್ಲಿ ಕಷ್ಟಪಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಉಪ್ಪಿನಕಾಯಿಯಂತೆ ಬಳಸಿ!: ವಿದ್ಯಾರ್ಥಿಗಳ ಕೈಯಲ್ಲಿ ಮೊಬೈಲ್ ಇದೇ ಎಂದರೆ ಅವರ ಬುದ್ಧಿವಂತಿಕೆ, ದೈನಂದಿನ ಪ್ರಕ್ರಿಯೆಗಳು ಹೇಗಿರುತ್ತವೆ ಎಂಬುದು ಗೊತ್ತಾಗುತ್ತದೆ. ಮೊಬೈಲ್ ಟೆಕ್ನಾಲಜಿಯಲ್ಲಿ ಫಾಸಿಟಿವ್ ಮತ್ತು ನೆಗೆಟಿವ್ ಎರಡು ಇರಲಿದ್ದು, ಹಣ್ಣನ್ನೂ ಕೊಯ್ಯಬಹುದು, ಕತ್ತನ್ನೂ ಕೊಯ್ಯಬಹುದು. ಹೇಗೆ ಮೊಬೈಲ್ ಬಳಸುತ್ತೀರಿ ಅದರ ಮೇಲೆ ನಿರ್ಧಾರವಾಗಿರುತ್ತದೆ. ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂದುಕೊಂಡಿದ್ದರೇ ಮೊಬೈಲ್ ಬಳಕೆಯನ್ನು ಊಟದಲ್ಲಿರುವ ಉಪ್ಪಿನಕಾಯಿಯಂತೆ ಬಳಸಬೇಕೆ ಹೊರತು ಊಟದಂತಲ್ಲ. ನಿಮ್ಮ ಶಿಕ್ಷಣಕ್ಕೆ ಎಷ್ಟು ಅಗತ್ಯವಿದೆಯೋ ಅಷ್ಟಕ್ಕೆ ಮಾತ್ರ ಮೊಬೈಲ್ ಬಳಸಿಕೊಂಡರೆ ನಿಮ್ಮ ಭವಿಷ್ಯ ಉಜ್ವಲವಾಗಿರುತ್ತದೆ. ಇಲ್ಲವಾದರೆ ತುಂಬಾ ಕಷ್ಟಪಡಬೇಕಾಗುತ್ತದೆ ಎಂದು ತಿಳಿಹೇಳಿದರು.

ಬಹುಮಾನ ವಿತರಣೆ: ನಂತರ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 'ಕಾಲೇಜು ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆ ಪ್ರಕರಣಗಳಿಗೆ ಇಂದಿನ ಶಿಕ್ಷಣ ವ್ಯವಸ್ಥೆಯೇ ಕಾರಣ' ವಿಷಯ ಕುರಿತ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ತೋಟಗಾರಿಕೆ ಕಾಲೇಜಿನ ಜಿ.ಎಂ.ವಿಶ್ವನಾಥ್ ಪ್ರಥಮ, ವಿದ್ಯಾವರ್ಧಕ ಕಾನೂನು ಕಾಲೇಜಿನ ಸಿ.ಆರ್.ಜೀವಿತಾ ದ್ವಿತೀಯ, ಮಹಾರಾಣಿ ವಿಜ್ಞಾನ ಕಾಲೇಜಿನ ಆರ್.ಸಿಂಚನಾ ತೃತೀಯ ಬಹುಮಾನ ಪಡೆದರು.

'ಸನಾತನ ಧರ್ಮದ ಉಳಿವಿನಲ್ಲಿ ಕುಂಭಮೇಳಗಳ ಪಾತ್ರ' ಕುರಿತ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಟೆರಿಷಿಯನ್ ಕಾಲೇಜಿನ ಸ್ಫೂರ್ತಿ ಪ್ರಥಮ, ಮಹಾರಾಣಿ ಕಲಾ ಕಾಲೇಜಿನ ತೇಜಸ್ವಿನಿ ದ್ವಿತೀಯ, ಶೇಷಾದ್ರಿಪುರಂ ಕಾಲೇಜಿನ ಕೆ.ಎಸ್.ಯಶವಂತ್ ತೃತೀಯ ಬಹುಮಾನ ಗೆದ್ದರೆ, 'ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ'ಯಲ್ಲಿ ಎಟಿಎಂಇ ಕಾಲೇಜಿನ ವಿಶ್ವೇಶ್ವರ ಭಾರ್ಗವ ಪ್ರಥಮ, ಜೆಎಸ್‌ಎಸ್ ಕಾಲೇಜಿನ ದಿಮಂತ್ ಭಟ್ ದ್ವಿತೀಯ, ಎನ್‌ಐಇ ಪ್ರಥಮ ದರ್ಜೆ ಕಾಲೇಜಿನ ಅನಂತ ಕೇಶವ ತೃತೀಯ ಬಹುಮಾನ ಪಡೆದರು.

ದಿ ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್ ಸಮಾರೋಪದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಎನ್.ವಿ.ದಿನೇಶ್, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ ಮತ್ತಿತರರಿದ್ದರು.

ಭಾರತದಲ್ಲಿ ನಿರುದ್ಯೋಗ ಎಂಬುದಿಲ್ಲ...!

ಭಾರತದಲ್ಲಿ ನಿರುದ್ಯೋಗ ಎಂಬುದಿಲ್ಲ. ಬದಲಿಗೆ ಉದ್ಯೋಗಕ್ಕೆ ಬೇಕಾಗಿರುವ ಸೂಕ್ತ ಉದ್ಯೋಗಿಗಳ ಕೊರತೆ ಇದೆ. ಪ್ರತೀ ವರ್ಷ ಶೇ.60–70 ರಷ್ಟು ಇಂಜಿನಿಯರಿಂಗ್ ಹಾಗೂ ಶೇ.70–80 ರಷ್ಟು ಪದವಿಧರರು ನಿರುದ್ಯೋಗಿಗಳಾಗುತ್ತಿದ್ದಾರೆ. ಇದಕ್ಕೆ ಕಾರಣ ಅವರಲ್ಲಿನ ಕೌಶಲ್ಯತೆಯ ಕೊರತೆ. ಬರೀ ಮಾರ್ಕ್ಸ್‌ಕಾರ್ಡ್ ಮಾತನಾಡಿದರೆ ಸಾಲದು, ಕೌಶಲ್ಯತೆ ಇರಬೇಕು. ಎಲ್ಲಾ ವಿಚಾರಗಳನ್ನು ತಿಳಿದುಕೊಳ್ಳಬೇಕು. ಕಷ್ಟಪಟ್ಟು ನಿಮ್ಮ ಅಗತ್ಯತೆಗೆ ಅನುಗುಣವಾಗಿ ರೂಪುಗೊಳ್ಳಬೇಕು. ಯಶಸ್ಸೆಂಬುದನ್ನು ಅರ್ಥಮಾಡಿಕೊಳ್ಳಬೇಕು.

– ಡಾ.ಹೇಮಚಂದ್ರ ಸಹ ಪ್ರಾಧ್ಯಾಪಕ

ನಕ್ಕರೆ ಅದೇ ಸ್ವರ್ಗ

ಟೀಚರ್: ಲೇ ಗುಂಡ ಲಿಂಗದಲ್ಲಿ ಎಷ್ಟು ವಿಧ ಹೇಳು?
ಗುಂಡ : ಸಾರ್... ಆರು ವಿಧ.
ಟೀಚರ್: ಅದ್ಯಾವುದೋ ಆರು ವಿಧ?
ಗುಂಡ : ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ, ನಮ್ಮಪ್ಪ ಸಿದ್ದಲಿಂಗ, ನೀನ್ ಗುರುಲಿಂಗ ಮತ್ತು ಶ್ರೀಲಂಕಾದ ಬೌಲರ್ ಮಾಲಿಂಗಾ....

ಮೈಸೂರು ಮಿತ್ರ
ಸೋಮವಾರ, 24 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಸೂರ್ಯನ ಶಾಪ, ಗುರುವಿನ ಕೋಪ ಇವೆರಡನ್ನು ಸಹಿಸಿಕೊಳ್ಳಬೇಕು... ಸೂರ್ಯನಿಲ್ಲದಿದ್ದರೆ ಜಗತ್ತು, ಗುರು ಇಲ್ಲದಿದ್ದರೆ ಜೀವನವೇ ಕತ್ತಲು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನೀರು ಇದ್ದರೆ ಊರು, ನಾರಿ ಇದ್ದರೆ ಮನೆ

ನಿಮ್ಮ ಪತ್ರಗಳು

ಪೋಷಕರೇ ಗಮನವಿರಲಿ...

ಮಾನ್ಯರೆ,

ಪರೀಕ್ಷಾ ಸಮಯ. ಮಾರ್ಚ್ ಬಂದರೆ ಎಲ್ಲೆಲ್ಲೂ ಆತಂಕದ ಸಮಯ ಶಾಲೆ ಆಡಳಿತ ಮಂಡಳಿ, ಪೋಷಕರು, ವಿದ್ಯಾರ್ಥಿಗಳಿಗೆ. ವರ್ಷವೆಲ್ಲ ಓದಿದ ವಿಷಯಗಳನ್ನು ಬರೆಯಲು ಕಾತರ. ಎಲ್ಲೆಡೆ ತಮ್ಮ ಮಕ್ಕಳು ಮೊದಲಿಗ ಆಗಬೇಕೆಂಬ ಬಯಕೆ. ಆದರೆ ಎಲ್ಲರ, ಬುದ್ಧಿಮಟ್ಟ ಒಂದೇ ರೀತಿಯಾಗಿರುವುದಿಲ್ಲ. ಅದನ್ನು ಪ್ರತಿಯೊಬ್ಬ ಪೋಷಕರು ಅರಿಯಬೇಕು. ಮಕ್ಕಳ ಮನಸ್ಸು ಮೃದುವಾಗಿರುತ್ತದೆ. ಚುಚ್ಚು ಮಾತಿನಿಂದ ಎಲ್ಲೆಡೆ (ಶಾಲಾ-ಕಾಲೇಜು, ಮನೆ) ಒತ್ತಡ ತಂದಾಗ ದಿಕ್ಕು ತೋಚದಂತಾಗಿ ಮನೆ ಬಿಟ್ಟು ಹೋಗುವುದು, ಕಳ್ಳತನ, ಆತ್ಮಹತ್ಯೆ ಪ್ರಯತ್ನ ಮಾಡುವುದು... ಹೀಗೆ ಹಲವಾರು ಕೆಟ್ಟ ಯೋಚನೆಗಳು ಮಕ್ಕಳ ಮನಸ್ಸಿನಲ್ಲಿ ಬರುತ್ತದೆ. ಆದ್ದರಿಂದ ಮನೆಯಲ್ಲಿ ಎಲ್ಲರೂ ಮಕ್ಕಳೊಂದಿಗೆ ಸಂಯಮದಿಂದ ವರ್ತಿಸಬೇಕು. ಮಕ್ಕಳಿಗಾಗಿ ಮಾಡಿದ ಖರ್ಚು, ವೆಚ್ಚ, ಸೌಕರ್ಯಗಳನ್ನು ಎತ್ತಿ ಆಡಬೇಡಿ. ಹೋಲಿಕೆ ಕೊಟ್ಟು ಮಕ್ಕಳ ಮನಸ್ಸನ್ನು ಮತ್ತಷ್ಟು ಕುಗ್ಗಿಸಬೇಡಿ. ಆದ್ದರಿಂದ ಮನೆಯಲ್ಲಿ ಎಲ್ಲರೂ ಮಕ್ಕಳೊಂದಿಗೆ ಸಮಯಮದಿಂದ ವರ್ತಿಸಬೇಕು. ಸೋತವರು ಗೆದ್ದೇ ಗೆಲ್ಲುತ್ತಾರೆ ಎಂಬ ನಾಣ್ಣುಡಿ ಇದೆ. ಹಲವಾರು ಮಂದಿ ಇದನ್ನು ಸಾಬೀತುಪಡಿಸಿದ್ದಾರೆ. ಮಕ್ಕಳೊಂದಿಗೆ ಸ್ನೇಹಿತರಂತೆ ವರ್ತಿಸಿ. ಅವರಲ್ಲಿ ಆತ್ಮವಿಶ್ವಾಸ ತುಂಬಿದರೆ ಅವರ ಏಳಿಗೆಗೆ ಕಾರಣರಾಗುತ್ತೀರಾ. ಮಕ್ಕಳ ಬಗ್ಗೆ ಗಮನವಿರಬೇಕು. ಸ್ನೇಹಿತರ ಸಹವಾಸ ಹಾಗೂ ದುಶ್ಚಟಕ್ಕೆ ಬಲಿಯಾಗದೆ ಇರುವ ಹಾಗೆ ಗಮನಿಸಬೇಕು. ಅವರ ಗುಣ ಸ್ವಭಾವದ ಬಗ್ಗೆ ಅರಿತಿರಬೇಕು. ಅವರ ಆರೋಗ್ಯದ ಕಡೆ ನಿಗಾ ನೀಡಿ, ಪೌಷ್ಟಿಕಾಂಶದ ಆಹಾರ ನೀಡಬೇಕು. ಮಕ್ಕಳಿಗೂ ಪೋಷಕರಿಂದ ತೊಂದರೆಯಾಗದ ಹಾಗೆ(ಕುಟುಂಬದ ಕಲಹ, ಆರ್ಥಿಕ ಪರಿಸ್ಥಿತಿ, ಬಂಧುಗಳ ಆಗಮನ ಇತ್ಯಾದಿ) ಪೋಷಕರು ಮಕ್ಕಳ ಮನಸ್ಸನ್ನು ಉಲ್ಲಾಸದಿಂದ ಇರುವ ಹಾಗೆ ನೋಡಿಕೊಳ್ಳುವುದು ಪೋಷಕರ ಕರ್ತವ್ಯ. ಪರೀಕ್ಷೆಗೆ ಕಲಿಸುವ ಮುನ್ನ ಮಕ್ಕಳನ್ನು ಉತ್ತೇಜಿಸಿ ಸಂತೋಷದಿಂದ ಕಳುಹಿಸಿಕೊಡಿ. -ಎಂ.ಎಸ್.ಉಷಾ ಪ್ರಕಾಶ್, ಲೇಖಕಿ-ಕವಯಿತ್ರಿ, ಮೈಸೂರು.

ಪೊಲೀಸರ ಸೂಕ್ಷ್ಮತೆಯ ಆಲೋಚನೆಗೆ ಸಲಾಂ

ಮಾನ್ಯರೆ,

ಮೈಸೂರಿನ ಉದಯಗಿರಿ ಠಾಣೆಯ ಮೇಲೆ ಹಾಗೂ ಡಿವೈಎಸ್‌ಪಿ ಕಾರಿನ ಮೇಲೆ ಕಲ್ಲು ತೂರಿ ವಾಹನಗಳನ್ನು ಜಖಂಗೊಳಿಸಿದ್ದ ಉದ್ರಿಕ್ತರನ್ನು ಪೊಲೀಸರು ಸೂಕ್ಷ್ಮತೆಯಿಂದ ಗಲಭೆಯನ್ನು ನಿಯಂತ್ರಿಸಿದ್ದಾರೆ.

ಉದಯಗಿರಿ ಠಾಣೆಯ ವ್ಯಾಪ್ತಿಯ ಪ್ರದೇಶ ಎಷ್ಟು ಸೂಕ್ಷ್ಮ ಎಂದರೆ ಅಲ್ಲಿನ ಸ್ಥಳೀಯನಾಗಿರುವ ನಮಗೆ ಚೆನ್ನಾಗಿ ಗೊತ್ತು. ಠಾಣೆಯ ಪೊಲೀಸರು ಕಾನೂನಾತ್ಮಕವಾಗಿ ಕೆಲಸದ ಜೊತೆಯಲ್ಲಿ ಭಾವನಾತ್ಮಕವಾಗಿ ಹಾಗೂ ಕೌನ್ಸಿಲಿಂಗ್ ಮಾಡುವ ಮೂಲಕ ಅವರ ಜೊತೆ ಸ್ಪಂದಿಸುವ ಕೆಲಸಗಳನ್ನು ಮಾಡುತ್ತಾರೆ. ಇದರಿಂದ ಎಷ್ಟೋ ಸಣ್ಣ ಪುಟ್ಟ ಗಲಾಟೆಗಳನ್ನು ಪ್ರಾರಂಭದಲ್ಲೇ ಶಮನ ಮಾಡುತ್ತಾರೆ. ಇಲ್ಲಿ ಗಲಾಟೆಗಳು ಆಗುವುದಕ್ಕೆ ಬಲವಾದ ದೊಡ್ಡ ಕಾರಣಗಳು ಬೇಕಾಗಿಲ್ಲ. ಸಣ್ಣ ಪುಟ್ಟ ಗಲಾಟೆಗಳು ನಡೆಯುತ್ತಲೇ ಇರುತ್ತವೆ. ಈ ಗಲಾಟೆಗಳು ಠಾಣೆ ಮೆಟ್ಟಿಲು ಏರಿದರೆ ಅವರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ಪೊಲೀಸರು ಅವರನ್ನು ಮಾತಿನ ಮೂಲಕ ಸಮಸ್ಯೆಗಳನ್ನು ಬಗೆಹರಿಸಿ ಶಾಂತಿ ಸ್ಥಾಪನೆಯ ಕೆಲಸವನ್ನು ಮಾಡುತ್ತಿರುತ್ತಾರೆ. ಇಂತಹ ರಕ್ಷಕರನ್ನು ಸಚಿವರೊಬ್ಬರು ಕಾಮನ್‌ಸೆನ್ಸ್ ಇಲ್ಲ ಎನ್ನುವುದು ಎಷ್ಟು ಸರಿ?

ಅಲ್ಲಿರುವ ಹಲವು ಸಮುದಾಯದ ಕುಟುಂಬಗಳು ಶಾಂತಿ, ಸೌಜನ್ಯ, ಸಮಾಧಾನಗಳಿಂದ ಯಾರ ತಂಟೆಗೆ ಹೋಗದೆ ತಾವು ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಸಮುದಾಯದ ಕುಟುಂಬಗಳು ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಇಂತಹ ಸೂಕ್ಷ್ಮತೆಯನ್ನು ಅರಿತು ಕೆಲಸ ಮಾಡುವ ಪೊಲೀಸರನ್ನು ಕಾಮನ್ ಸೆನ್ಸ್(ಸಾಮಾನ್ಯ ಜ್ಞಾನ ಇಲ್ಲ) ಎಂದಿರುವುದು ಸರಿಯಲ್ಲ.

-ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಅರಣ್ಯ ಸಂಪತ್ತು, ಪ್ರಾಣಿ, ಪಕ್ಷಿಗಳ ಸಂಕುಲ ರಕ್ಷಿಸಿ

ಮಾನ್ಯರೆ,

ಬೇಸಿಗೆ ಕಾಲ ಶುರುವಾಗುತ್ತಿರುವಾಗಲೇ ಚಾಮುಂಡಿಬೆಟ್ಟದಲ್ಲಿ ಅಗ್ನಿ ಅವಘಡ ಸಂಭವಿಸಿ, ನೂರಾರು ಎಕರೆ ಪ್ರದೇಶ ನಾಶವಾಗಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ತಾಪಮಾನ ಏರಿಕೆಯಾಗುವ ಸಾಧ್ಯತೆಗಳಿವೆ. ಆದ್ದರಿಂದ ಚಾಮರಾಜನಗರ ಜಿಲ್ಲೆಯ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಬಂಡಿಪುರ, ಬಿಳಿಗಿರಿರಂಗನ ಬೆಟ್ಟ, ನಾಗರಹೊಳೆ, ಮಲೆ ಮಹದೇಶ್ವರ ಬೆಟ್ಟ, ಕೊಡಗು, ಉಡುಪಿ, ಹಾಸನ, ಶಿವಮೊಗ್ಗ, ಉತ್ತರ ಕನ್ನಡ, ಮಂಗಳೂರು ಸೇರಿದಂತೆ ರಾಜ್ಯದ ಹಲವಾರು ಭಾಗಗಳಲ್ಲಿರುವ ಅರಣ್ಯ ಸಂಪತ್ತು ಮತ್ತು ವೈವಿಧ್ಯಮಯ ಪ್ರಾಣಿ-ಪಕ್ಷಿಗಳ ಸಂಕುಲಗಳನ್ನು ರಕ್ಷಿಸಬೇಕಿದೆ. ಆದ್ದರಿಂದ ಈ ಪ್ರದೇಶಗಳಿಗೆ ಧೂಮಪಾನ ಮತ್ತು ಮದ್ಯಪಾನ ಹಾಗೂ ಪ್ಲಾಸ್ಟಿಕ್ ನಿರ್ಬಂಧಿಸುವ ಅಗತ್ಯವಿದೆ. ಧೂಮಪಾನ ಮಾಡುವವರು ಎಚ್ಚರ ವಹಿಸಬೇಕಾಗಿದೆ. ಇಂತಹ ಕಡೆ ಚೆಕ್‌ಪೋಸ್ಟ್‌ಗಳಲ್ಲಿ ವಾಹನ ತಪಾಸಣೆ ನಡೆಸಬೇಕಾಗಿದೆ. ಅಧಿಕಾರಿಗಳು, ಅರಣ್ಯಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮದೊಂದಿಗೆ ಇಂತಹ ಪ್ರದೇಶಗಳಲ್ಲಿ ಧೂಮಪಾನ ಮಾಡುವುದಕ್ಕಾಗಲಿ, ಅಥವಾ ಮಾರಾಟ ಮಾಡುವುದಕ್ಕಾಗಿ ಅವಕಾಶವನ್ನು ನೀಡಬಾರದು. ಜೊತೆಗೆ ನಿಯಮ ಉಲ್ಲಂಘಿಸಿದವರಿಗೆ ಯಾವುದೇ ಒತ್ತಡಕ್ಕೆ ಒಳಗಾಗದೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು.

-ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಕುಕ್ಕರಹಳ್ಳಿ ಕೆರೆ: ಒಣ ಮರ ತೆರವುಗೊಳಿಸಿ

ಮಾನ್ಯರೆ,

18.2.25.ರ ಸಂಜೆ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ನಡೆಯಲಿದ್ದ ನಾಟಕ ಪ್ರದರ್ಶನ ನೋಡಲು ಹೋಗಿದ್ದೆ. ಆಗ ಕಲಾಮಂದಿರದ ಕಾಂಪೌಂಡ್‌ನಿಂದ ಹೊರಗೆ ಕುಕ್ಕರಹಳ್ಳಿ ಕೆರೆ ಪ್ರದೇಶದ ಕಡೆ ಕಣ್ಣು ಹಾಯಿಸಿದಾಗ ಅಲ್ಲಿನ ಬಯಲಿನಲ್ಲಿ ಒತ್ತೊತ್ತಾಗಿ ಬೆಳೆದಿದ್ದ ಮರಗಳ ನಡುವೆ ದೊಡ್ಡ ದೊಡ್ಡ ಕೊಂಬೆ, ರಂಬೆಗಳು ಮುರಿದು ಬಿದ್ದಿದ್ದವು. ಅಥವಾ ಯಾರಾದರೂ ಮುರಿದು ಹಾಕಿದ್ದರೋ ಗೊತ್ತಿಲ್ಲ. ಆದರೆ ಈ ಒಣ ಮರಗಳಿಗೆ ಏನಾದರೂ ಆಕಸ್ಮಿಕವಾಗಿ ಬೆಂಕಿ ಬಿದ್ದರೆ ಇಡೀ ಕುಕ್ಕರಹಳ್ಳಿ ಕೆರೆಯ ಬಯಲಿನ ಕಿರು ಅರಣ್ಯವೇ ಉರಿದು ಭಸ್ಮವಾಗಲಿದೆ. ಅಲ್ಲದೆ ಇಲ್ಲಿ ಮನೆ ಮಾಡಿರುವ ಪಕ್ಷಿ, ಜೀವ ಸಂಕುಲಕ್ಕೆ ಮಾರಕವಾಗಲಿದೆ. ಚಾಮುಂಡಿ ಬೆಟ್ಟಕ್ಕೆ ಬಿದ್ದ ಬೆಂಕಿಯನ್ನು ನಂದಿಸಲು ಸಾಧ್ಯವಾಗದೆ ನೂರಾರು ಎಕರೆ ಅರಣ್ಯ ನಾಶವಾಗಿದೆ. ಕುಕ್ಕರಹಳ್ಳಿ ಕೆರೆ ನಿರ್ವಹಣೆಗೆ ಸಂಬಂಧ ಪಟ್ಟವರು ಕೂಡಲೇ ಈ ಬಗ್ಗೆ ಕ್ರಮ ವಹಿಸಲಿ.

-ಮುಳ್ಳೂರು ಪ್ರಕಾಶ್, ಕನಕದಾಸನಗರ ಮೈಸೂರು.

ಹೆದರದಿರಿ ಮಕ್ಕಳೇ... ಪರೀಕ್ಷೆ ಕ್ಷಣಿಕ; ಬದುಕು ಸಾರ್ಥಕ!



ಫೈಲ್ ಚಿತ್ರ

ಮಾರ್ಚ್-ಏಪ್ರಿಲ್ ತಿಂಗಳುಗಳು ಮಕ್ಕಳಿಗೆ ಪರೀಕ್ಷಾ ಕಾಲ. ಪರೀಕ್ಷೆಗಳು ಮುಗಿಯುವವರೆಗೂ ಮಕ್ಕಳಿಗೆ ನಿತ್ಯವೂ ಒತ್ತಡ, ನಿದ್ರೆ ಇಲ್ಲ. ಸರಿಯಾದ ಸಮಯಕ್ಕೆ ಊಟ ಮಾಡಲಾಗದು. ಮಾಡಿದರೂ ತೃಪ್ತಿಯಾಗಿ ತಿನ್ನಲಾಗದು. ಕೆಲವರಿಗೆ ಆಕಾಶವೇ ಕಳಚಿ ಬಿದ್ದಂತಾಗಿರುತ್ತದೆ. ಆ ರೀತಿ ಆಗುವ ಹಾಗೆ ಪೋಷಕರು ಮಕ್ಕಳ ಮನಸ್ಸನ್ನು ಹಿಂಡಿಬಿಟ್ಟಿರುತ್ತಾರೆ. ಬುದ್ಧಿವಂತನಿಂದ ದಡ್ಡನವರೆಗೂ ಒತ್ತಡವು ತಪ್ಪಿದ್ದಲ್ಲ. ಎರಡು-ಮೂರು ತಿಂಗಳು ಮಕ್ಕಳು ಹಾಗೂ ಪೋಷಕರಿಗೆ ಒತ್ತಡದ ಕಾಲವಾಗಿಬಿಟ್ಟಿರುತ್ತದೆ. ಓದು ಎಲ್ಲರಿಗೂ ಅವಶ್ಯಕವಾಗಿರುವಂತಹದ್ದು. ಇಂದು ಓದುಬರಹ ಇಲ್ಲದೇ ಇರುವವನು ಬದುಕಲು ಕಷ್ಟವಾಗಿದೆ. ಕನಿಷ್ಟ ಹತ್ತನೇ ತರಗತಿಯನ್ನಾದರೂ ಓದಿರಬೇಕು. ವಿದ್ಯಾವಂತರಷ್ಟೇ ಬದುಕಲು ಸಾಧ್ಯ. ಅವಿದ್ಯಾವಂತರು ಬದುಕು ಕಟ್ಟಿಕೊಳ್ಳಲು ಕಷ್ಟ ಎಂದು ಖಂಡಾತುಂಡವಾಗಿ ಹೇಳಲಾಗದು. ಶಾಲೆಯ ಮೆಟ್ಟಿಲನ್ನು ನೋಡದೇ ಇರುವವರೂ ಉನ್ನತ ವ್ಯಾಸಂಗ ಮಾಡಿದವರಿಗಿಂತ ಹೆಚ್ಚು ಸಾಧನೆ ಮಾಡಿದ್ದಾರೆ. ಸಾಧನೆಗೆ ಪ್ರತಿಯೊಬ್ಬರು ಅರ್ಹರೆ; ಇದಕ್ಕೆ ವಿದ್ಯೆಯ ಅವಶ್ಯಕತೆ ಇರಲೇಬೇಕಾಗಿಲ್ಲ. ಸಾಧಕರ ಚರಿತ್ರೆಯ ಕಡೆಗೆ ಇಣುಕಿದರೆ ತಿಳಿಯುವುದು. ಸಾಧನೆಗೆ ಅವಿದ್ಯಾವಂತ-ವಿದ್ಯಾವಂತ, ಹೆಣ್ಣು-ಗಂಡು, ದೊಡ್ಡವರು-ಚಿಕ್ಕವರು ಎಲ್ಲರೂ ಒಂದೇ.

ವಿದ್ಯೆ ವಿನಯವಂತಿಕೆಯನ್ನು ಕಲಿಸಬೇಕು. ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕು. ಇದ್ಯಾವುದು ಆಗದಿರುವುದನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ಶಾಲಾ-ಕಾಲೇಜುಗಳ ಪಠ್ಯದಲ್ಲಿ ಅಳವಡಿಸಿರುವ ವಿಷಯಗಳು ಮಕ್ಕಳನ್ನು ದಾರಿ ತಪ್ಪಿಸುತ್ತಿವೆಯೇ? ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿರುತ್ತದೆ. ಮೌಲ್ಯವಿಲ್ಲದ ಶಿಕ್ಷಣ ಕಲಿತವರನ್ನು ಉದ್ಧರಿಸುವುದಕ್ಕಿಂತ ಶಿಕ್ಷಿಸುತ್ತಿದೆ. ಬಹುತೇಕರಿಗೆ ಕಲಿತೂ ನಿಷ್ಪ್ರಯೋಜಕವಾಗುತ್ತಿದೆ.

ಶಾಲೆಗೆ ಹೋಗಿ ಏನೂ ಕಲಿಯದವನು ಬೆಳೆದಂತೆ ಹದಿಹರೆಯದರಲ್ಲೇ ಸಂಕೋಚವಿಲ್ಲದೆ ಬದುಕಿಗೊಂದು ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ನಾಲ್ಕಕ್ಷರದ ಅರಿವು ಇದ್ದರೆ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ, ವ್ಯವಸಾಯ, ಸಣ್ಣಪುಟ್ಟ ವಹಿವಾಟು, ಆರ್ಥಿಕವಾಗಿ ಹಿಂದುಳಿದಿದ್ದರೆ ಕೂಲಿಯನ್ನಾದರೂ ಮಾಡಿ ಬದುಕುತ್ತಾನೆ. ತ್ರಿಶಂಕು ಸ್ಥಿತಿಯಲ್ಲಿ ಇರುವವರೆಂದರೆ ಪದವಿ ಪಡೆದ ವಿದ್ಯಾವಂತರು, ಅದರಲ್ಲೂ ಉನ್ನತ ವ್ಯಾಸಂಗ ಮಾಡಿದವರು.

ಹೇಳಿಕೊಳ್ಳುವುದಕ್ಕೆ ಮತ್ತು ಹೆಸರಿನ ಪಕ್ಕ ಬರೆದುಕೊಳ್ಳಲು ಎರಡು-ಮೂರು ಪದವಿಗಳನ್ನು, ಸ್ನಾತಕೋತ್ತರ ಪದವಿಗಳನ್ನು ಶಾಲಾ-ಕಾಲೇಜುಗಳಿಗೆ ಹೋಗಿ ಗಳಿಸಿರುತ್ತಾನೆ. ಇವುಗಳಿಗಾಗಿ ಸರಿ ಸುಮಾರು ತನ್ನ ಜೀವಿತಕಾಲದ ಇಪ್ಪತ್ತೈದು ವರ್ಷಗಳನ್ನು ವ್ಯಹಿಸಿರುತ್ತಾನೆ. ಅಷ್ಟೂ ವಿದ್ಯೆಯೂ ತನ್ನ ಬದುಕಿಗೆ ಅನ್ನವನ್ನು ಕೊಡುವಲ್ಲಿ ವಿಫಲವಾಗುತ್ತವೆಯೆಂದರೆ ವಿದ್ಯೆಗೆ ಹಾಗೂ ಗಳಿಸಿದ ಪದವಿಗಳಿಗೆ ಏನನ್ನಬೇಕು?.

ಜ್ಞಾನಾರ್ಜನೆಗೆ ಲೋಕದ ತಿಳುವಳಿಕೆ ವಿದ್ಯೆ ಇರಲೇಬೇಕು. ಆದರೆ ತನ್ನ ಬದುಕನ್ನು ಕಟ್ಟಿಕೊಳ್ಳಲು, ನಂಬಿದ ಕುಟುಂಬವನ್ನು ಸಾಕುವುದಕ್ಕೆ, ಬೇಕು-ಬೇಡಗಳನ್ನು ಪೂರೈಸಿಕೊಳ್ಳಲು ಸಂಪಾದನೆಗೆ ವೃತ್ತಿ ಬೇಕೇಬೇಕು. ಗಳಿಕೆಗೆ ಬೇಕಿರುವ ವೃತ್ತಿಯನ್ನು ಕಲಿಸಿಕೊಡುವ ವಿದ್ಯೆ ನಮಗೆ ಬೇಕು.

ವ್ಯವಹರಿಸಲು ಮತ್ತು ಮುಂದಿನ ಬದುಕನ್ನು ನಿರ್ವಹಿಸಲು ಒಬ್ಬ ಮನುಷ್ಯನಿಗೆ ಹತ್ತನೇ ತರಗತಿಯವರೆಗೆ ಓದಿದ ವಿದ್ಯೆ ಸಾಕು. ಮುಂದಿನ ವಿದ್ಯೆ ಸರ್ಕಾರಿ ನೌಕರಿ ಪಡೆಯಲು ಇರಬೇಕಾದ ಅರ್ಹತೆ ಪರಿಗಣನೆಗೆ ಬೇಕಾಗಿರುವಂತಹದ್ದು. ಅನುಭವಕ್ಕಿಂತ ಮಿಗಿಲಾದ ವಿದ್ಯೆ ಇಲ್ಲ. ಜಮೀನನ್ನು ಉತ್ತು ಹಸನು ಮಾಡಿ ಚೆಂದವಾಗಿ ಬಿತ್ತನೆ ಮಾಡಿ ಕಾಲಕಾಲಕ್ಕೆ ನೀರು, ಗೊಬ್ಬರ ಕೊಟ್ಟು ಫಸಲು ತೆಗೆದು ಲೋಕದ ಮನುಕುಲಕ್ಕೆ ಅನ್ನ ನೀಡುವ ರೈತ ಯಾವುದೇ ಶಾಲಾ-ಕಾಲೇಜಿಗೆ ಹೋಗಿ ಕಲಿತು ಬೆಳೆ ಬೆಳೆದಿದ್ದಲ್ಲ. ಚಿಕ್ಕಂದಿನಿಂದ ತನ್ನ ಹಿರಿಯರ ಒಡಗೂಡಿ ಜಮೀನಿನಲ್ಲಿ ಪ್ರಾಯೋಗಿಕವಾಗಿ ದುಡಿದು ಕೃಷಿ ವೃತ್ತಿಯನ್ನು ಕಲಿತಿರುವಂತಹದ್ದು.

ಹಾಗೆಯೇ ಒಬ್ಬ ಬಡಗಿ, ಕಟ್ಟಡ ಕೆಲಸಗಾರ, ಕಮ್ಮಾರ, ಕ್ಷತ್ರಿಯ, ಚರ್ಮಕೆಲಸ, ಕುಂಬಾರಿಕೆ, ಬಟ್ಟೆ ನೇಯ್ಗೆ, ಹೊಲಿಗೆ, ಕುಶಲಕರ್ಮಿ, ಹಾಡುಗಾರ, ಕಲಾವಿದ, ಮೆಕ್ಯಾನಿಕ್, ಕಂಪ್ಯೂಟರ್ ರಿಪೇರಿ ಮಾಡುವವರು, ಇವರೆಲ್ಲರೂ ಶಾಲಾ-ಕಾಲೇಜಿಗೆ ಹೋಗಿ ಕಲಿತವರಲ್ಲ ಮತ್ತು ಇಂಗ್ಲಿಷ್ ಭಾಷೆ ತಿಳಿದವರಲ್ಲ. ಆದರೆ ಮಾಡುವ ಕೆಲಸದಲ್ಲಿ ನ್ಯೂನತೆ ಕಾಣದು. ನಿರಂತರ ಪ್ರಯತ್ನವೇ ಇವರ ಅಚ್ಚುಕಟ್ಟು ಹಾಗೂ ನಿಖರವಾದ ಕೆಲಸದ ತಳಪಾಯ.

> ಹುಟ್ಟಿಸಿದವನು ಹುಲ್ಲು ಮೇಯಿಸದೆ ಇರುವನೇ? ಚೆನ್ನಾಗಿ ಓದಿ ಧೈರ್ಯವಾಗಿ ಪರೀಕ್ಷೆ ಬರೆಯಿರಿ. ಫಲಾಫಲವನ್ನು ಆ ದೇವರಿಗೆ ಬಿಡಿ. ಪಾಸುಫೇಲುಗಳ ಚಿಂತೆ ಬೇಡ. ಏನೇ ಬಂದರು ನಗುತ್ತಾ ಸ್ವೀಕರಿಸಿ, ಆಗುವುದೆಲ್ಲ ಒಳ್ಳೆಯದಕ್ಕೆ. ನೆನಪಿರಲಿ, ನಿಮ್ಮ ಫೇಲು ಸಹ ಭವಿಷ್ಯವನ್ನು ಉಜ್ವಲ ದಿಕ್ಕಿಗೆ ಕರೆದುಕೊಂಡು ಹೋಗುವುದಿದೆ. ಜೀವನದಲ್ಲಿ ನೂರೆಂಟು ಪರೀಕ್ಷೆಗಳು ಎದುರಾಗುತ್ತವೆ. ಯಾವುದಾದರೊಂದು ಯಶಸ್ವಿಯಾದರೆ ಸಾಕು ಬದುಕು ಬಂಗಾರವಾಗುವುದು.

ಇಂದಿನ ವಿಶ್ವವಿದ್ಯಾಲಯಗಳು ಮೇಲಿನ ವೃತ್ತಿಗಳನ್ನು ಆದರಿಸಿ ಮೂರು ವರ್ಷದ ಡಿಪ್ಲೊಮಾ/ಪದವಿಗಳನ್ನು ನೀಡಲು ಪ್ರಾರಂಭಿಸಿವೆ. ಓದಿ ವೃತ್ತಿ ಆರಂಭಿಸಿದವರು ಖಂಡಿತ ಬಾಲ್ಯದಿಂದ ಕಲಿತವರಷ್ಟು ನಿಪುಣರಾಗಿರುವುದಿಲ್ಲ. ಇಂಜಿನಿಯರ್ ಅಥವಾ ವೈದ್ಯ ಪದವಿಗಳನ್ನು ಗಳಿಸಿ ಕೆಲವಾರು ವರ್ಷಗಳು ಪ್ರಾಯೋಗಿಕ ಅನುಭವವಿಲ್ಲದೆ ತಕ್ಷಣ ಇಂಜಿನಿಯರ್ ಕಟ್ಟಡವನ್ನಾಗಲಿ, ಡಾಕ್ಟರ್ ಚಿಕಿತ್ಸೆಯನ್ನಾಗಲಿ ಸಮರ್ಪಕವಾಗಿ ನೀಡಲಾರ. ಅನುಭವಿ ಮೇಸ್ತ್ರಿ ಅಥವಾ ಆರೋಗ್ಯ ಸಹಾಯಕರು ಹೊಸದಾಗಿ ಪದವಿ ಪಡೆದವರಿಗಿಂತ ಆಯಾ ವೃತ್ತಿಯನ್ನು ಚೆನ್ನಾಗಿಯೇ ನಿರ್ವಹಿಸಬಲ್ಲರು.

ಕ್ಷೇತ್ರ ಯಾವುದೇ ಇರಲಿ ಅಲ್ಲಿ ದೀರ್ಘಕಾಲ ನಿಷ್ಠೆಯಿಂದ ತೊಡಗಿಸಿಕೊಂಡವರು ಪರಿಣಿತಿಗಾಗಿ ವಿದ್ಯೆ ಪಡೆದವರಿಗಿಂತ ಚೆನ್ನಾಗಿ ಕೆಲಸ ನಿರ್ವಹಿಸಬಲ್ಲರು. ರ‍್ಯಾಂಕ್ ಪಸ್ಟ್‌ಕ್ಲಾಸ್‌ಗಳ ಸ್ಥಿತಿಯೂ ಅಷ್ಟೇ, ತಮ್ಮ ತಮ್ಮ ವೃತ್ತಿಯಲ್ಲಿ ಸಾಮಾನ್ಯ ದರ್ಜೆಯಲ್ಲಿ ಪಾಸಾದವರು ಜನರೊಟ್ಟಿಗೆ ಬೆರೆತು ಸೇವೆಯನ್ನು ಉತ್ತಮವಾಗಿಯೇ ನೀಡುವರು. ಬುದ್ಧಿವಂತ ಶಿಖಾಮಣಿಗಳು ಸಾರ್ವಜನಿಕವಾಗಿ ಬೆರೆಯುವುದೇ ಕಷ್ಟ.

ಇಷ್ಟೆಲ್ಲ ವಿವರಣೆ ಏಕೆಂದರೆ ಸಧ್ಯದಲ್ಲೇ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿವೆ, ವಿದ್ಯಾರ್ಥಿಗಳು ಹಾಗೂ ಪೋಷಕರು ಒತ್ತಡದಲ್ಲಿದ್ದಾರೆ. ನಂತರ ಕೆಲವೇ ದಿನಗಳಲ್ಲಿ ಫಲಿತಾಂಶಗಳು ಬರುತ್ತವೆ. ಈ ಮಕ್ಕಳಿಗಾಗಿ ವಾಸ್ತವವಾದ ಕೆಲವು ಅಂಶಗಳು ಮುಖ್ಯವಾಗಿ ಪೋಷಕರಿಗೆ ತಲುಪಿಸಬೇಕಿದೆ. ಪರೀಕ್ಷಾರ್ಥಿಗಳು ಅವಶ್ಯಕತೆ ಇರುವಷ್ಟು ನಿದ್ರಿಸದೆ ಉನ್ನತ ದರ್ಜೆಯಲ್ಲಿ ಪಾಸಾಗುವ ಉದ್ದೇಶದಿಂದ ಹೆಚ್ಚು ಓದಿ ಅಂಕಗಳನ್ನು ಗಳಿಸುತ್ತಾರೆ. ಆದರೂ ಬಹಳಷ್ಟು ಸಂಖ್ಯೆಯಲ್ಲಿ ಸಾಮಾನ್ಯ ದರ್ಜೆಯಲ್ಲಿ ಪಾಸಾಗುವ ಮಕ್ಕಳೇ ಅಧಿಕ ಸಂಖ್ಯೆಯಲ್ಲಿ ಇರುತ್ತಾರೆ. ಪರೀಕ್ಷೆಗಳನ್ನು ಎದುರಿಸುವ ಒಟ್ಟು ವಿದ್ಯಾರ್ಥಿಗಳಲ್ಲಿ ಫಲಿತಾಂಶ ಬಂದ ನಂತರ ಸುಖಿಸುವವರಿಗಿಂತ ದುಃಖಿಸುವವರೇ ಹೆಚ್ಚು. ಸುಖದುಃಖಗಳು ಇರಲಿ, ಆದರೆ ಅನಾಹುತಗಳು ನಡೆಯದಿರಲಿ.

ಪರೀಕ್ಷೆಗಳು ನಡೆಯುವ ಕಾಲಾವಧಿಯಲ್ಲಿ ಎಲ್ಲಾ ಪತ್ರಿಕೆಗಳಲ್ಲೂ ಒಂದೇ ಸುದ್ದಿ, ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಿ, ಎದೆಗುಂದದಿರಿ ಎನ್ನುವ ಸಲಹೆಗಳ ಜೊತೆಗೆ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕು? ಎಂಬುದರ ಬಗ್ಗೆ ಟಿಪ್ಸ್‌ಗಳು. ಇಷ್ಟಾಗಿಯೂ ಪರೀಕ್ಷೆ ಬಗ್ಗೆ ತಲೆಕೆಡಿಸಿಕೊಳ್ಳುವವರಿಗೆ ಲೆಕ್ಕವಿಲ್ಲ. ಫಲಿತಾಂಶ ಬಂದ ನಂತರ ಅನಾಹುತಗಳಿಗೆ ತಲೆಕೊಡುವವರು ಕಡಿಮೆ ಆಗಿಲ್ಲ.

ಪರೀಕ್ಷಾರ್ಥಿಗಳಿಗೆ ಪತ್ರಿಕೆಗಳಲ್ಲಿ ಬರುವ ಕೆಲವು ಟಿಪ್ಸ್‌ಗಳು: ಹೆಚ್ಚು ಆಹಾರ ತಿನ್ನಬೇಡಿ, ಭಯ ಆತಂಕ ಬೇಡ, ಹಾಲ್‌ಟಿಕೇಟ್ ಚೆಕ್ ಮಾಡಿಕೊಳ್ಳಿ, ಪರೀಕ್ಷಾ ಸಮಯಕ್ಕೆ ಅರ್ಧಗಂಟೆ ಮೊದಲೇ ಪರೀಕ್ಷಾ ಕೇಂದ್ರದಲ್ಲಿರಿ, ಎರಡು ಒಳ್ಳೆಯ ಪೆನ್ನು, ಪೆನ್ಸಿಲ್ ಮತ್ತು ಜಾಮಿಟ್ರಿ ಬಾಕ್ಸ್ ಜೊತೆಗಿರಲಿ, ಶಾಂತವಾಗಿರಿ. ಗಾಬರಿ ಬೇಡ, ಕ್ರಮವಾಗಿ ಸ್ಫುಟವಾಗಿ ಉತ್ತರಿಸಿ, ಸಮಯದ ಪಾಲನೆಗಾಗಿ ಒಂದು ವಾಚ್ ಇಟ್ಟುಕೊಳ್ಳಿ, ಪ್ರಶ್ನೆ ಸಂಖ್ಯೆ ಸರಿಯಾಗಿ ಬರೆಯಿರಿ, ಉತ್ತರಿಸಿದ ನಂತರ ಮತ್ತೊಮ್ಮೆ ಎಲ್ಲವನ್ನು ಸರಿಯಾಗಿದೆಯೇ? ಎಂಬುದನ್ನು ಖಾತ್ರಿಪಡಿಸಿಕೊಳ್ಳಿ... ಟಿಪ್ಸ್‌ಗಳಿಗೆ ಕೊನೆ ಇಲ್ಲ. ಪತ್ರಿಕೆಗಳಲ್ಲಿ ಬರುವ ಎಲ್ಲಾ ಟಿಪ್ಸ್‌ಗಳನ್ನು ಕ್ರೋಢೀಕರಿಸಿದರೆ ಒಂದು ದೊಡ್ಡ ಗ್ರಂಥವಾಗುವುದು.

ಪರೀಕ್ಷಾ ಭಯ ಇದ್ದವನಿಗೆ ಗೊತ್ತಿರುವ ಉತ್ತರವನ್ನು ಸಹ ಬರೆಯಲಾರ. ಆದ್ದರಿಂದ ಇಂತಹ ಟಿಪ್ಸ್‌ಗಳು ಕೆಲವರಿಗೆ ಉತ್ತೇಜಿಸುವ ಬದಲಾಗಿ ಭಯಭೀತರನ್ನಾಗಿಸುತ್ತವೆ. ಹಿಂದೆ ಇಂತಹ ಟಿಪ್ಸ್‌ಗಳನ್ನು ಕೊಡುವ ಉಚಿತ ಸಲಹೆಗಾರರು ಇರಲೇ ಇಲ್ಲ. ಪರೀಕ್ಷೆ ನಾಳೆ ಇದ್ದಾಗ್ಯೂ ಸಿನಿಮಾ ನೋಡಿ ಆತಂಕವಿಲ್ಲದೆ ಬರೆದವರಿದ್ದರು. ಅವರೆಲ್ಲ ಇಂದು ಉದ್ಧಾರವಾಗಿಲ್ಲವೇ?.

ಬಹುಶಃ ಮಕ್ಕಳಿಗೆ ಪರೀಕ್ಷೆಯ ಬಗ್ಗೆ ಪದೇಪದೇ ಹೇಳಿಹೇಳಿ ಅವರ ಆತ್ಮಸ್ಥೈರ್ಯವನ್ನು ಕಡಿಮೆ ಮಾಡುತ್ತಿರಬಹುದು. ಪರಿಣಾಮವಾಗಿ ಪ್ರತೀ ಫಲಿತಾಂಶದ ವೇಳೆಯಲ್ಲಿ ಪ್ರಾಣ ಕಳೆದುಕೊಳ್ಳುವ ವಿದ್ಯಾರ್ಥಿಗಳು ಪತ್ರಿಕೆಯಲ್ಲಿ ಸುದ್ದಿ ಆಗುವುದನ್ನು ಓದುತ್ತಿದ್ದೇವೆ.

ಬಹಳ ಹಿಂದೆ ಅಂತು ಅಲ್ಲ, ನಮ್ಮ ಕಾಲದಲ್ಲೇ ಮೂರುನಾಲ್ಕು ದಶಕಗಳ ಹಿಂದೆ ಪರೀಕ್ಷೆಗಳಿಗೆ ಇಷ್ಟೊಂದು ಮಹತ್ವ ಕೊಡುತ್ತಿರಲಿಲ್ಲ. ಪಾಸಾದವರಿಗೆ ಒಂದಷ್ಟು ಹೊಗಳಿಕೆಯ ಮಾತುಗಳು ಇರುತ್ತಿದ್ದವು, ಫೇಲಾದವರನ್ನು ಅಷ್ಟಾಗಿ ಕಡೆಗಣಿಸುತ್ತಿರಲಿಲ್ಲ. ಸದ್ಯ ವ್ಯವಸಾಯಕ್ಕೆ ಒಬ್ಬ ಮಗ ಸಿಕ್ಕಂತಾಯಿತು ಎನ್ನುವುದು ಅವರ ಖುಷಿಯ ವಿಚಾರವಾಗಿತ್ತು. ನೌಕರರ ಮಕ್ಕಳಿದ್ದರೂ ಸಹ ಪೋಷಕರು ಮತ್ತೊಮ್ಮೆ ಪರೀಕ್ಷೆ ಬರೆದರಾಯಿತು ಎಂದು ಮಕ್ಕಳಿಗೆ ಧೈರ್ಯ ಹೇಳುತ್ತಿದ್ದರು. ಮಕ್ಕಳಿಗೆ ವಿದ್ಯೆ ಬಲವಂತದ ಹೇರಿಕೆ ಆಗಿರಲಿಲ್ಲ, ಆ ಕಾರಣದಿಂದ ಅನಾಹುತಗಳಿಗೆ ಆಸ್ಪದ ಇರಲಿಲ್ಲ. ಅಂದಿನ ದಿನಗಳಲ್ಲಿ ಪ್ರಚೋದಿಸುವ ಮಾಧ್ಯಮಗಳು ಇಲ್ಲದಿದ್ದುದ್ದು ಸಹ ಪ್ಲಸ್ ಪಾಯಿಂಟ್ ಆಗಿತ್ತು.

ಹುಟ್ಟಿಸಿದವನು ಹುಲ್ಲು ಮೇಯಿಸದೆ ಇರುವನೇ? ಚೆನ್ನಾಗಿ ಓದಿ ಧೈರ್ಯವಾಗಿ ಪರೀಕ್ಷೆ ಬರೆಯಿರಿ. ಫಲಾಫಲವನ್ನು ಆ ದೇವರಿಗೆ ಬಿಡಿ. ಪಾಸುಫೇಲುಗಳ ಚಿಂತೆ ಬೇಡ, ಏನೇ ಬಂದರು ನಗುತ್ತಾ ಸ್ವೀಕರಿಸಿ, ಆಗುವುದೆಲ್ಲ ಒಳ್ಳೆಯದಕ್ಕೆ. ನೆನಪಿರಲಿ, ನಿಮ್ಮ ಫೇಲು ಸಹ ಭವಿಷ್ಯವನ್ನು ಉಜ್ವಲ ದಿಕ್ಕಿಗೆ ಕರೆದುಕೊಂಡು ಹೋಗುವುದಿದೆ. ನಿಮಗೆ ಒಂದು ನನ್ನದೇ ಜೀವನದ ಉದಾಹರಣೆ ಕೊಡುತ್ತೇನೆ. ನಾನು ರ‍್ಯಾಂಕ್ ಪಡೆದು ಸರ್ಕಾರಿ ನೌಕರಿಗೆ ಸೇರಿ ಸಾಮಾನ್ಯ ಬದುಕು ನಡೆಸಿ ನಿವೃತ್ತಿಯಾದೆ. ನನ್ನ ಗೆಳೆಯ ಜಸ್ಟ್ ಪಾಸ್ ಸರ್ಕಾರಿ ಕೆಲಸ ಸಿಗಲಿಲ್ಲ. ಸುಮ್ಮನಿರಲಿಲ್ಲ, ಸ್ವಪ್ರಯತ್ನದಿಂದ ಸರ್ಕಾರವನ್ನೇ ನಡೆಸುವ ರಾಜ್ಯದ ಪ್ರತಿಷ್ಠಿತ ಮಂತ್ರಿಯಾಗಿ ನಾಲ್ಕಾರು ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅವರನ್ನು ಭೇಟಿಯಾಗಲು ಐಎಎಸ್ ಹಾಗೂ ಹೆಚ್ಚು ಕಲಿತವರು ಬಾಗಿಲಲ್ಲಿ ಕಾಯುತ್ತಿರುತ್ತಾರೆ. ಇಂದಿನ ಸರ್ಕಾರದಲ್ಲೂ ಅವರು ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿದ್ದಾರೆ.

ಮಕ್ಕಳೇ ಎಲ್ಲರ ಭವಿಷ್ಯದ ಬದುಕನ್ನು ಭಗವಂತ ಬರೆದು ಮುಗಿಸಿದ್ದಾನೆ. ನಡೆಯುವುದೆಲ್ಲ ಅದರಂತೆಯೇ ನಡೆಯುವುದು. ಹಾಗಂತ ಓದುವುದನ್ನು ನಿಲ್ಲಿಸಿ, ಪುಸ್ತಕ ಮುಚ್ಚಿ ಕಾಲಹರಣ ಮಾಡುವುದಲ್ಲ. ಪರೀಕ್ಷೆಗೆ ಭಯಗೊಳ್ಳದೆ ಮಾನಸಿಕ ಒತ್ತಡದಿಂದ ಹೊರಬಂದು ಶ್ರಮ, ಶ್ರದ್ಧೆ ಹಾಕಿ ಚೆನ್ನಾಗಿ ಬರೆಯಿರಿ. ಫಲಿತಾಂಶ ಏನೇ ಬರಲಿ, ಅದು ಭಗವಂತ ಈಗಾಗಲೇ ಬರೆದಿರುವ ಭವಿಷ್ಯಕ್ಕೆ ಪೂರಕವಾಗಿರುತ್ತದೆ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿ. ಬಹುತೇಕ ಅದು ಒಳ್ಳೆಯದಕ್ಕೇ ಆಗಿರುತ್ತದೆ. ಜೀವನದಲ್ಲಿ ನೂರೆಂಟು ಪರೀಕ್ಷೆಗಳು ಎದುರಾಗುತ್ತವೆ ಯಾವುದಾದರೊಂದು ಯಶಸ್ವಿ ಆದರೆ ಸಾಕು ಬದುಕು ಬಂಗಾರವಾಗುವುದು.



ಮಿರ್ಲೆ ಚಂದ್ರಶೇಖರ
ಮೊ: 9916129654

ಮಹಾನ್ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್, ನರ್ಸಿಂಗ್ ಹೋಮ್ಸ್, ಕ್ಲಿನಿಕ್ಸ್ ಅಂಡ್ ಡಯಾಗ್ನೊಸ್ಟಿಕ್ ಸೆಂಟರ್ (ಮಹಾನ್) ವಾರ್ಷಿಕ ಮಹಾಸಭೆ ಮೈಸೂರಿನ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ ಅಸೋಸಿಯೇಷನ್‌ನ ನೂತನ ಅಧ್ಯಕ್ಷರಾಗಿ ಡಾ.ಜಿ.ಆರ್.ಚಂದ್ರಶೇಖರ್ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಡಾ.ಎನ್.ವಿನಯ್ ಚೆಲುವರಾಜ್, ಡಾ.ಬಿ.ಎನ್.ರಾಜೀವ್, ಕೆ.ಎಸ್.ಗುರುರಾಜ, ಕಾರ್ಯದರ್ಶಿಯಾಗಿ ಡಾ.ಹೆಚ್.ಆರ್.ಅಭಿಜಿತ್, ಜಂಟಿ ಕಾರ್ಯದರ್ಶಿಯಾಗಿ ಡಾ.ಆರ್.ಬಸವರಾಜು, ಖಜಾಂಚಿಯಾಗಿ ಡಾ.ರಾಜಗೋಪಾಲ್ ಕುಣತ್ತೂರು ಆಯ್ಕೆಯಾದರು. ಈ ವೇಳೆ ಮಹಾನ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ಮಹೇಶ್‌ಕುಮಾರ್, ನಿರ್ಗಮಿತ ಅಧ್ಯಕ್ಷ ಡಾ.ಜಾವೀದ್ ನಯೀಮ್ ಉಪಸ್ಥಿತರಿದ್ದರು.

32 ಭಾರತೀಯ ಮೀನುಗಾರರನ್ನು ಬಂಧಿಸಿದ ಶ್ರೀಲಂಕಾ ನೌಕಾಪಡೆ

ಕೊಲಂಬೊ: ದ್ವೀಪ ರಾಷ್ಟ್ರದ ಪ್ರಾದೇಶಿಕ ಜಲಪ್ರದೇಶಕ್ಕೆ ನುಗ್ಗಿದ ಆರೋಪದ ಮೇಲೆ 32 ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಬಂಧಿಸಿ, 5 ಮೀನುಗಾರಿಕಾ ದೋಣಿಗಳನ್ನು ವಶಪಡಿಸಿಕೊಂಡಿದೆ. ಮನ್ನಾರ್‌ನ ಉತ್ತರದ ಸಮುದ್ರ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ ಸಂದರ್ಭದಲ್ಲಿ ಮೀನುಗಾರರನ್ನು ಬಂಧಿಸಲಾಗಿದೆ ಎಂದು ಶ್ರೀಲಂಕಾ ನೌಕಾಪಡೆ ತಿಳಿಸಿದೆ. ಶ್ರೀಲಂಕಾದ ಸಮುದ್ರದಲ್ಲಿ ಮೀನುಗಾರಿಕೆ ನಡೆಸುತ್ತಿದ್ದಾಗ 5 ದೋಣಿಗಳನ್ನು ವಶಪಡಿಸಿಕೊಳ್ಳಲಾಗಿದ್ದು, 32 ಭಾರತೀಯ ಮೀನುಗಾರರನ್ನು ಬಂಧಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ಅಕ್ರಮ ಮೀನುಗಾರಿಕೆಯನ್ನು ತಡೆಯಲು ನೌಕಾಪಡೆಯು ಶ್ರೀಲಂಕಾದ ಪ್ರದೇಶದಲ್ಲಿ ನಿಯಮಿತ ಗಸ್ತು ಮತ್ತು ಕಾರ್ಯಾಚರಣೆಗಳನ್ನು ಮುಂದುವರೆಸಿದೆ. ಸ್ಥಳೀಯ ಮೀನುಗಾರರ ಜೀವನೋಪಾಯದ ಮೇಲೆ ಆ ಅಭ್ಯಾಸಗಳು ಬೀರುವ ಪರಿಣಾಮವನ್ನು ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿಕೆ ತಿಳಿಸಿದೆ.

ಬಂಧಿತ ಮೀನುಗಾರರನ್ನು ಮತ್ತು ಅವರ ದೋಣಿಗಳನ್ನು ತಲೈಮನ್ನಾರ್ ಪಿಯರ್‌ಗೆ ತರಲಾಗಿದ್ದು, ಕಾನೂನು ಕ್ರಮಕ್ಕಾಗಿ ಮನ್ನಾರ್‌ನ ಮೀನುಗಾರಿಕಾ ನಿರೀಕ್ಷಕರಿಗೆ ಹಸ್ತಾಂತರಿಸಲಾಗುವುದು ಎಂದು ನೌಕಾಪಡೆ ತಿಳಿಸಿದೆ.

ಅಂಗವಿಕಲರಿಗೆ ಅನುಕಂಪದ ಬದಲು ಅವಕಾಶ ನೀಡಿ

ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಮಾಜಿ ಆಯುಕ್ತ ರಾಜಣ್ಣ ಕರೆ

ಮೈಸೂರು, ಫೆ.23(ಜಿಎ)-ನ್ಯೂನತೆಗಳಿದ್ದರೂ ಸಾಧನೆ ಮಾಡಬಹುದು ಎಂಬುದನ್ನು ಅಂಗವಿಕಲರು ಎಲ್ಲಾ ಕ್ಷೇತ್ರದಲ್ಲಿ ತೋರಿಸಿಕೊಟ್ಟಿದ್ದಾರೆ. ಅವರಿಗೆ ಅನುಕಂಪ ತೋರಿಸುವ ಬದಲು ಅವಕಾಶ ನೀಡಿ ಎಂದು ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಮಾಜಿ ಆಯುಕ್ತ, ಪದ್ಮಶ್ರೀ ಪುರಸ್ಕೃತರಾದ ಕೆ.ಎಸ್.ರಾಜಣ್ಣ ಕರೆ ನೀಡಿದರು.

ಮೈಸೂರಿನ ಜೆಪಿ ನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಲಯನ್ಸ್ ಜಿಲ್ಲೆ 317 ಜಿ ಪ್ರಾಂತ್ಯ-1ರ ಪ್ರಾಂತೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಅಂಗವಿಕಲರು ಯಾವುದೇ ಕಾರಣಕ್ಕೂ ವಿಶ್ವಾಸ ಕಳೆದುಕೊಳ್ಳಬಾರದು. ತಮ್ಮ ಸ್ಥಿತಿಯ ಬಗ್ಗೆ ಕೀಳರಿಮೆ ಬೆಳೆಸಿಕೊಳ್ಳಬಾರದು. ಸಮಾಜ ಅವರನ್ನು ಕೀಳಾಗಿ ಕಾಣದೆ, ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು ಎಂದರು.

ನ್ಯೂನತೆ ಇದ್ದರೂ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ. ನನ್ನ ಹೆತ್ತವರು ಕಷ್ಟ ಪಟ್ಟು ಬೆಳೆಸಿದ್ದಾರೆ. ಧೃತಿಗೆಡದೆ ಹರ ಸಾಹಸ ಪಟ್ಟು ವಿದ್ಯಾಭ್ಯಾಸ ನೀಡಿದ್ದಾರೆ. ಅಸ್ತಿತ್ವ ದೊರಕಿಸಿದ್ದಾರೆ. ಅವರ ಪರಿಶ್ರಮದಿಂದ ಸಾಧನೆ ಮಾಡಿದ್ದು, ಪದ್ಮಶ್ರೀ ಪ್ರಶಸ್ತಿಯೂ ಲಭಿಸಿದೆ. ಇದು ದಿವ್ಯಾಂಗರಿಗೆ ದೊರೆತ ಜಯವಾಗಿದೆ ಎಂದರು.



ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಲಯನ್ಸ್ ಜಿಲ್ಲೆ 317ಜಿ ಪ್ರಾಂತ್ಯ 1ರ ಪ್ರಾಂತೀಯ ಸಮ್ಮೇಳನವನ್ನು ಪದ್ಮಶ್ರೀ ಪುರಸ್ಕೃತ ಕೆ.ಎಸ್.ರಾಜಣ್ಣ ಉದ್ಘಾಟಿಸಿದರು.

ರಾಜಕೀಯ ಮಾತ್ರವಲ್ಲದೇ ಬೇರೆ ಕ್ಷೇತ್ರಗಳ ಬಗ್ಗೆಯೂ ಕಾಳಜಿ ಹೊಂದಿರುವ ಪ್ರಧಾನಮಂತ್ರಿ ಮೋದಿ ಅವರು ಅಂಗವಿಕಲರಿಗೆ ದಿವ್ಯಾಂಗರು ಎಂಬ ವಿಶೇಷ ಪದ ನೀಡಿದ್ದಾರೆ. ಹೆಣ್ಣು ಮಕ್ಕಳು, ಬಡವರು, ರೈತರು, ಅಂಗವಿಕಲರು ಸೇರಿದಂತೆ ಎಲ್ಲರ ಏಳಿಗೆಗೆ ಪ್ರಧಾನಿಗಳು ಶ್ರಮಿಸುತ್ತಿದ್ದು, ಕೊಡುಗೆ ನೀಡು ತ್ತಿದ್ದಾರೆ. ನನಗೆ ರಾಜ್ಯಸಭೆಗೆ ಅವಕಾಶ ನೀಡುವಂತೆ ಅವರ ಬಳಿ ಮನವಿ ಮಾಡಲಾಗಿದ್ದು, ಒಪ್ಪಿಗೆಯೂ ಸೂಚಿಸಿದ್ದಾರೆ ಎಂದು ತಿಳಿಸಿದರು.

ಕಾಡಿನ ರಾಜನಂತೆ ವಿಶ್ವದ ರಾಜನಾಗಿ ಲಯನ್ ಸಂಸ್ಥೆ ಇದೆ. ದಿವ್ಯಾಂಗರಿಗೆ ಜ್ಯೋತಿಯಾಗಿದ್ದು, ವಿಶೇಷ ಚೇತನರದೊಳಗಿನ ಅದಮ್ಯ ಚೇತನ ಘೋಷವಾಕ್ಯದಡಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ವಿಶೇಷ. ಈ ಮೂಲಕ ಲಯನ್ಸ್ ಸೇವೆಗೆ ನಾನು ಕೂಡ ಬದ್ಧ ಎಂದು ಹೇಳಿದರು.

ಪ್ರಾಂತೀಯ ಅಧ್ಯಕ್ಷ ವಿ.ಸಿ.ರವಿಕುಮಾರ್ ಮಾತನಾಡಿ, ಲಯನ್ಸ್ ಸಂಸ್ಥೆ ಅತ್ಯುತ್ತಮ ಸೇವಾ ಸಂಸ್ಥೆಯಾಗಿ ಗುರುತಿಸಿಕೊಂಡಿದೆ. ಉತ್ತಮ ಸದುದ್ದೇಶದಿಂದ ಹಲವು ಸೇವಾ ಚಟುವಟಿಕೆ ಹಮ್ಮಿಕೊಳ್ಳಲಾಗಿದ್ದು, ಸಮಾಜದ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದರು.

ಮಲ್ಟಿಪಲ್ ಕೌನ್ಸಿಲ್ ಛೇರ್ ಪರ್ಸನ್ ಎನ್.ಕೃಷ್ಣೇಗೌಡ ಮಾತನಾಡಿ, ಸಹಾಯ ಮಾಡುವ ಮನೋಭಾವ ಇರುವುದರಿಂದ ಸದಸ್ಯರೇ ಹಣ ಹಾಕಿ ಸಮಾಜದಲ್ಲಿರುವ ಅಸಹಾಯಕರಿಗೆ ಸಹಾಯ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ರಾಜಕಾರಣಿಗಳು ಮತಕ್ಕಾಗಿ ಜನರ ಸೇವೆ ಮಾಡಿದರೆ, ಲಯನ್ಸ್ ಸಂಸ್ಥೆಯ ಸದಸ್ಯರು ನಿಸ್ವಾರ್ಥವಾಗಿ ಸೇವೆ ಮಾಡುತ್ತಾರೆ ಎಂದರು. ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಎನ್.ಲಕ್ಷ್ಮೀನಾರಾಯಣಗೌಡ, ಮಾನವ ಕಂಪ್ಯೂಟರ್ ಬಸವರಾಜ್ ಶಂಕರ್ ಉಮ್ರಾಣಿ, ಸಮ್ಮೇಳನದ ಅತಿಥೇಯ ಸಮಿತಿ ಅಧ್ಯಕ್ಷ ಎಸ್.ಮೂರ್ತಿ, ಸಲಹೆಗಾರ ಕೆ.ದೇವೇಗೌಡ, ಉಪಾಧ್ಯಕ್ಷ ನಂಜುಂಡಸ್ವಾಮಿ, ಎನ್.ಸುಬ್ರಮಣ್ಯ, ಕಾರ್ಯದರ್ಶಿ ಜಯಕುಮಾರ್, ಖಜಾಂಚಿ ಕೆ.ರವಿ, ಸಿ.ಡಿ.ಕೃಷ್ಣ, ಶಿಲ್ಪಾ ರವಿಕುಮಾರ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಸೋಮವಾರ 24 ಫೆಬ್ರವರಿ 2025

ಧರ್ಮಪಾಲಕರಿಗೆ ಶ್ರೀಕೃಷ್ಣ ಪರಮಾತ್ಮ ಒಲಿಯುತ್ತಾನೆ

ಶ್ರೀ ವ್ಯಾಸರಾಯ ಮಠದ ಪಂ.ಬ್ರಹ್ಮಣ್ಯಾಚಾರ್ಯ ಅಭಿಮತ



ಗಾನಸಿರಿ–ವೇದಾಂತ ಲಹರಿ ಭಾಗ–12ರ ಕಾರ್ಯಕ್ರಮದಲ್ಲಿ ಶ್ರೀ ವ್ಯಾಸರಾಯ ಮಠದ ಪಂ.ಬ್ರಹ್ಮಣ್ಯಾಚಾರ್ಯ ಪ್ರವಚನ ನೀಡಿದರು.

ಮೈಸೂರು, ಫೆ.23(ಎಸ್‌ಪಿಎನ್)– ಶ್ರೀಕೃಷ್ಣ ಪರಮಾತ್ಮ ಧರ್ಮಪಾಲಕರಿಗೆ ಬಹುಬೇಗ ಒಲಿಯುತ್ತಾನೆ ಆದರೆ, ಅಧರ್ಮಿಯರಿಗೆ ಎಂದಿಗೂ ಒಲಿಯುವುದಿಲ್ಲ ಎಂದು ಶ್ರೀ ವ್ಯಾಸರಾಯ ಮಠದ ಪಂ. ಬ್ರಹ್ಮಣ್ಯಾ ಚಾರ್ಯ ಅಭಿಪ್ರಾಯಪಟ್ಟರು.

ಮೈಸೂರು ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಏರ್ಪಡಿಸಿರುವ ಗಾನಸಿರಿ–ವೇದಾಂತ ಲಹರಿ ಭಾಗ–12ರ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶ್ರೀಕೃಷ್ಣ ಪರಮಾತ್ಮ ಎಲ್ಲರಿಗೂ ಒಲಿಯುವುದಿಲ್ಲ. ಯಾರೂ ಧರ್ಮ ನಿಷ್ಠರಿರುತ್ತಾರೋ ಅಂತಹ ಭಕ್ತರ ಕೂಗಿಗೆ ಸದಾ ಭಗವಂತ ಒಲಿಯುತ್ತಾನೆ. ಭಕ್ತರ ಕಷ್ಟಗಳ ನಿವಾರಣೆಗೆ ಮುಂದಾಗುತ್ತಾನೆ. ಯಾರೂ ಭಗವಂತನ ಅಸ್ತಿತ್ವವನ್ನು ಪ್ರಶ್ನಿಸುತ್ತಾರೋ ಅತಂಹವರ ಪಾಲಿಗೆ ಭಗವಂತನಿಲ್ಲ. ಶ್ರೀಕೃಷ್ಣ ಪರಮಾತ್ಮ ದುಷ್ಟರಿಗೂ ತಿದ್ದಿಕೊಳ್ಳುವ ಮೊದಲು ಅವಕಾಶ ನೀಡುತ್ತಾನೆ. ತಿದ್ದಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವ ವ್ಯಕ್ತಿಗಳನ್ನು ಶಿಕ್ಷಿಸುತ್ತಾನೆ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು.

ಭಕ್ತರು ಭಗವಂತನ ಸೇವೆ ಮಾಡುವುದರಿಂದ ಭಕ್ತರ ಕಷ್ಟದಲ್ಲಿಯೂ ಶ್ರೀ ಕೃಷ್ಣ ಭಾಗಿಯಾಗಿ ಸಮಸ್ಯೆಗಳನ್ನು ನಿವಾರಿಸುತ್ತಾನೆ. ಆದರೆ, ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಹಾಗಾಗಿ ಭಕ್ತಿ ಮಾರ್ಗವನ್ನು ಅನುಸರಿಸಿ, ಗುರು–ಹಿರಿಯ ಗೌರವಿಸುವುದು ಯುವಕರ ಆದ್ಯ ಕರ್ತವ್ಯವಾಗಬೇಕು ಎಂದ ಅವರು, ಆಚಾರ್ಯರಿಗೆ ಶ್ರೀಕೃಷ್ಣ ದಕ್ಷಣೆ ಕೊಡದಿದ್ದರೂ ಆಚಾರ್ಯರೇ ಭಗವಂತನ ಪ್ರದಕ್ಷಣೆ ಹಾಕಿದ್ದ ಪ್ರಸಂಗ ಎಳೆಎಳೆಯಾಗಿ ಬಿಡಿಸಿದರು. ಈ ವೇಳೆ ವಿದ್ವಾನ್ ರಾಯಚೂರು ಶೇಷಗಿರಿ ದಾಸ್ ಹರಿದಾಸ ಕೀರ್ತನೆಗಳನ್ನು ಹಾಡಿ, ಪ್ರೇಕ್ಷಕರ ಮನಗೆದ್ದರು.

ಮುಂದಿನ 5 ದಿನಗಳಲ್ಲಿ ರಾಜ್ಯದಲ್ಲಿ ಹೆಚ್ಚಲಿದೆ ಬಿಸಿಲ ಧಗೆ

ಬೆಂಗಳೂರು, ಫೆ.23– ರಾಜ್ಯದಲ್ಲಿ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿದ್ದು, ಮುಂದಿನ ಐದು ದಿನಗಳಲ್ಲಿ ಕೆಲವೆಡೆ ಉಷ್ಣಾಂಶದಲ್ಲಿ 4ರಿಂದ 5 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಹಲವೆಡೆ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕ ಉಷ್ಣಾಂಶ ದಾಖಲಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಪ್ರತಿನಿತ್ಯ ಗರಿಷ್ಠ ಉಷ್ಣಾಂಶವು 35 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಮುಂದಿನ ಐದು ದಿನಗಳಲ್ಲಿ ಏರುಗತಿ ಪಡೆಯುವ ಸಾಧ್ಯತೆಯಿದ್ದು, ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 5 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗುವ ಸಂಭವವಿದೆ. ದಕ್ಷಿಣ ಒಳನಾಡಿನಲ್ಲಿ ಎರಡು ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸೋಮವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮೈಸೂರಲ್ಲಿ 350 ಕೋಟಿ ರೂ. ಹೂಡಿಕೆಗೆ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆ



ಕಾರ್ಲ್ಸ್ ಬರ್ಗ್ ಇಂಡಿಯಾ ಮೈಸೂರಲ್ಲಿ 350 ಕೋಟಿ ಹೂಡಿಕೆಗೆ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡಿತು.

ಮೈಸೂರು, ಫೆ.23–ಕಾರ್ಲ್ಸ್ ಬರ್ಗ್ ಇಂಡಿಯಾ ಕನಾಟಕದಲ್ಲಿ ಮಹತ್ವದ ಹೂಡಿಕೆಯನ್ನು ಮಾಡುತ್ತಿರುವುದರ ಮೂಲಕ ಅದರ ಬದ್ಧತೆಯನ್ನು ಪುನರಾವರ್ತಿಸಿದೆ. ಮೈಸೂರಲ್ಲಿ 350 ಕೋಟಿ ಹೂಡಿಕೆಗೆ ರಾಜ್ಯ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಇನ್ವೆಸ್ಟ್ ಕರ್ನಾಟಕ 2025ರ ಉದ್ಘಾಟನಾ ದಿನದಲ್ಲಿ ಕಾರ್ಲ್ಸ್ ಬರ್ಗ್ ಇಂಡಿಯಾ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಮಾಡಿದ್ದು, ರಾಜ್ಯದಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿಯ ಹೊಸ ಹಂತವನ್ನು ಸೂಚಿಸುತ್ತದೆ. 350 ಕೋಟಿಯ ಹೂಡಿಕೆಗೆ ಕಾರ್ಲ್ಸ್ ಬರ್ಗ್ ಇಂಡಿಯಾದ ಮೈಸೂರಿನ ಬ್ರ್ಯೂವರಿ ವಿಸ್ತಾರಗೊಳ್ಳುವುದು, ಹೊಸ ಕ್ಯಾನ್‌ಲೈನ್, ಗ್ಯಾಸ್‌ಲೈನ್ ಮತ್ತು ಕೇಗ್ ಲೈನ್ ಸೇರಿಸುವ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಈ ವಿಸ್ತರಣೆ ಸಾಮರ್ಥ್ಯವನ್ನು ಸುಧಾರಿಸಲು ಮತ್ತು ಗ್ರಾಹಕರ ಬೇಡಿಕೆಯನ್ನು ಸಮರ್ಥವಾಗಿ ಪೂರೈಸಲು ಸಹಾಯ ಮಾಡುತ್ತದೆ. ಕಾರ್ಲ್ಸ್ ಬರ್ಗ್ ಇಂಡಿಯಾದ ಮೈಸೂರಿನ ಬ್ರ್ಯೂವರಿ, ನಂಜನಗೂಡು ತಾಲೂಕಿನಲ್ಲಿ 28 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಪ್ರಸ್ತುತ 80 ಮಿಲಿಯನ್ ಲೀಟರ್ ವಾರ್ಷಿಕ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಕಾರ್ಲ್ಸ್ ಬರ್ಗ್ ಮತ್ತು ಟ್ಯೂಬೋರ್ಗ್ ಉತ್ಪನ್ನಗಳನ್ನು ಉತ್ಪಾದಿಸುತ್ತದೆ ಎಂದು ಕಾರ್ಲ್ಸ್ ಬರ್ಗ್ ಇಂಡಿಯಾ ಎಂಡಿ ನಿಲೇಶ್ ಪಟೇಲ್ ತಿಳಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವದಲ್ಲಿ ನೃತ್ಯ ಪ್ರದರ್ಶನ...



ಮೈಸೂರು ತಾಲೂಕಿನ ವಾಜಮಂಗಲ ಗ್ರಾಮದ ರೋಟರಿ ಶಾಲೆಯ ವಾರ್ಷಿಕೋತ್ಸವ ನಡೆಯಿತು. ಮಕ್ಕಳು ನೃತ್ಯ ಪ್ರದರ್ಶನ ನೀಡಿ ರಂಜಿಸಿದರು. ಕಾರ್ಯಕ್ರಮದಲ್ಲಿ ರೋ. ಯಶಸ್ವಿ ಎಸ್.ಸೋಮಶೇಖರ್, ರೋ. ರಚನಾ ನಾಗೇಶ್, ರೋ. ಎಂ.ಜೆ.ಸ್ವಾಮಿ, ರೋ. ಪಿ.ಪ್ರಭಾಕರ್, ಎಲ್.ಆರ್.ಮಹದೇವಸ್ವಾಮಿ, ಗಣೇಶ್ ಲಾಡ್, ಶ್ರೀಮತಿ ಸುಂದರಮ್ಮ, ಪಿ.ಕೆ.ದೀಪು, ಕು.ಲತಾ ಮತ್ತಿತರರು ಉಪಸ್ಥಿತರಿದ್ದರು.

ಸ್ಕೌಟ್ ಮತ್ತು ಗೈಡ್ ಸಂಸ್ಥಾಪನಾ ದಿನಾಚರಣೆ



ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲೆಯ ಪಂಚತಾರಣಿ ಸ್ಕೌಟ್ ಟ್ರೂಪ್ ವತಿಯಿಂದ ಸ್ಕೌಟ್ ಫೌಂಡೇಶನ್ ಡೇ ಅಂಗವಾಗಿ ಸ್ಕೌಟ್‌ಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದ ಸ್ಕೌಟ್‌ಗಳಿಗೆ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಡಿ.ಆರ್. ಕವಿತಾ ಬಹುಮಾನಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಲಿಂಗದೇವರ ಕೊಪ್ಪಲು ಸರ್ಕಾರಿ ಶಾಲೆಯಲ್ಲಿ ಕಲಿಕಾ ಹಬ್ಬ

ಮೈಸೂರು, ಫೆ.23(ಎಂಟಿವೈ)– ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಶಿಕ್ಷಕರು ಹಾಗೂ ಪೋಷಕರು ಮುಂದಾಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್ ತಿಳಿಸಿದ್ದಾರೆ.

ಮೈಸೂರು ತಾಲೂಕಿನ ಲಿಂಗದೇವರ ಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಎಫ್‌ಎಲ್‌ಎನ್ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಮಕ್ಕಳಲ್ಲೂ ಒಂದಲ್ಲಾ ಒಂದು ರೀತಿಯ ಪ್ರತಿಭೆ ಇರುತ್ತದೆ. ಆ ಪ್ರತಿಭೆಯನ್ನು ಗುರುತಿಸುವ ಕೆಲಸವಾಗಬೇಕು. ಮಕ್ಕಳಲ್ಲಿರುವ ಪ್ರತಿಭೆ ಗುರುತಿಸದೇ ಹೋದರೆ ಪ್ರತಿಭಾವಂತರನ್ನು ಸೃಷ್ಟಿಸಲು ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಶಾಲಾ ಹಂತದಲ್ಲಿಯೇ ಪ್ರತಿಭೆಯನ್ನು ಪ್ರೋತ್ಸಾಹಿಸುವ ಕೆಲಸ ಆಗಬೇಕು ಎಂದರು.

ಮಕ್ಕಳಲ್ಲಿರುವ ಪ್ರತಿಭೆ ಗುರುತಿಸುವುದಕ್ಕಾಗಿ ಸರ್ಕಾರ ಎಲ್ಲಾ ಶಾಲೆಗಳಲ್ಲೂ ಕಲಿಕಾ ಹಬ್ಬ ಆಚರಿಸಲು ಕ್ರಮ ಕೈಗೊಂಡಿದೆ. ಇದು ಮಕ್ಕಳಿಗೆ ಉತ್ತಮ ವೇದಿಕೆಯಾಗಿದೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆ ಮಕ್ಕಳು ಹೆಚ್ಚು ಪ್ರತಿಭಾವಂತರಾಗಿದ್ದು, ಅವರಿಗೆ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ಇಲವಾಲ ಪಂಚಾಯತ್ ಪಿಡಿಓ ಶಿವಣ್ಣ ಮಾತನಾಡಿ, ಕಲಿಕಾ ಹಬ್ಬದಂತಹ ಕಾರ್ಯಕ್ರಮಗಳಿಗೆ ಗ್ರಾಮಸ್ಥರು ಹಾಗೂ ಶಿಕ್ಷಕರ ಸಹಕಾರ ಅಗತ್ಯ. ಇಂತಹ ಕಾರ್ಯಕ್ರಮಗಳಿಂದ ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತರನ್ನು ಬೆಳಕಿಗೆ ತರಲು ನೆರವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರವಿಕುಮಾರ್, ಉಪಾಧ್ಯಕ್ಷ ರಾಜು, ಸಮಾಜ ಸೇವಕ ಎಲ್.ಎಸ್. ಗಾಂಧಿಕುಮಾರ್ ಹಾಗೂ ಇಲವಾಲ ಕ್ಲಸ್ಟರ್‌ನ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಪೋಷಕರು, ಗ್ರಾಮಸ್ಥರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ 45 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕಂದಾಯ ಪ್ರಕರಣಗಳ ವಿಲೇವಾರಿಯಲ್ಲಿ ಮಂಡ್ಯ ಜಿಲ್ಲೆ ರಾಜ್ಯಕ್ಕೆ ಪ್ರಥಮ

ಶೇ.90.60ರಷ್ಟು ವಿಲೇವಾರಿ, ಒಂದೂವರೆ ವರ್ಷದಲ್ಲಿ 16,678 ಪ್ರಕರಣ ಇತ್ಯರ್ಥ

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಫೆ.23– ಕಂದಾಯ ಇಲಾಖೆ ನ್ಯಾಯಾಲಯಗಳಲ್ಲಿನ ಪ್ರಕರಣಗಳ ವಿಲೇವಾರಿಯಲ್ಲಿ ಮಂಡ್ಯ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಬರೋಬ್ಬರಿ 16,678 ಪ್ರಕರಣಗಳನ್ನು ವಿಲೇವಾರಿ ಮಾಡಿ ಶೇ.90.60ರಷ್ಟು ಪ್ರಗತಿ ಸಾಧಿಸಿದೆ.

ನ್ಯಾಯಾಲಯ ಪ್ರಕರಣಗಳು ಅದರಲ್ಲೂ ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿಯೇ ಇಡೀ ರಾಜ್ಯದಲ್ಲಿ ದೊಡ್ಡ ಸವಾಲಾಗಿದೆ. ಜನರ ಪ್ರತಿಷ್ಠೆಗೆ ಕಾರಣವಾಗಿರುವ ಭೂ ವ್ಯಾಜ್ಯದ ಪ್ರಕರಣಗಳು ಸಹಜವಾಗಿಯೇ ದೀರ್ಘಕಾಲದವರೆಗೆ ಎಳೆದುಕೊಂಡು ಹೋಗುವುದರಿಂದ ಸಾರ್ವಜನಿಕರು ತಮ್ಮ ಜಮೀನು ವ್ಯಾಜ್ಯಗಳಿಗೆ ಸಂಬಂಧಿಸಿದ ಕೋರ್ಟ್‌ಗಳಿಗೆ ಅಲೆದಾಡುವುದು ಸಾಮಾನ್ಯವಾಗಿದೆ.

ಹೀಗಾಗಿ "ಕೋರ್ಟ್ ಪ್ರಕರಣಗಳಲ್ಲಿ ಗೆದ್ದವನು ಸೋತ, ಸೋತವನು ಸತ್ತ" ಎಂಬ ಮಾತಿದೆ. ಅಡಿಅಡಿ ಜಾಗಕ್ಕೂ ಜನರು ಕಿತ್ತಾಡುವುದರಿಂದ ಹಾಗೂ ತಾವೇ ಗೆಲ್ಲಬೇಕೆಂಬ ಪ್ರತಿಷ್ಠೆ ಬಹುತೇಕ ಜನರಲ್ಲಿರುವ ಕಾರಣ ಕೋರ್ಟ್‌ಗಳಲ್ಲಿ ಕಂದಾಯ ವ್ಯಾಜ್ಯಗಳ ವಿಲೇವಾರಿ ತಡವಾಗುತ್ತಿದೆ. ಹೀಗಾಗಿ ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲೇ 2023ರ ಜುಲೈ ಅಂತ್ಯಕ್ಕೆ 5610 ಪ್ರಕರಣಗಳಿದ್ದವು.

> **ಕಂದಾಯ ನ್ಯಾಯಾಲಯಗಳಲ್ಲಿ ರೆವಿನ್ಯೂ ಕೇಸ್‌ಗಳ ವಿಲೇವಾರಿಯಲ್ಲಿ ಮಂಡ್ಯ ನಂ.1 ಆಗಿದೆ. ಇದು ಬಹಳ ಖುಷಿ ಕೊಟ್ಟಿದೆ. ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿದ ಹೆಗ್ಗಳಿಕೆ ಮಂಡ್ಯ ಜಿಲ್ಲೆಗೆ ದೊರೆತಿದೆ. ಬಾಕಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ತ್ವರಿತವಾಗಿ ವಿಲೇವಾರಿ ಮಾಡಲಾಗುವುದು.–ಡಾ.ಕುಮಾರ, ಜಿಲ್ಲಾಧಿಕಾರಿ, ಮಂಡ್ಯ**

2023ರ ಜುಲೈನಿಂದ 2025ರ ಫೆಬ್ರವರಿ 10ರವರೆಗೆ 12,683 ಪ್ರಕರಣಗಳು ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರ ನ್ಯಾಯಾಲಯಗಳಲ್ಲಿ ದಾಖಲಾಗಿದ್ದವು. ಬಾಕಿ ಪ್ರಕರಣಗಳು ಸೇರಿದಂತೆ ಒಟ್ಟಾರೆ 18,293 ಪ್ರಕರಣಗಳಿದ್ದವು. ಈ ಪೈಕಿ ಫೆ.10ರವರೆಗೆ 16,678 ಪ್ರಕರಣಗಳನ್ನು ಜಿಲ್ಲೆಯಲ್ಲಿ ಇತ್ಯರ್ಥಪಡಿಸಿ ವಿಲೇವಾರಿ ಮಾಡಲಾಗಿದೆ.

ಜಿಲ್ಲಾಧಿಕಾರಿ ಡಾ.ಕುಮಾರ ಅವರ ಪ್ರಯತ್ನದ ಫಲವಾಗಿ ಕಂದಾಯ ಪ್ರಕರಣಗಳು ಕಡಿಮೆ ಅವಧಿಯಲ್ಲಿ ಗರಿಷ್ಠ ಪ್ರಕರಣಗಳು ಇತ್ಯರ್ಥಗೊಂಡಿವೆ. ಕಂದಾಯ ವ್ಯಾಜ್ಯ ಪ್ರಕರಣಗಳ ವಿಲೇವಾರಿಯಲ್ಲಿ ಸಾಕಷ್ಟು ವಿಳಂಬವಾಗುತ್ತಿದ್ದ ಹಿನ್ನೆಲೆಯಲ್ಲಿ ಜನರಿಗೆ ಆಗುತ್ತಿದ್ದ ಸಮಸ್ಯೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಭೂವ್ಯಾಜ್ಯ ಪ್ರಕರಣಗಳನ್ನು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಗಂಭೀರವಾಗಿ ಪರಿಗಣಿಸಿದ್ದರು.

ಕಂದಾಯ ಕೋರ್ಟ್‌ಗಳಲ್ಲಿನ ವ್ಯಾಜ್ಯ ಪ್ರಕರಣಗಳ ಅಂಕಿ ಅಂಶ

ಕೋರ್ಟ್	ಒಟ್ಟು ಪ್ರಕರಣಗಳು	ವಿಲೇವಾರಿ	ಬಾಕಿ
ಮಂಡ್ಯ ಡಿಸಿ ಕೋರ್ಟ್	1130	769	361
ಮಂಡ್ಯ ಎಸಿ ಕೋರ್ಟ್	3587	3259	328
ಪಾಂಡವಪುರ ಎಸಿ ಕೋರ್ಟ್	4091	3487	604
ಕೆ.ಆರ್.ಪೇಟೆ(ತಹಸೀಲ್ದಾರ್)	949	698	77
ನಾಗಮಂಗಲ	4085	571	58
ಪಾಂಡವಪುರ	1072	759	112
ಶ್ರೀರಂಗಪಟ್ಟಣ	853	599	60
ಮಂಡ್ಯ	1151	687	50
ಮದ್ದೂರು	2297	2311	88
ಮಳವಳ್ಳಿ	1978	1538	94
ಒಟ್ಟು	18293	16678	1832

ಈ ಹಿನ್ನೆಲೆಯಲ್ಲಿ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಹಲವು ಬಾರಿ ಉಪ ವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರ ಸಭೆ ನಡೆಸಿ, ಕಂದಾಯ ಕೋರ್ಟ್‌ಗಳಲ್ಲಿನ ವ್ಯಾಜ್ಯ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ನಿರ್ದೇಶನದ ಜತೆಗೆ ಸಾಕಷ್ಟು ಸಲಹೆ–ಸೂಚನೆಗಳನ್ನು ನೀಡಿದ್ದರು. ಇದರ ಫಲವಾಗಿ ಗರಿಷ್ಠ ಪ್ರಕರಣಗಳು ವಿಲೇವಾರಿಗೊಂಡಿವೆ.

ಸರಕಾರದ ಆದೇಶದ ನೆರವು: 2021ರಲ್ಲಿ ಸರಕಾರ ಹೊರಡಿಸಿದ್ದ ಆದೇಶವೊಂದು ಕೂಡ ಕಂದಾಯ ನ್ಯಾಯಾಲಯಗಳ ಪ್ರಕರಣಗಳ ತ್ವರಿತ ವಿಲೇವಾರಿಗೆ ನೆರವಾಗಿದೆ. ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ಒಳಪಡುವ ಪ್ರಕರಣಗಳನ್ನು ತಹಸೀಲ್ದಾರ್/ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಿಸಿಕೊಳ್ಳಬಾರದು. ಈಗಾಗಲೇ ಅಂತಹ ಪ್ರಕರಣಗಳು ದಾಖಲಾದರೆ ಪರಿಶೀಲಿಸಿ, ಕಕ್ಷಿದಾರರಿಗೆ ಎಂಡಾರ್ಸ್ಮೆಂಟ್ ನೀಡಿ ಬೇಗ ಕ್ಲಿಯರ್ ಮಾಡಬೇಕು ಎಂದು ಕಂದಾಯ ಇಲಾಖೆಯ ಆಗಿನ ಪ್ರಧಾನ ಕಾರ್ಯದರ್ಶಿ ಮಂಜುನಾಥಪ್ರಸಾದ್ ಅವರು ಆದೇಶ ನೀಡಿದ್ದರು. ಅದರಂತೆ ಕಂದಾಯ ನ್ಯಾಯಾಲಯಕ್ಕೆ ಬಾರದ ಸಿವಿಲ್ ಪ್ರಕರಣಗಳನ್ನು ಮುಲಾಜಿಲ್ಲದೆ ವಿಲೇವಾರಿ ಮಾಡಲಾಗಿದೆ.

ಯಾವ್ಯಾವ ಮಾದರಿ ಕೇಸುಗಳು: ಪೌತಿ ಖಾತೆ, ಭೂಮಂಜೂರಾತಿ, ವಿಭಾಗದಂತೆ ಖಾತೆ(ಪಾಲ್‌ಪಾರಿಕತ್ತು), ನ್ಯಾಯಾಲಯದ ಆದೇಶದಂತೆ ಖಾತೆ, ಹಕ್ಕುಖುಲಾಸೆಯಂತೆ ಖಾತೆ, ವಿಲ್/ಕ್ರಯಪತ್ರ/ದಾನಪತ್ರ ಖಾತೆ ಹಾಗೂ ಭೂಸುಧಾರಣಾ ಪ್ರಕರಣಗಳನ್ನು ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರ ನ್ಯಾಯಾಲಯಗಳಲ್ಲಿ ವಿಲೇವಾರಿ ಮಾಡಲಾಗಿದೆ.

1832 ಪ್ರಕರಣಗಳಷ್ಟೇ ಬಾಕಿ: ಮಂಡ್ಯ ಜಿಲ್ಲೆಯಲ್ಲಿ 10 ಕಂದಾಯ ನ್ಯಾಯಾಲಯಗಳಲ್ಲಿ ಪ್ರಸ್ತುತ ಕೇವಲ 1832 ಪ್ರಕರಣಗಳಷ್ಟೇ ಬಾಕಿ ಉಳಿದಿವೆ. ಮಂಡ್ಯ ಜಿಲ್ಲಾಧಿಕಾರಿ ಕೋರ್ಟ್, ಮಂಡ್ಯ ಮತ್ತು ಪಾಂಡವಪುರ ಎಸಿ ಕೋರ್ಟ್ ಹಾಗೂ ಪಾಂಡವಪುರ ತಹಸೀಲ್ದಾರ್ ಕೋರ್ಟ್‌ಗಳಲ್ಲಷ್ಟೇ ಮೂರಂಕಿಯ ಪ್ರಕರಣಗಳಿವೆ. ಉಳಿದ ಕೋರ್ಟ್‌ಗಳಲ್ಲಿ ಎರಡಂಕಿ ಪ್ರಕರಣಗಳಷ್ಟೇ ಬಾಕಿ ಇವೆ.

ಸ್ವಚ್ಛತಾ ಕಾರ್ಯದ ವೇಳೆ ಬಾಂಬ್ ಸ್ಫೋಟ: ಇಬ್ಬರು ವಿದ್ಯಾರ್ಥಿಗಳಿಗೆ ಗಾಯ



ನಾಗಮಂಗಲ: ಸ್ವಚ್ಛತಾ ಕಾರ್ಯ ನಡೆಸುತ್ತಿದ್ದ ವೇಳೆ ನಾಡಬಾಂಬ್ ಸ್ಫೋಟಗೊಂಡ ಪರಿಣಾಮ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡಿರುವ ಘಟನೆ ಕಂಬದಹಳ್ಳಿ ಬಳಿಯ ಆಂಜನೇಯ ಬೆಟ್ಟದಲ್ಲಿ ಭಾನುವಾರ ಸಂಭವಿಸಿದೆ.

ಕಂಬದಹಳ್ಳಿಯ ನಿವಾಸಿಗಳಾದ ಹರಿಹಂತ್ ಪಾಟೀಲ್ ಹಾಗೂ ಪಾರ್ಥ ಸ್ಫೋಟದಲ್ಲಿ ಗಾಯಗೊಂಡ ವಿದ್ಯಾರ್ಥಿಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಂಬದಹಳ್ಳಿಯ ಜೈನ ಬಸದಿಯ ಮಾರುತಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು ಇವರಾಗಿದ್ದಾರೆ.

ಆಂಜನೇಯ ಬೆಟ್ಟದ ದೇವಸ್ಥಾನದ ಸುತ್ತಾ ಸ್ವಚ್ಛತಾ ಕಾರ್ಯಕ್ಕೆ ತೆರಳಿದ್ದ ಸಂದರ್ಭದಲ್ಲಿ ಬೆಟ್ಟದ ಮೇಲೆ ಕಸದ ರಾಶಿಗೆ ಕೈ ಹಾಕಿದಾಗ ಸ್ಫೋಟ ಸಂಭವಿಸಿ, ಸ್ಫೋಟದ ತೀವ್ರತೆಗೆ ಓರ್ವ ವಿದ್ಯಾರ್ಥಿಯ ಅಂಗೈ ಛಿದ್ರವಾಗಿದೆ. ಮತ್ತೊಬ್ಬ ವಿದ್ಯಾರ್ಥಿಯ ಮುಖದ ಭಾಗಕ್ಕೆ ಗಾಯವಾಗಿದ್ದು, ಕಾಡು ಹಂದಿ ಭೇಟೆಗೆ ನಾಡ ಬಾಂಬ್ ಇಟ್ಟಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದು, ಕಿಡಿಗೇಡಿಗಳ ಕೆಲಸದಿಂದ ಅಮಾಯಕ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಗಾಯಗೊಂಡ ವಿದ್ಯಾರ್ಥಿಗಳು ಬೆಳ್ಳೂರಿನ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಚೂರಿ ಇರಿತ ಪ್ರಕರಣ; ಮತ್ತೆ ಮೂವರ ಬಂಧನ

ನಾಗಮಂಗಲ: ತಾಲೂಕಿನ ಹೊಣಕೆರೆ ಹೋಬಳಿಯ ಬಚ್ಚಿ ಕೊಪ್ಪಲು ಗ್ರಾಮದ ಕುಮಾರ್ ಅವರನ್ನು ಚೂರಿಯಿಂದ ಇರಿದು ಹತ್ಯೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲೂಕಿನ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮತ್ತೆ ಮೂವರನ್ನು ಬಂಧಿಸಿದ್ದಾರೆ.

ಘಟನೆಯ ದಿನ ಪ್ರಜ್ವಲ್, ಚಂದನ್, ಮದುಸೂದನ್ ಎಂಬುವರನ್ನು ಗ್ರಾಮಸ್ಥರೇ ಹಿಡಿದುಕೊಟ್ಟಿದ್ದು ಉಳಿದ ನಾಲ್ವರು ತಲೆ ಮರೆಸಿಕೊಂಡಿದ್ದರು. ವೃತ್ತ ಆರಕ್ಷಕ ನಿರೀಕ್ಷಕ ನಿರಂಜನ್ ನೇತೃತ್ವದಲ್ಲಿ ಬಲೆ ಬೀಸಿ ಕೇವಲ ಒಂದೇ ದಿನದಲ್ಲಿ ಮಂಡ್ಯ ತಾಲೂಕಿನ ಗ್ರಾಮವೊಂದರಲ್ಲಿ ಅಡಗಿ ಕುಳಿತಿದ್ದ ಮೂವರನ್ನು ಬೆಳ್ಳೂರು ಸಬ್ ಇನ್ಸ್‌ಪೆಕ್ಟರ್ ಮತ್ತು ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಪಾಂಡವಪುರ ತಾಲೂಕಿನ ಕಾಳೇನಹಳ್ಳಿ ಗ್ರಾಮದ ರವಿಚಂದ್ರ, ಕುಮಾರ ಮತ್ತು ಮೈಸೂರು ಜಿಲ್ಲೆ ಜಯಪುರದ ಸಚಿನ್ ಎಂಬುವರನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ಮಂಜುನಾಥ್ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಬಲೆ ಬೀಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೇಲದ ಕೆರೆ ಗ್ರಾಮದಲ್ಲಿ ಶ್ರೀ ಅಮೃತೇಶ್ವರ, ಭೈರವೇಶ್ವರ ದೇವಾಲಯ ಉದ್ಘಾಟನೆ



ದೇವಸ್ಥಾನದ ಸಭಾ ಕಾರ್ಯಕ್ರಮವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ಕೆ.ಆರ್.ಪೇಟೆ,ಫೆ.23– ದೇವಾಲಯಗಳು, ಗುಡಿ–ಗೋಪುರಗಳು, ಜಾತ್ರೆ ಉತ್ಸವಗಳು ನಮ್ಮ ಸಂಸ್ಕೃತಿ–ಪರಂಪರೆಯ ಪ್ರತೀಕವಾಗಿವೆ. ಮನುಷ್ಯನಿಗೆ ಬೇಕಾದ ಶಾಂತಿ ನೆಮ್ಮದಿ ಯಾವುದೇ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ದೇವಾಲಯದಲ್ಲಿ ಭಕ್ತಿಯಿಂದ ದೇವರನ್ನು ಪ್ರಾರ್ಥಿಸಿದಾಗ ಮನಸ್ಸಿನ ಜಂಜಾಟಗಳು ದೂರವಾಗಿ ಮನಸ್ಸಿಗೆ ಶಾಂತಿ–ನೆಮ್ಮದಿ ದೊರೆಯುತ್ತದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ತಾಲೂಕಿನ ಬೇಲದಕೆರೆ ಗ್ರಾಮದಲ್ಲಿ ಗ್ರಾಮಸ್ಥರು ಜೀರ್ಣೋದ್ಧಾರ ಮಾಡಿರುವ ಶ್ರೀ ಅಮೃತೇಶ್ವರ ಹಾಗೂ ಭೈರವೇಶ್ವರ ದೇವಸ್ಥಾನಗಳ ಪುನರ್ ಪ್ರತಿಷ್ಠಾಪನಾ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇವಾಲಯಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಪರಂಪರೆಯನ್ನು ಹೊಂದಿವೆ. ಶಾಂತಿ ನೆಮ್ಮದಿಯನ್ನು ನೀಡುವ ಜೊತೆಗೆ ನಮ್ಮ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತಿರುವ ದೇವಾಲಯಗಳ ಸಂರಕ್ಷಣೆಯು ಸಹ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಪಾಂಡವಪುರ ಉಪ ವಿಭಾಗಾಧಿಕಾರಿ ಆರ್.ಶ್ರೀನಿವಾಸ್ ಮಾತನಾಡಿದರು. ತೆಂಡೇಕೆರೆ ಬಾಳೆ ಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ನಾರಾಯಣಗೌಡ, ಜಿ.ಪಂ.ಮಾಜಿ ಉಪಾಧ್ಯಕ್ಷ ಬೇಲದಕೆರೆ ಪಾಪೇಗೌಡ, ಪಾಂಡವಪುರ ಎಸಿ ಆರ್.ಶ್ರೀನಿವಾಸ್, ರಾಜಮೂರ್ತಿ, ಕೆ.ಎಂ.ಶಿವಪ್ಪ, ಎಸ್.ಎಲ್.ಮೋಹನ್, ಹೆಚ್.ಟಿ.ಲೋಕೇಶ್ ಇತರರಿದ್ದರು.

ಈ ಬಾರಿ ಬಜೆಟ್‌ನಲ್ಲಿ ಮದ್ದೂರಿಗೆ ವಿಶೇಷ ಅನುದಾನ ಸಾಧ್ಯತೆ: ಶಾಸಕ ಉದಯ್

ಮದ್ದೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಗೆ ಅದರಲ್ಲೂ ಮದ್ದೂರು ವಿಧಾನಸಭಾ ಕ್ಷೇತ್ರಕ್ಕೆ ಅಗತ್ಯ ಅನುದಾನ ಮಂಜೂರಾಗುವ ಪೂರ್ಣ ವಿಶ್ವಾಸವಿದ್ದು ಅಭಿವೃದ್ಧಿಗೆ ಇದು ಒತ್ತಾಸೆಯಾಗಲಿರುವುದಾಗಿ ಶಾಸಕ ಕೆ.ಎಂ.ಉದಯ್ ತಿಳಿಸಿದರು.

ತಾಲೂಕಿನ ನಿಲುವಾಗಿಲು ಗ್ರಾ.ಪಂ. ವ್ಯಾಪ್ತಿಯ ವಿವಿಧ ಗ್ರಾಮಗಳ ರೈತರ ಜಮೀನುಗಳಿಗೆ ಸಂಪರ್ಕಿಸುವ ರಸ್ತೆಗಳು ಮತ್ತು ಸೀಳು ನಾಲೆಗಳ ಆಧುನೀಕರಣ ಸಂಬಂಧ 5 ಕೋಟಿ ರೂ. ಅನುದಾನದ ಕಾಮಗಾರಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

ನಿಲುವಾಗಿಲು, ಮಾರಸಿಂಗನಹಳ್ಳಿ, ನಾಗನದೊಡ್ಡಿ, ಮುಳ್ಳಳ್ಳಿ, ಕುರಿದೊಡ್ಡಿ ಮತ್ತು ಸೀನಪ್ಪನದೊಡ್ಡಿ ವ್ಯಾಪ್ತಿಯ ನಾಲೆಗಳು ಮತ್ತು ನಾಲಾ ಸಂಪರ್ಕ ರಸ್ತೆಗಳು ಬಹುದಿನಗಳಿಂದ ದುರಸ್ತಿಯಾಗದ ಮತ್ತು ರೈತರಿಗೆ ಆಗುತ್ತಿರುವ ಅನಾನುಕೂಲಗಳ ಕುರಿತಾಗಿ ಸ್ಥಳೀಯರ ಕೋರಿಕೆ ಮೇರೆಗೆ ಅಗತ್ಯ ಕಾಮಗಾರಿಗೆ ಮುಂದಾಗಿರುವುದಾಗಿ ವಿವರಿಸಿದರು.

ಬೆಸಗರಹಳ್ಳಿ ಮತ್ತು ಭಾರತೀನಗರ ಗ್ರಾ.ಪಂ.ಗಳನ್ನು ಮೇಲ್ದರ್ಜೆಗೇರಿಸುವ ಕುರಿತಾಗಿ ಸಲ್ಲಿಕೆಯಾಗಿರುವ ಮನವಿ ಮೇರೆಗೆ ಪ್ರಥಮ ಆದ್ಯತೆಯಾಗಿ ಭಾರತೀನಗರವನ್ನು ಪರಿಗಣಿಸಲು ಯೋಜಿಸಿದ್ದು ಈ ಕುರಿತು ಅಧಿಕಾರಿಗಳೊಟ್ಟಿಗೆ ಚರ್ಚಿಸಿರುವುದಾಗಿ ಹೇಳಿದರು.

ರಾಜ್ಯದ ಉಪ ನೋಂದಣಿ ಅಧಿಕಾರಿಗಳು ವರ್ಗಾವಣೆ ನೀತಿ ಮತ್ತು ಇತರೆ ಯೋಜನೆಗಳನ್ನು ವಿರೋಧಿಸಿ ಮುಷ್ಕರಕ್ಕೆ ಮುಂದಾಗಿರುವ ಕ್ರಮವನ್ನು ಖಂಡಿಸಿದ ಶಾಸಕ ಕೆ.ಎಂ.ಉದಯ, ಎಲ್ಲಾ ನೋಂದಣಿ ಅಧಿಕಾರಿಗಳಿಗೂ ದೇವನಹಳ್ಳಿ, ಕೆಂಗೇರಿ, ಗಾಂಧಿನಗರ ಕಚೇರಿಗಳೇ ಬೇಕಿದ್ದು ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ ಪರಿವೇ ಇಲ್ಲವೆಂದು ಸರ್ಕಾರಿ ಸೇವೆ ಎಂದರೆ ಏನೆಂದು? ಪ್ರಶ್ನಿಸಿದರು. ಕೆಲ ಅಧಿಕಾರಿಗಳು ರಾಜಧಾನಿಯಲ್ಲೇ ನೆಲೆನಿಂತಿದ್ದು ಗ್ರಾಮೀಣ ಭಾಗಕ್ಕೆ ಅವರ ಸೇವೆಯನ್ನು ಕೊಂಡೊಯ್ಯುವ ದೃಷ್ಟಿಯಿಂದ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಮಾರ್ಪಾಡು ಮಾಡಿದ್ದು ಇದರನ್ವಯ ಕರ್ತವ್ಯ ನಿರ್ವಹಿಸಬೇಕಲ್ಲವೇ ಎಂದರು. ಕೆಆರ್‌ಎಸ್ ಅಣೆಕಟ್ಟೆಯಿಂದ ವಿಸಿ ನಾಲಾ ಕೊನೆಯ ಭಾಗದ ಕೆರೆಗಳನ್ನು ತುಂಬಿಸುವ ಮತ್ತು ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಎಕ್ಸ್ ಕೆನಲ್ ಅಳವಡಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದ್ದು ಇದು ಅನುಷ್ಠಾನ ಗೊಂಡಲ್ಲಿ ಮದ್ದೂರು, ಚನ್ನಪಟ್ಟಣ, ಕುಣಿಗಲ್ ವ್ಯಾಪ್ತಿಗೆ ಅನುಕೂಲವಾಗುವ ವಿಶ್ವಾಸ ವ್ಯಕ್ತಪಡಿಸಿದರು.

ಒಂದನೇ ಪುಟದಿಂದ

ಗೆದ್ದು ಬೀಗಿದ ಭಾರತ

ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶಿಸುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಪಾಕ್ ವಿರುದ್ಧದ ಪಂದ್ಯಗಳಲ್ಲಿ ಅಬ್ಬರಿಸುವ ವಿರಾಟ್ ಕೊಹ್ಲಿ ಇಂದು ಕೂಡ ಅಬ್ಬರಿಸಿದರು. ಪಂದ್ಯದಲ್ಲಿ ಎಚ್ಚರಿಕೆಯ ಆಟವಾಡಿದ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 51ನೇ ಶತಕ ಸಿಡಿಸಿ ಸಂಭ್ರಮಿ ಸಿದರು. ಅಲ್ಲದೇ 111 ಎಸೆತಗಳಲ್ಲಿ 7 ಬೌಂಡರಿ ಒಳಗೊಂಡ 100 ರನ್ ಗಳಿಸಿ ಅಜೇಯರಾಗಿ ಉಳಿದು ತಾನೇಕೆ ಚೇಸಿಂಗ್ ಮಾಸ್ಟರ್ ಎಂಬುದನ್ನು ಮತ್ತೊಮ್ಮೆ ಸಾಧಿಸಿ ತೋರಿಸಿದರು. ಪಾಕಿಸ್ತಾನ ಪರ ಶಹೀನ್ ಆಫ್ರಿದಿ 2, ಕುಶ್ದಿಲ್ ಶಾ ಮತ್ತು ಅಬ್ರಾರ್ ಅಹ್ಮದ್ ತಲಾ ಒಂದೊಂದು ವಿಕೆಟ್ ಪಡೆದರು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ ಆರಂಭಿಕ ಆಘಾತ ಎದುರಾಯಿತು. ತಂಡದ ಮೊತ್ತ 47 ರನ್ ಆಗುವಷ್ಟರಲ್ಲೇ ಕೇವಲ 10 ರನ್‌ಗಳಿಗೆ ಇಮಾಮ್ ಉಲ್ ಹಕ್ ಮತ್ತು 23 ರನ್ ಗಳಿಸಿ ಬಾಬರ್ ಅಜಮ್ ವಿಕೆಟ್ ಒಪ್ಪಿಸಿದ್ದು, ಪಾಕ್ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿತು. ಈ ಸಂದರ್ಭ ಸೌದ್ ಶಕೀಲ್ ಮತ್ತು ಕ್ಯಾಪ್ಟನ್ ಮೊಹಮ್ಮದ್ ರಿಜ್ವಾನ್ ಜೊತೆಗೂಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ಜೋಡಿ 144 ಎಸೆತಗಳಲ್ಲಿ 104 ರನ್ ಗಳಿಸಿ ಭರವಸೆ ಮೂಡಿ ಸಿತು. ಸೌದ್ ಶಕೀಲ್ ಅರ್ಧಶತಕ 62 ರನ್ ಸಿಡಿಸಿದರೇ ರಿಜ್ವಾನ್ 46 ರನ್ ಗಳಿಸಿದರು.

ರಿಜ್ವಾನ್ ವಿಕೆಟ್ ಒಪ್ಪಿಸಿ ಹೊರನಡೆಯು ತ್ತಿದ್ದಂತೆ ಪ್ಯಾಚ್ ಪಥವೇ ಬದಲಾ ಯಿತು. ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ಹೆಚ್ಚು ಹೊತ್ತು ನಿಲ್ಲದೇ ವಿಕೆಟ್‌ಗಳನ್ನು ಒಪ್ಪಿಸಿ ಹೊರ ನಡೆದರು. ಸಲ್ಮಾನ್ ಆಘಾ 19, ತಯ್ಯಬ್ ತಹಿರ್ 4 ರನ್ ಗಳಿಸಿ ಔಟಾದರು. ಖುಷ್ದಿಲ್ ಷಾ 38 ರನ್ ಗಳಿಸಿದರು. ಶಾಹೀನ್ ಶಾ ಅಫ್ರಿದಿ ಶೂನ್ಯ ಸುತ್ತಿ ಪೆವಿಲಿಯನ್ ಕಡೆ ಹೆಜ್ಜೆ ಹಾಕಿದರು. ನಸೀಮ್ ಷಾ 14 ರನ್ ಗಳಿಸಿದರು. ಭಾರತದ ಪರ ಕುಲ್ದೀಪ್ ಯಾದವ್ 3, ಹಾರ್ದಿಕ್ ಪಾಂಡ್ಯ 2, ಹರ್ಷಿತ್ ರಾಣಾ, ಅಕ್ಷರ್ ಪಟೇಲ್, ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಪಂದ್ಯದಲ್ಲಿ ಶತಕ ಸಿಡಿಸಿದ ವಿರಾಟ್ ಕೊಹ್ಲಿ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು. ಭಾರತ ಮಾ.2 ರಂದು ನ್ಯೂಜಿಲೆಂಡ್ ವಿರುದ್ಧ ಲೀಗ್ ಹಂತ ದ ಅಂತಿಮ ಪಂದ್ಯದಲ್ಲಿ ಸೆಣಸಾಡಲಿದೆ.

ಸಿದ್ದರಾಮಯ್ಯ, ಡಿಕೆಶಿ ಅಭಿನಂದನೆ

ಮೈಸೂರು: ಪಾಕಿಸ್ತಾನ ವಿರುದ್ಧ ಭಾರತ ಗೆಲುವು ಸಾಧಿಸುತ್ತಿದ್ದಂತೆ ಭಾರತದ ಸೆಲೆಬ್ರಿಟಿಗಳು, ರಾಜಕಾರಣಿಗಳು, ಕ್ರಿಕೆಟ್ ಪ್ರೇಮಿಗಳಿಂದ ಅಭಿನಂದನೆಗಳ ಮಹಾಪೂರ ಹರಿದುಬರುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ರಾಜಕೀಯ ನಾಯಕರು ತಂಡಕ್ಕೆ ಶುಭಾಶಯ ತಿಳಿಸಿದ್ದಾರೆ

ಚಾಂಪಿಯನ್ ಟ್ರೋಫಿ ಪಂದ್ಯಾಕೂಟದಲ್ಲಿ ಪಾಕಿಸ್ತಾನದ ವಿರುದ್ಧದ ಇಂದಿನ ಅಭೂತಪೂರ್ವ ಗೆಲುವನ್ನು ನೋಡಿ ಆನಂದಿಸಿದೆ. ಭಾರತದ ಲಯಬದ್ಧ ಬೌಲಿಂಗ್, ವಿರಾಟ್ ಕೊಹ್ಲಿಯ ಅಮೋಘ ಬ್ಯಾಟಿಂಗ್, ತಂಡದ ಸಂಘಟಿತ ಹೋರಾಟ ಪಾಕಿಸ್ತಾನವನ್ನು ಬಗ್ಗುಬಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಜಯದ ನಗೆ ಬೀರಿದ ಭಾರತೀಯ ಕ್ರಿಕೆಟ್ ತಂಡಕ್ಕೆ ಅಭಿನಂದನೆಗಳು. ನಮ್ಮವರ ಈ ಗೆಲುವಿನ ಓಟ ಪಂದ್ಯಾವಳಿಯುದ್ದಕ್ಕೂ ಹೀಗೆಯೇ ಮುಂದುವರೆಯಲಿ, ಭಾರತ ಚಾಂಪಿಯನ್ ಆಗಿ ಹೊರಹೊಮ್ಮಲಿ ಎಂದು ಹಾರೈಸುತ್ತೇನೆ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಸಹ ತಂಡವನ್ನು ಅಭಿನಂದಿಸಿದ್ದಾರೆ. ಶಹಬ್ಬಾಶ್ ಹುಡುಗ್ರಾ! ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಪಾಕಿಸ್ತಾನ ವಿರುದ್ಧ ಅಭೂತಪೂರ್ವ ಗೆಲುವು ಸಾಧಿಸಿದ ಟೀಂ ಇಂಡಿಯಾಗೆ ಹೃದಯಪೂರ್ವಕ ಅಭಿನಂದನೆಗಳು. ಇದು ಇಡೀ ದೇಶವೇ ಹೆಮ್ಮೆಪಡುವ ಗೆಲುವಾಗಿದೆ. ವಿರಾಟ್ ಕೊಹ್ಲಿ ಅವರ ಶತಕದಾಟ, ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ ರೋಮಾಂಚಕ ಅನುಭವ ನೀಡಿತು. ಜೈಹೋ ಟೀಂ ಇಂಡಿಯಾ ಎಂದು ಟ್ವೀಟಿಸಿದ್ದಾರೆ.

ಏ. 8, 9ರಂದು ಎಐಸಿಸಿ ಅಧಿವೇಶನ

ನಡೆಯಲಿದೆ ಎಂದು ಮಾಹಿತಿ ನೀಡಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಯ ನೇತೃತ್ವ ವಹಿಸಲಿದ್ದು, ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಪಾಲ್ಗೊಳ್ಳಲಿದ್ದಾರೆ. ಎಐಸಿಸಿ ಅಧಿವೇಶನವನ್ನು ಗುಜರಾತ್‌ನಲ್ಲಿ ನಡೆಸುವ ನಿರ್ಧಾರವನ್ನು ಡಿಸೆಂಬರ್ 26ರಂದು ಕರ್ನಾಟಕದ ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಲೋಕಸಭಾ ಚುನಾವಣೆಯಲ್ಲಿ ಗಳಿಸಿದ್ದ ಬಲವನ್ನು ಮಹಾರಾಷ್ಟ್ರ, ಹರಿಯಾಣ ಮತ್ತು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಳೆದುಕೊಂಡಿರುವ ನಿರ್ಣಾಯಕ ಘಟ್ಟದಲ್ಲಿ ಪಕ್ಷವು ಈ ಅಧಿವೇಶನ ಆಯೋಜಿಸಿದೆ.

ಅನುಮತಿ ನಿರಾಕರಣೆ

ಒಳಾಂಗಣ ಸಭೆ ನಡೆಸುವುದನ್ನು ನಿಷೇಧಿಸ ಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರ ಸುರಕ್ಷಾ ಸಮಿತಿ: ಉದಯಗಿರಿ ಗಲಭೆ ಪ್ರಕರಣವನ್ನು ಖಂಡಿಸಿ ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ ನಾಳೆ ಮೈಸೂರು ಚಲೋ ಹಮ್ಮಿಕೊಂಡಿತ್ತು. ಈ ಚಲೋದಲ್ಲಿ ರಾಜ್ಯದ ವಿವಿಧೆಡೆಯಿಂದ ಸಮಿತಿಯ ಕಾರ್ಯಕರ್ತರು, ಮುಖಂಡರುಗಳು ಆಗಮಿಸಿ ಗನ್‌ಹೌಸ್ ವೃತ್ತದಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯ ದವರೆಗೆ ಮೆರವಣಿಗೆ ಬಂದು, ಅಲ್ಲಿ ಜಾಗೃತಿ ಸಭೆ ನಡೆಸಲು ಉದ್ದೇಶಿಸಿತ್ತು. ಈ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಬಂಡಾಯ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್, ಸತೀಶ್ ಜಾರಕಿಹೊಳಿ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲು ಇಚ್ಛಿಸಿ ದ್ದರು. ಆದರೆ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಜಾರಿಗೊಳಿಸಿರುವುದರಿಂದ ಮೈಸೂರು ಚಲೋ ರದ್ದಾದದಂತಾಗಿದೆ.

ದಲಿತ ಮಹಾಸಭಾ: ಮತ್ತೊಂದೆಡೆ ಉದಯ ಗಿರಿ ಗಲಭೆ ಪ್ರಕರಣದಲ್ಲಿ ಸಮುದಾಯವೊಂದರ ವಿರುದ್ಧ ತಪ್ಪು ಮಾಹಿತಿ ನೀಡಿ ಬಿಜೆಪಿ ರಾಜಕೀಯ ಲಾಭ ಮಾಡಿಕೊಳ್ಳಲು ಮುಂದಾಗಿದೆ ಎಂದು ಆರೋಪಿಸಿ ಗಾಂಧಿ ನಗರದ ದಲಿತ ಮಹಾ ಸಭಾ ವತಿಯಿಂದ ಗನ್‌ಹೌಸ್ ಮುಂಭಾಗ ದಿಂದ ಮೌನ ಮೆರವಣಿಗೆ ನಡೆಸಿ ಕೋಟೆ ಆಂಜನೇಯಸ್ವಾಮಿ ದೇವಾಲಯ ದವರೆಗೆ ಆಗಮಿಸಿ ಅಲ್ಲಿ ಸಭೆ ನಡೆಸಲು ಉದ್ದೇಶಿಸಿತ್ತು. ಈ ಸಭೆಯಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಕರ್ತರು ಹಾಗೂ ದಲಿತ ಮಹಾಸಭಾ ಕಾರ್ಯ ಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಉದ್ದೇಶಿಸಿದ್ದರು. ನಿಷೇಧಾಜ್ಞೆ ಜಾರಿ ಇರುವ ಹಿನ್ನೆಲೆಯಲ್ಲಿ ದಲಿತ ಮಹಾಸಭೆ ಕೈಗೊಂಡಿದ್ದ ಬೃಹತ್ ಸಮಾವೇಶಕ್ಕೆ ಅಡ್ಡಿಯಾದಂತಾಗಿದೆ.

ಅನುಮತಿ ನಿರಾಕರಣೆ: ಈ ಎರಡೂ ಸಂಘಟನೆಗಳು ಸಮಾವೇಶ, ರ್‍ಯಾಲಿ ನಡೆಸುವುದಕ್ಕೆ ಪ್ರತ್ಯೇಕವಾಗಿ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದವು. ಕೋಮು–ಸೌಹಾರ್ದತೆ ಹದಗೆಡುವ ಮುಂದಾಲೋಚನೆಯಿಂದಾಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಯೇ ಅನುಮತಿಯನ್ನು ನಿರಾಕರಿಸ ಲಾಗಿತ್ತು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಉದಯ ಗಿರಿ ಗಲಭೆ ಪ್ರಕರಣವನ್ನು ಎರಡೂ ಸಂಘಟನೆಗಳು ಪ್ರತಿಷ್ಠೆಯಾಗಿ ಸ್ವೀಕರಿಸಿ ಪರ ಮತ್ತು ವಿರೋಧದ ಪೋಸ್ಟ್ ಹಾಕುವ ಮೂಲಕ ಸಮಾವೇಶ ಮತ್ತು ರ್‍ಯಾಲಿ ನಡೆಸುವು ದಾಗಿ ಸಂದೇಶ ರವಾನಿಸಿದ್ದವು. ಈ ಹಿನ್ನೆಲೆ ಯಲ್ಲಿ ಗುಪ್ತಚರ ಇಲಾಖೆ ಮಾಹಿತಿ ಕಲೆ ಹಾಕಿ ಕಾನೂನು–ಸುವ್ಯವಸ್ಥೆ ಹದಗೆಡುವ ಹಾಗೂ ಕೋಮು–ಸೌಹಾರ್ದತೆಗೆ ಧಕ್ಕೆಯಾಗುವುದನ್ನು ಮನಗಂಡು ನೀಡಿದ ವರದಿ ಮೇರೆಗೆ ಪೊಲೀಸ್ ಆಯುಕ್ತರು ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ನಾಯಕಿಯಾಗಿ ಅತಿಶಿ

ಮೂರು ದಿನಗಳ ಈ ಅಧಿವೇಶನದಲ್ಲಿ ಹಿಂದಿನ ಎಎಪಿ ಸರ್ಕಾರದ ಕಾರ್ಯಕ್ಷಮತೆಯ ವಿರುದ್ಧ ಬಾಕಿ ಇರುವ ಸಿಎಜಿ ವರದಿಗಳನ್ನು ಸದನದಲ್ಲಿ ಮಂಡಿಸಲಾಗುವುದು ಎಂದು ಆಡಳಿತಾರೂಢ ಬಿಜೆಪಿ ಸರ್ಕಾರ ಹೇಳಿದೆ.

ಇಲಾಖೆ ವಿನೂತನ ವ್ಯವಸ್ಥೆ

ಎಐ ಕ್ಯಾಮರಾಗಳ ತಾಂತ್ರಿಕ ದೋಷ ಇದಕ್ಕೆ ಮೂಲ ಕಾರಣವಾಗಿದೆ ಎಂದರು. ವಾಹನ ಚಾಲನೆ ಮಾಡುವರು ಡಾರ್ಕ್ ಶರ್ಟ್ ಧರಿಸಿ ಸೀಟ್ ಬೆಲ್ಟ್ ಹಾಕಿದರೆ ಕ್ಯಾಮರಾ ಅದನ್ನು ಗುರುತಿಸುವುದಿಲ್ಲ. ಶರ್ಟ್ ಬಣ್ಣ ಹಾಗೂ ಸೀಟ್ ಬೆಲ್ಟ್ ಬಣ್ಣ ಒಂದೇ ಆಗಿರುವುದರಿಂದ ಕ್ಯಾಮರಾಗೆ ಸೀಟ್ ಬೆಲ್ಟ್ ಹಾಕಿರುವುದು ಸ್ಪಷ್ಟವಾಗಿ ಕಾಣಿಸುವುದಿಲ್ಲ. ಇದರ ಜೊತೆಗೆ ಹೆಚ್ಚು ಸೂರ್ಯನ ಬೆಳಕು ಇದ್ದ ಸಂದರ್ಭದಲ್ಲಿ ಕೂಡ ಎಐ ಕ್ಯಾಮರಾಗಳಿಗೆ ಸೀಟ್ ಬೆಲ್ಟ್ ಹಾಕಿರುವುದನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಸೀಟ್ ಬೆಲ್ಟ್ ಧರಿಸಿಲ್ಲ ಎಂಬ ಸಂದೇಶವನ್ನು ಕಂಟ್ರೋಲ್ ರೂಂಗೆ ಕಳುಹಿಸುತ್ತದೆ. ಕ್ಯಾಮರಾ ತಾಂತ್ರಿಕ ದೋಷ ಅರಿಯದ ಪೊಲೀಸ್ ಸಿಬ್ಬಂದಿಗಳು ವಾಹನ ಚಾಲಕರಿಗೆ ನೋಟಿಸ್ ಜಾರಿ ಮಾಡುತ್ತಿದ್ದಾರೆ.

ಕಾರು ಸೇರಿದಂತೆ ಇತರೆ ವಾಹನಗಳನ್ನು ಬಳಕೆ ಮಾಡದೆ ತಮ್ಮ ಮನೆ ಮುಂದೆ ನಿಂತಿದ್ದರೂ ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದೀರಾ ಎಂದು ನೋಟಿಸ್ ಕೆಲವರಿಗೆ ಬರುತ್ತಿದೆ. ರಾಮನಗರ ಹಾಗೂ ಚನ್ನಪಟ್ಟಣದ ಅಂತರದಲ್ಲಿ ಅಳವಡಿಸಿರುವ ಕ್ಯಾಮರಾಗಳಿಂದ ಹೆಚ್ಚು ನೋಟಿಸ್ ಬರುತ್ತಿದೆ. ಸಂಚಾರ ನಿಯಮ ಉಲ್ಲಂಘನೆ ಮಾಡದಿದ್ದರೂ ದಂಡ ಪಾವತಿ ಮಾಡಬೇಕಾಗಿದೆಯಲ್ಲ ಎಂದು ವಾಹನ ಚಾಲಕರು ಗೊಂದಲಕ್ಕೀಡಾಗಿದ್ದಾರೆ.

ಕ್ಯಾಮರಾ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ: ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಕೆಲವು ಕ್ಯಾಮರಾ ಹೊರತುಪಡಿಸಿ ಉಳಿದ ಕ್ಯಾಮರಾಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ತಪ್ಪಾಗಿ ನೋಟಿಸ್ ಜಾರಿ ಮಾಡುತ್ತಿರುವ ಗಂಭೀರ ಸಮಸ್ಯೆ ಬಿಟ್ಟು ಉಳಿದಂತೆ ಸಣ್ಣ ಪುಟ್ಟ ತಪ್ಪುಗಳಾಗುತ್ತಿದೆ. ಸಿಬ್ಬಂದಿ ಕೊರತೆಯಿಂದ ಪ್ರತಿಯೊಂದು ಸಂಚಾರ ನಿಯಮ ಉಲ್ಲಂಘನೆ ತಡೆಯಲು ಸಾಧ್ಯವಾಗುತ್ತಿಲ್ಲ ಎಂದು ಶರತ್ ಚಂದ್ರ ಅಸಹಾಯಕತೆ ವ್ಯಕ್ತಪಡಿಸಿದರು.

ಈ ಹಿನ್ನೆಲೆ ಸಂಚಾರ ನಿಯಮ ಉಲ್ಲಂಘನೆ ಮಾಡದಿದ್ದರೂ ನೋಟಿಸ್ ಬಂದರೆ ವಾಹನ ಚಾಲಕರು ಎಡಿಜಿಪಿ ಕಚೇರಿಯ adgpcts@bgl.vsnl.net.in ಇ–ಮೇಲ್, ನಗರ ಪೊಲೀಸ್ ಆಯುಕ್ತರು, ಇಲ್ಲವೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ದೂರು ನೀಡಬಹುದು. ಈ ಸಂದರ್ಭದಲ್ಲಿ ದೂರು ಸ್ವೀಕರಿಸುವ ನಮ್ಮ ಸಿಬ್ಬಂದಿ ಪರಿಶೀಲನೆ ಮಾಡಲಿದ್ದು, ತಾಂತ್ರಿಕ ಸಮಸ್ಯೆಯಿಂದ ನೋಟಿಸ್ ಜಾರಿಯಾಗಿದ್ದರೆ ದಂಡ ರದ್ದು ಮಾಡಲಾಗುವುದು ಎಂದು ತಿಳಿಸಿದರು.

ದೂರು ನೀಡಿದ ಏಳು ದಿನದಲ್ಲಿ ಕ್ಯಾಮರಾ ತಪ್ಪು ಇದೆಯೇ ಅಥವಾ ವಾಹನ ಚಾಲಕರ ತಪ್ಪು ಇದೆಯೇ ಎಂದು ಸ್ಪಷ್ಟಪಡಿಸಲಾಗುವುದು ಎಂದು ಹೇಳಿದರು.

ಸಾಮಾಜಿಕ ಜಾಲತಾಣಗಳ ಪೋಸ್ಟ್ ಬಗ್ಗೆ ಪೊಲೀಸ್ ಇಲಾಖೆ ಸೂಕ್ಷ್ಮವಾಗಿ ಗಮನ ಹರಿಸುತ್ತದೆ. ಈ ವೇಳೆ ಸಂಚಾರ ನಿಯಮ ಉಲ್ಲಂಘನೆ ಮಾಡದಿದ್ದರೂ ನೋಟಿಸ್ ಪಡೆದಿರುವುದನ್ನು ಸೋಷಿಯಲ್ ಮೀಡಿಯಾದಲ್ಲಿ ವಾಹನ ಚಾಲಕರು ಪೋಸ್ಟ್ ಮಾಡಿದ್ದರೆ ಇದನ್ನು ಪೊಲೀಸ್ ಇಲಾಖೆ ಸ್ವಯಂ ಪ್ರೇರಣೆಯಿಂದ ದೂರು ದಾಖಲಿಸಿಕೊಂಡು ಪರಿಶೀಲನೆ ಮಾಡಲಿದೆ. ವಾಹನ ಸವಾರರು ತಪ್ಪೆಸಗದಿದ್ದರೂ ನೋಟಿಸ್ ನೀಡಿದ್ದರೆ ದಂಡ ರದ್ದು ಮಾಡಲಾಗುವುದು ಎಂದು ಭರವಸೆ ನೀಡಿದರು. ಈ ಮೂಲಕ ಯಾವುದೇ ತಪ್ಪು ಮಾಡದಿದ್ದರೂ ನೋಟಿಸ್ ಪಡೆದ ವಾಹನ ಸವಾರರು ದಂಡ ಪಾವತಿಸುವುದನ್ನು ತಪ್ಪಿಸುವುದು ಇದರ ಮೂಲ ಉದ್ದೇಶವಾಗಿದೆ ಎಂದು ಶರತ್ ಚಂದ್ರ ತಿಳಿಸಿದರು.

ಇಸ್ರೋ ಯಶಸ್ಸಿನ ವ್ಯಾಪ್ತಿ ವಿಶಾಲವಾಗಿದೆ

ಇತ್ತೀಚೆಗೆ ನಾನು ಎಐ ಕುರಿತ ಬೃಹತ್ ಸಮ್ಮೇಳನದಲ್ಲಿ ಭಾಗವಹಿಸಲು ಪ್ಯಾರಿಸ್‌ಗೆ ಹೋಗಿದ್ದೆ. ವಿಶ್ವವೇ ಭಾರತ ಎಐ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಿರುವುದನ್ನು ಮೆಚ್ಚಿಕೊಂಡಿದೆ. ನಮ್ಮ ದೇಶದಲ್ಲಿ ಇಂದು ಜನರು ಎಐ ಅನ್ನು ವಿವಿಧ ರೀತಿಯಲ್ಲಿ ಬಳಸುತ್ತಿರುವ ಉದಾಹರಣೆಗಳನ್ನು ನಾವು ನೋಡುತ್ತಿದ್ದೇವೆ ಎಂದು ಹೇಳಿದರು. ಮುಂದಿನ ತಿಂಗಳು ಮಾರ್ಚ್ 8ರಂದು 'ಅಂತಾರಾಷ್ಟ್ರೀಯ ಮಹಿಳಾ ದಿನ'. ನಮ್ಮ ಮಹಿಳಾ ಶಕ್ತಿಗೆ ಗೌರವ ಸಲ್ಲಿಸಲು ಇದು ವಿಶೇಷ ಸಂದರ್ಭ. ಎಲ್ಲಾ ಜ್ಞಾನವು ದೇವಿಯ ವಿವಿಧ ರೂಪಗಳ ಅಭಿವ್ಯಕ್ತಿ ಯಾಗಿದೆ. ಅವಳು ಜಗತ್ತಿನ ಎಲ್ಲಾ ಸ್ತ್ರೀ ಶಕ್ತಿಯಲ್ಲಿಯೂ ಪ್ರತಿಫಲಿಸುತ್ತಾಳೆ ಎಂದು ನಮ್ಮ ದೇವಿ ಮಹಾತ್ಮೆಯಲ್ಲಿ ಹೇಳಲಾಗಿದೆ ನಮ್ಮ ಸಂಸ್ಕೃತಿಯಲ್ಲಿ, ಹೆಣ್ಣು ಮಕ್ಕಳಿಗೆ ಗೌರವ ನೀಡುವುದು ಅತ್ಯಂತ ಮುಖ್ಯ ಈ ಬಾರಿ ಮಹಿಳಾ ದಿನದಂದು ನಾನು ನಮ್ಮ ಮಹಿಳಾ ಶಕ್ತಿಗೆ ಮೀಸಲಾಗಿರುವ ಉಪಕ್ರಮವನ್ನು ತೆಗೆದುಕೊಳ್ಳಲಿದ್ದೇನೆ. ಈ ವಿಶೇಷ ಸಂದರ್ಭದಲ್ಲಿ, ನಾನು ನನ್ನ ಸಾಮಾಜಿಕ ಮಾಧ್ಯಮ ಖಾತೆಗಳಾದ ಎಕ್ಸ್, ಇನ್‌ಸ್ಟಾಗ್ರಾಮ್ ಅನ್ನು ದೇಶದ ಕೆಲವು ಸ್ಫೂರ್ತಿದಾಯಕ ಮಹಿಳೆಯರಿಗೆ ಒಂದು ದಿನದ ಮಟ್ಟಿಗೆ ಹಸ್ತಾಂತರಿಸಲಿದ್ದೇನೆ. ಅವರು ಮಾ.8ರಂದು ತಮ್ಮ ಕೆಲಸ ಮತ್ತು ಅನುಭವಗಳನ್ನು ದೇಶವಾಸಿಗಳೊಂದಿಗೆ ಹಂಚಿಕೊಳ್ಳಲಿದ್ದಾರೆ ಎಂದರು. ಮುಂದಿನ ಕೆಲವು ದಿನಗಳಲ್ಲಿ ನಾವು 'ರಾಷ್ಟ್ರೀಯ ವಿಜ್ಞಾನ ದಿನ'ವನ್ನು ಆಚರಿಸಲಿದ್ದೇವೆ. ನಮ್ಮ ಮಕ್ಕಳು ಹಾಗೂ ಯುವಕರು ವಿಜ್ಞಾನದಲ್ಲಿ ಆಸಕ್ತಿ, ಉತ್ಸಾಹ ಹೊಂದಿರುವುದು ಬಹಳ ಮುಖ್ಯ. ಇದರ ಬಗ್ಗೆ ನನಗೆ ಒಂದು ಕಲ್ಪನೆ ಇದೆ. ನೀವು 'ಒಂದು ದಿನ ವಿಜ್ಞಾನಿಯಾಗಿ ಬದುಕ ಬಹುದು' ಅಂದರೆ, ನೀವು ವಿಜ್ಞಾನಿಯಾಗಿ ಒಂದು ದಿನ ಕಳೆಯಲು ಪ್ರಯತ್ನಿಸಬಹುದು. ನಿಮ್ಮ ಅನುಕೂಲ ಮತ್ತು ಇಚ್ಛೆಗೆ ಅನುಗುಣ ವಾಗಿ ನೀವು ಯಾವುದೇ ದಿನವನ್ನು ಆಯ್ಕೆ ಮಾಡಬಹುದು ಎಂದು ತಿಳಿಸಿದರು.

ಬೆಂಗಳೂರಲ್ಲಿ ಶಾಸಕ ಹ್ಯಾರಿಸ್ ಬೆಂಬಲಿಗ ಬರ್ಬರ ಹತ್ಯೆ

ಬೆಂಗಳೂರು, ಫೆ.23– ಶನಿವಾರ ತಡರಾತ್ರಿ ಲೈವ್ ಬ್ಯಾಂಡ್‌ನಿಂದ ಹೊರ ಬರುತ್ತಿದ್ದ ಶಾಸಕ ಹ್ಯಾರಿಸ್ ಬೆಂಬಲಿಗ, ಕಾಂಗ್ರೆಸ್ ಮುಖಂಡನನ್ನು ಅಡ್ಡಗಟ್ಟಿ ಭೀಕರ ಹತ್ಯೆಗೈದಿರುವ ಘಟನೆ ಬೆಂಗಳೂರಿನ ಅಶೋಕನಗರದ ಗರುಡ ಮಾಲ್ ಬಳಿ ನಡೆದಿದೆ.



ಹೈದರ್ ಅಲಿ

ಶೇಖ್ ಹೈದರ್ ಅಲಿ ಕೊಲೆಯಾದ ಕಾಂಗ್ರೆಸ್ ಮುಖಂಡ. ತಡರಾತ್ರಿ 1 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಹೈದರ್ ಅಲಿ ಲೈವ್ ಬ್ಯಾಂಡ್‌ನಿಂದ ರಾತ್ರಿ ಸ್ನೇಹಿತನ ಜೊತೆಗೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಆರೋಪಿಗಳು ಬೈಕ್‌ನಲ್ಲಿ ಹಿಂಬಾಲಿಸಿ ಕೊಂಡು ಬಂದು ಅಡ್ಡಗಟ್ಟಿ ಕೊಲೆ ಮಾಡಿ ದ್ದಾರೆ. ಘಟನೆಯಲ್ಲಿ ಜೊತೆಯಲ್ಲಿದ್ದ ಸ್ನೇಹಿತನಿಗೆ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ರಕ್ತದ ಮಡುವಲ್ಲಿ ಬಿದ್ದಿದ್ದ ಹೈದರ್ ಅವರನ್ನು ಪೊಲೀಸರು ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೇ ಆನೆಪಾಳ್ಯ ನಿವಾಸಿ ಹೈದರ್ ಸಾವನ್ನಪ್ಪಿದ್ದರು. ವಿಚಾರ ತಿಳಿದು ಬೌರಿಂಗ್ ಆಸ್ಪತ್ರೆ ಬಳಿ ನೂರಾರು ಜನ ಜಮಾಯಿಸಿದ್ದು, ಲಾಂಗು–ಮಚ್ಚು ಝಳಪಿಸಿ ಆಸ್ಪತ್ರೆ ಗೇಟ್ ತಳ್ಳಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದ್ಯ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದ್ದಾರೆ. ಶೇಖ್ ಹೈದರ್ ಅಲಿ ಶಾಸಕ ಎನ್.ಎ.ಹ್ಯಾರಿಸ್ ಜೊತೆ ಗುರುತಿಸಿಕೊಂಡಿದ್ದರು. ಹೈದರ್ ಅಲಿ ಹ್ಯಾರಿಸ್ ಪರ ಪ್ರಚಾರದಲ್ಲಿ ಭಾಗಿಯಾಗುತ್ತಿದ್ದರು. ಘಟನೆ ಸಂಬಂಧ ಅಶೋಕನಗರ ಠಾಣೆಯಲ್ಲಿ ಕೊಲೆ ಕೇಸ್ ದಾಖಲಾಗಿದೆ. ಕೊಲೆ ಆರೋಪಿಗಳ ಪತ್ತೆಗೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ.


ಘಟನೆ ಸಂಬಂಧ ಡಿಸಿಪಿ ಶೇಖರ್ ಮಾತನಾಡಿ, ತಡರಾತ್ರಿ 1 ಗಂಟೆ ವೇಳೆ ಫುಟ್ಬಾಲ್ ಸ್ಟೇಡಿಯಂ ಗೇಟ್ ಬಳಿ ಘಟನೆ ನಡೆದಿದೆ. ಕೊಲೆಯಾದ ವ್ಯಕ್ತಿ ರೌಡಿಶೀಟರ್. ಹೈದರ್ ಅಲಿ ವಿರುದ್ಧ 11 ಪ್ರಕರಣಗಳಿವೆ. ಮಾರಣಾಂತಿಕ ಹಲ್ಲೆ, ಸಾಮಾನ್ಯ ಹಲ್ಲೆ, ಎನ್ಡಿಪಿಎಸ್ ಕೇಸ್‌ಗಳು ಇದೆ. ಹೈದರ್ ಅಶೋಕನಗರ ಪೊಲೀಸ್ ಠಾಣಾ ರೌಡಿಶೀಟರ್. 2016ರಿಂದ ರೌಡಿಶೀಟರ್ ಮಾಡಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, ಕೊಲೆಯಾದ ವ್ಯಕ್ತಿಗೆ ರಾಜಕೀಯ ಹಿನ್ನೆಲೆ ಇಲ್ಲ ಎಂದು ತಿಳಿಸಿದ್ದಾರೆ.

ವಿಜಯೇಂದ್ರ ನೇತೃತ್ವದಲ್ಲಿಯೇ ಜಿಪಂ, ತಾಪಂ ಚುನಾವಣೆ: ರೇಣುಕಾಚಾರ್ಯ

ದಾವಣಗೆರೆ, ಫೆ.23– ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ವಿಧಾನಸಭಾ ಚುನಾವಣೆ ಕೂಡ ಅವರ ನೇತೃತ್ವದಲ್ಲಿಯೇ ನಡೆಯಲಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರೀಯ ನಾಯಕರಿಗೆ ವಿಜಯೇಂದ್ರ ಅವರ ಮೇಲೆ ವಿಶ್ವಾಸವಿದೆ. ಅವರ ನಾಯಕತ್ವದ ಬಗ್ಗೆ ಆಕ್ಷೇಪ ಹೊಂದಿರುವ ಭಿನ್ನಮತಿಯರು ಹೈಕಮಾಂಡ್ ಸಂಪರ್ಕಿಸುವುದು ಒಳಿತು. ಹಾದಿ–ಬೀದಿಯಲ್ಲಿ ನಾಯಕರನ್ನು ಟೀಕೆ ಮಾಡುವುದರಿಂದ ಪಕ್ಷಕ್ಕೆ ಹಾನಿಯಾಗುತ್ತದೆ ಎಂದರು.

ಗಾಂಜಾ ಸರಬರಾಜಿಗೆ ಯತ್ನಿಸುತ್ತಿದ್ದ ಇಬ್ಬರ ಬಂಧನ


ಯೋಗೇಶ್


ಮೊಹಮದ್ ಅಸ್ಗರ್

ಮಡಿಕೇರಿ, ಫೆ.23–ಗಾಂಜಾ ಸರಬರಾಜು ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಮಾಲು ಸಹಿತ ಶನಿವಾರಸಂತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶನಿವಾರಸಂತೆ ತ್ಯಾಗರಾಜ ಕಾಲೋನಿ ನಿವಾಸಿ ಯೋಗೇಶ್(25) ಹಾಗೂ ದೊಡ್ಡಕೊಡ್ಲಿ ನಿವಾಸಿ ಮೊಹಮದ್ ಅಸ್ಗರ್(40) ಬಂಧಿತರು. ಆರೋಪಿಗಳಿಂದ 240 ಗ್ರಾಂ ಗಾಂಜಾ, ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಇಬ್ಬರು ತ್ಯಾಗರಾಜ ಕಾಲೋನಿ ಮತ್ತು ಕೊಡ್ಲಿಪೇಟೆ ವ್ಯಾಪ್ತಿಯಲ್ಲಿ ಗಾಂಜಾ ಸರಬರಾಜು ಮಾಡಲು ಯತ್ನಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಪ್ರೊಬೆಷನರಿ ಎಸ್‌ಪಿ ಡಾ.ಬೆನಕ ಪ್ರಸಾದ್ ಮಾರ್ಗದರ್ಶನದಲ್ಲಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಶನಿವಾರಸಂತೆ ಠಾಣಾಧಿಕಾರಿಗಳಾದ ಗೋವಿಂದರಾಜು, ಹೆಚ್.ವೈ. ಚಂದ್ರು ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಚಿನ್ನಾಭರಣ ಮಳಿಗೆಗೆ ಬೆಂಕಿ


ಮಡಿಕೇರಿ ಮಹದೇವಪೇಟೆಯ ಚಿನ್ನಾಭರಣ ಮಳಿಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸುಟ್ಟು ಹೋಗಿರುವುದು.

ಮಡಿಕೇರಿ, ಫೆ.23–ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಚಿನ್ನಾಭರಣ ಮಳಿಗೆ ಸುಟ್ಟು ಕರಕಲಾದ ಘಟನೆ ನಗರದ ಮಹದೇವಪೇಟೆಯಲ್ಲಿ ಭಾನುವಾರ ನಡೆದಿದೆ.

ಅಂಗಡಿ ಮಾಲೀಕರು ಮಧ್ಯಾಹ್ನ 2.30ರವರೆಗೆ ಮಳಿಗೆಯಲ್ಲಿದ್ದು, ಬಳಿಕ ಬಾಗಿಲು ಹಾಕಿ ಮನೆಗೆ ತೆರಳಿದ್ದರು. ಸಂಜೆ 5 ಗಂಟೆಗೆ ಅಂಗಡಿ ಬಾಗಿಲಿನ ಒಳಗಿನಿಂದ ಹೊಗೆ ಬರುತ್ತಿರುವುದನ್ನು ಗಮನಿಸಿದ ಸಾರ್ವಜನಿಕರು ಅಂಗಡಿ ಮಾಲೀಕರು ಮತ್ತು ಅಗ್ನಿ ಶಾಮಕ ದಳಕ್ಕೆ ತಿಳಿಸಿದ್ದಾರೆ.

ಕೂಡಲೇ ಸ್ಥಳಕ್ಕಾಗಮಿಸಿದ ಮಾಲೀಕರು ಅಂಗಡಿ ಬಾಗಿಲು ತೆಗೆದು ಬೆಂಕಿ ನಂದಿಸಲು ಪ್ರಯತ್ನಿಸಿದರು. ಬಳಿಕ ಅಗ್ನಿಶಾಮಕ ದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದರು. ಅಗ್ನಿ ಅನಾಹುತದಿಂದ ದಟ್ಟ ಹೊಗೆ ಆವರಿಸಿದ ಪರಿಣಾಮ ನೂರಾರು ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸಿದ್ದರು. ನಷ್ಟ ಎಷ್ಟು ಸಂಭವಿಸಿದೆ ಎಂಬುದು ತಿಳಿಯಬೇಕಿದೆ ಎಂದು ಅಂಗಡಿ ಮಾಲೀಕರು ತಿಳಿಸಿದ್ದಾರೆ.

ಕೊಡಗು ವಿವಿ ಮುಚ್ಚುವ ನಿರ್ಧಾರ ಕೈಬಿಡಲಿ


ಅಚ್ಚಪಂಡ ಮಹೇಶ್ ಗಣಪತಿ

ವಿರಾಜಪೇಟೆ, ಫೆ.23– ಕೊಡಗು ವಿಶ್ವವಿದ್ಯಾಲಯ ಮುಚ್ಚುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಆಗ್ರಹಿಸಿದ್ದಾರೆ.

ಜಿಲ್ಲೆಯ ಗ್ರಾಮೀಣ ಪ್ರದೇಶದ ಮಕ್ಕಳ ಉನ್ನತ ಶಿಕ್ಷಣಕ್ಕೆ ಅನುಕೂಲವಾಗುವ ಕೊಡಗು ವಿವಿಯನ್ನು ಅಭಿವೃದ್ಧಿ ಪಡಿಸುವ ಬದಲು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರದ ನಿಲುವು ಸರಿಯಲ್ಲ. ಇತ್ತೀಚೆಗೆ ಖಾಸಗಿ ವಿಶ್ವವಿದ್ಯಾಲಯಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಸರ್ಕಾರದ ವಿವಿಗಳನ್ನು ರದ್ದು ಪಡಿಸುವುದು ಖಂಡನೀಯ. ಒಂದು ವೇಳೆ ಮುಚ್ಚಲು ಪ್ರಯತ್ನಿಸಿದರೆ ಸರ್ಕಾರದ ವಿರುದ್ಧ ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದು ಎಚ್ಚರಿಸಿದರು.

ಕಬಡ್ಡಿ ಬಗ್ಗೆ ಮಕ್ಕಳಿಗೆ ಹೆಚ್ಚು ಆಸಕ್ತಿ ಮೂಡಿಸಬೇಕು

● ಶಾಸಕ ಎ.ಎಸ್.ಪೊನ್ನಣ್ಣ ಆಶಯ ● ಮಡಿಕೇರಿಯಲ್ಲಿ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿ

ಮಡಿಕೇರಿ, ಫೆ.23–ಗ್ರಾಮೀಣ ಕ್ರೀಡೆಯಾಗಿ ಖ್ಯಾತಿ ಪಡೆಯುತ್ತಿರುವ ಕಬಡ್ಡಿ ಬಗ್ಗೆ ಮಕ್ಕಳಲ್ಲಿ ಹೆಚ್ಚು ಆಸಕ್ತಿ ಮೂಡಿಸುವ ಕಾರ್ಯವಾಗಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ರೋಟರಿ ಜಿಲ್ಲೆ 3181ನಲ್ಲಿ ರೋಟರಿ ಸದಸ್ಯರಿಗಾಗಿ ಮೊದಲ ಬಾರಿಗೆ ಆಯೋಜಿಸಿದ್ದ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಪ್ರೀಮಿಯರ್ ಲೀಗ್ ಮೂಲಕ ಹೆಸರುವಾಸಿಯಾಗುತ್ತಿರುವ ಕಬಡ್ಡಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಪ್ರೋತ್ಸಾಹ ನೀಡುವಂತಾದಲ್ಲಿ ಗ್ರಾಮೀಣ ಕ್ರೀಡೆಯಾದ ಕಬಡ್ಡಿಗೆ ಹೆಚ್ಚಿನ ಬೆಂಬಲ ದೊರಕಿದಂತಾಗುತ್ತದೆ ಎಂದರು.

120 ವರ್ಷಗಳನ್ನು ಜಾಗತಿಕವಾಗಿ ಸಾಮಾಜಿಕ ಸೇವಾ ಕಾರ್ಯ ಪೂರೈಸಿರುವ ರೋಟರಿ ಸಂಸ್ಥೆ ಕ್ರೀಡಾ ಕ್ಷೇತ್ರದಲ್ಲೂ ಯೋಜನೆ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ರೋಟರಿ ಜಿಲ್ಲೆ 3181ರ ಗವರ್ನರ್ ವಿಕ್ರಂದತ್ತ ಮಾತನಾಡಿ, ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡೆಗಳನ್ನು ವಾರ್ಷಿಕವಾಗಿ ಆಯೋಜಿಸುತ್ತಾ ಬಂದಿದ್ದ ರೋಟರಿ ಇದೀಗ ಮಡಿಕೇರಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಮೊದಲ ಬಾರಿಗೆ ಕಬಡ್ಡಿ ಪಂದ್ಯಾವಳಿ ಆಯೋಜಿಸಿರುವುದು ಶ್ಲಾಘನೀಯ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ರೋಟರಿ ವತಿಯಿಂದ ಕಂಬಳ ಆಯೋಜಿಸಿ ಯಶಸ್ವಿಯಾಗಿದೆ. ಕಬ್ಬಡಿಯನ್ನೂ ಪ್ರತಿವರ್ಷ ರೋಟರಿ ಸದಸ್ಯರಿಗಾಗಿ ಆಯೋಜಿಸಲಾಗುವುದು ಎಂದು ಹೇಳಿದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪೊನ್ನಚ್ಚನ ಮಧುಸೂದನ್ ಮಾತನಾಡಿ, ರೋಟರಿ ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಕಬಡ್ಡಿ ಪಂದ್ಯಾವಳಿ ಆಯೋಜಿಸಿರುವ ದಾಖಲೆಗೆ ಪಾತ್ರವಾಗಿದೆ. ಈ ಮೂಲಕ ರೋಟರಿ ಸದಸ್ಯರಲ್ಲಿ ಕಬಡ್ಡಿ ಬಗ್ಗೆ ಹೆಚ್ಚು ಆಸಕ್ತಿ ಮೂಡುವಂತಾಗಿದೆ ಎಂದರು.

ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ನಿವೃತ್ತ ಜಂಟಿ ಕಾರ್ಯದರ್ಶಿ ಹೊಸೂಕ್ಲು ಉತ್ತಪ್ಪ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಕಬ್ಬಡಿಯನ್ನು ಪ್ರೋತ್ಸಾಹಿಸಲು ಅಸೋಸಿಯೇಷನ್ ಎಲ್ಲಾ ಸಹಕಾರ ನೀಡಲಿದೆ. ಗಾಂಧಿ ಮೈದಾನದಲ್ಲಿ ಸುಸಜ್ಜಿತ ರೀತಿ ಆಯೋಜಿಸಿರುವ ಕಬ್ಬಡಿಯಲ್ಲಿ ದಿನವಿಡೀ ರೋಟರಿ ಸದಸ್ಯ ತಂಡಗಳು ಪಾಲ್ಗೊಂಡು ಸಂಭ್ರಮಿಸಿವೆ ಎಂದು ತಿಳಿಸಿದರು.

ರೋಟರಿ ಮಿಸ್ಟಿ ಹಿಲ್ಸ್‌ನ ಕಬಡ್ಡಿ ಪಂದ್ಯಾವಳಿ ಸಂಚಾಲಕ ಜಯಂತ್ ಪೂಜಾರಿ, ರೋಟರಿ ವಲಯ 6ರ ಸಹಾಯಕ ಗವರ್ನರ್ ದೇವಣಿರ ಕಿರಣ್, ವಲಯ ಸೇನಾನಿ ಅನಿತಾ ಪೂವಯ್ಯ, ರೋಟರಿ ಮಿಸ್ಟಿ ಹಿಲ್ಸ್ ನಿರ್ದೇಶಕ ಹೆಚ್.ಟಿ. ಅನಿಲ್, ಕಬಡ್ಡಿ ಸಮಿತಿ ಜಂಟಿ ಸಂಚಾಲಕ ದುಗ್ಗಳ ಕಪಿಲ್, ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ಕಟ್ಟೆಮನೆ ಸೋನಜಿತ್ ಹಾಜರಿದ್ದರು.


ಮಡಿಕೇರಿ ಗಾಂಧಿ ಮೈದಾನದಲ್ಲಿ ನಡೆದ ಕಬಡ್ಡಿಪಂದ್ಯಾವಳಿಯಲ್ಲಿ ರೋಟರಿ ಸದಸ್ಯರು ಸೆಣಸಾಟ ನಡೆಸಿದರು.

ರಕ್ತದಾನ ಶಿಬಿರಕ್ಕೆ ಚಾಲನೆ

ಕೊಡಗು ಜಿಲ್ಲಾ ರೆಡ್‌ಕ್ರಾಸ್, ವಿವೇಕಾನಂದ ಯೂತ್ ಮೂವ್‌ಮೆಂಟ್ ಮತ್ತು ಜಿಲ್ಲಾ ರಕ್ತನಿಧಿ ಕೇಂದ್ರದ ವತಿಯಿಂದ ಇದೇ ಸಂದರ್ಭ ಏರ್ಪಡಿಸಿದ್ದ ರಕ್ತದಾನ ಶಿಬಿರಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

ಒಟ್ಟು 26 ಮಂದಿ ರಕ್ತದಾನ ಮಾಡಿದರು. ರೋಟರಿ ಜಿಲ್ಲಾ ಕಾರ್ಯದರ್ಶಿ ರಿತೀಶ್ ಬಾಳಿಗ, ಮಿಸ್ಟಿ ಹಿಲ್ಸ್ ಸ್ಥಾಪಕಾಧ್ಯಕ್ಷ ಬಿ.ಜಿ.ಅನಂತಶಯನ, ರೆಡ್‌ಕ್ರಾಸ್ ಜಿಲ್ಲಾ ಸಭಾಪತಿ ಬಿ.ಕೆ.ರವೀಂದ್ರ ರೈ, ಉಪಾಧ್ಯಕ್ಷ ಅನಿಲ್ ಹೆಚ್.ಟಿ.ಕಾರ್ಯದರ್ಶಿ ಮುರಳಿ, ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಚಾಲಕ ಡಾ.ಚೆರಿಯಮನೆ ಪ್ರಶಾಂತ್, ರಕ್ತನಿಧಿ ಕೇಂದ್ರದ ಅಧಿಕಾರಿ ಡಾ.ಕರುಂಬಯ್ಯ, ಡಾ.ನೀತಾ ಹಾಜರಿದ್ದರು.

ಲಸಿಕೆ ವಿತರಣೆ ಕಾರ್ಯಕ್ರಮ...



ಮಡಿಕೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ರೋಟರಿ ವತಿಯಿಂದ ನಡೆದ ಕ್ಯಾನ್ಸರ್ ನಿರೋಧಕ ಲಸಿಕೆ ವಿತರಣೆ ಕಾರ್ಯಕ್ರಮವನ್ನು ಸ್ತ್ರೀ ರೋಗ ತಜ್ಞೆ ಡಾ.ಸೋನಿಯಾ ಮಂದಪ್ಪ ಉದ್ಘಾಟಿಸಿದರು. ಉಪಪ್ರಾಂಶುಪಾಲೆ ಕೆ.ವಿ.ಶಶಿಕಲಾ, ರೋಟರಿ ಜಿಲ್ಲಾ ಮಾಜಿ ಗವರ್ನರ್‌ಗಳಾದ ಸುರೇಶ್ ಚಂಗಪ್ಪ, ಡಾ.ರವಿ ಅಪ್ಪಾಜಿ, ರೋಟರಿ ಅಧ್ಯಕ್ಷ ಸುದಯ್ ನಾಣಯ್ಯ ಇದ್ದರು.

ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ


ಸುಬ್ರಮಣಿ ಕಾವೇರಪ್ಪ

ಮಡಿಕೇರಿ, ಫೆ.23–ಕೊಡಗು ವಿಶ್ವವಿದ್ಯಾಲಯವನ್ನು ರದ್ದುಗೊಳಿಸುವ ಚಿಂತನೆಯನ್ನು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಈ ನಿರ್ಣಯ ಸರಿಯಲ್ಲ ಎಂದು ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಖಂಡಿಸಿದ್ದಾರೆ.

ಕೊಡಗು ವಿಶ್ವವಿದ್ಯಾಲಯ ಸುಮಾರು 100 ಎಕರೆ ಪ್ರದೇಶದಲ್ಲಿ ಆಡಳಿತ ಸೌಧ, ಶೈಕ್ಷಣಿಕ ಕೊಠಡಿಗಳ ಸಂಕೀರ್ಣ, ಅತ್ಯಾಧುನಿಕ ಪ್ರಯೋಗಾಲಯ ಇತ್ಯಾದಿ ಸೌಲಭ್ಯದೊಂದಿಗೆ ಸುಸಜ್ಜಿತವಾಗಿದೆ. ಕೊಡಗು ವಿವಿ ರದ್ದು ಕುರಿತ ಸರ್ಕಾರದ ನಿರ್ಣಯ ಜಿಲ್ಲೆಗೆ ಆಘಾತವುಂಟು ಮಾಡಿದ್ದು, ವಿದ್ಯಾರ್ಥಿಗಳು ಈ ನಿರ್ಣಯದ ಅತಂತ್ರ ಸ್ಥಿತಿಗೆ ಸಿಲುಕುವ ಆತಂಕವಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊಡಗು ವಿವಿಯಲ್ಲಿ ಬಡವಿದ್ಯಾರ್ಥಿಗಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿದ್ದಾರೆ ಹಾಗೂ ಕೊಡಗಿನ ಪ್ರಗತಿಗೆ ವಿವಿ ಹೆಚ್ಚು ಸಹಕಾರಿಯಾಗಿದೆ. ಅಲ್ಲದೆ, ಬಯಲು ಸೀಮೆ ಮತ್ತು ಕೊಡಗಿಗೂ ಇರುವ ವ್ಯತ್ಯಾಸಗಳನ್ನು ರಾಜ್ಯ ಸರ್ಕಾರ ಮರೆತಂತಿದೆ. ವಿವಿಯನ್ನು ಮುಚ್ಚುವ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯಬೇಕು. ಬಡವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸ್ಥಾಪನೆಯಾಗಿರುವ ವಿವಿಗಳಿಗೆ ಅಗತ್ಯ ಅನುದಾನ ನೀಡಲು ಸರ್ಕಾರ ಹಿಂದೆ ಸರಿಯಬಾರದು ಎಂದು ಆಗ್ರಹಿಸಿದ್ದಾರೆ.

ಹಳೇ ವಿದ್ಯಾರ್ಥಿಗಳಿಂದ ಕಾರ್ಯಪ್ಪ ಕಾಲೇಜಿಗೆ ಕ್ರೀಡಾ ಸಾಮಗ್ರಿ ವಿತರಣೆ


ಮಡಿಕೇರಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿಗೆ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ಕ್ರೀಡಾ ಸಾಮಗ್ರಿಗಳ ಕಿಟ್ ವಿತರಿಸಲಾಯಿತು.

ಮಡಿಕೇರಿ, ಫೆ23–ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿಗೆ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ 24,700 ರೂ. ಮೌಲ್ಯದ ಕ್ರೀಡಾ ಸಾಮಗ್ರಿಗಳ ಕಿಟ್ ವಿತರಿಸಲಾಯಿತು.

ಕಾಲೇಜಿನ ವಿದ್ಯಾರ್ಥಿಗಳು ಹಿಂದಿನಿಂದಲೂ ದೇಶೀಯ ಕ್ರೀಡೆ ಸೇರಿದಂತೆ ವಿವಿಧ ಕ್ರೀಡೆಗಳಲ್ಲೂ ಹೆಚ್ಚು ಸಾಧನೆ ಮಾಡಿದ್ದಾರೆ. ಇದನ್ನು ಗುರುತಿಸಿ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ಕಾಲೇಜಿಗೆ ಕ್ರೀಡಾ ಉಪಕರಣ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಮೇಜರ್ ಬಿ.ರಾಘವ ಮಾತನಾಡಿ, ಹಳೇ ವಿದ್ಯಾರ್ಥಿಗಳ ಸಂಘ ಕಾಲೇಜಿಗೆ ಬಹಳಷ್ಟು ಸಹಕಾರ ನೀಡುತ್ತಿದೆ. ಕಾಲೇಜಿನ ಕುಂದುಕೊರತೆಗಳಿಗೆ ಸ್ಪಂದಿಸುತ್ತಿದೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಈ ಉಪಕರಣಗಳು ಕ್ರೀಡಾ ತರಬೇತಿಗೆ ನೆರವಾಗಲಿದೆ ಎಂದರು.

ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ, ಉಪಾಧ್ಯಕ್ಷ ಬೊಟ್ಟಂಗಡ ಗಣಪತಿ, ಪ್ರಧಾನ ಕಾರ್ಯದರ್ಶಿ ಚಂದನ್ ನಂದರಬೆಟ್ಟು, ಕಾಲೇಜಿನ ಕ್ರೀಡಾ ನಿರ್ದೇಶಕ ರಮೇಶ್, ಕ್ರೀಡಾ ವಿದ್ಯಾರ್ಥಿಗಳು ಹಾಜರಿದ್ದರು.

ಚಾ.ನಗರ ಜಿಲ್ಲೆಯಲ್ಲಿ ಗಾಂಜಾ ಪ್ರಕರಣ ಹೆಚ್ಚು ದಾಖಲು

● ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಮಾಹಿತಿ ● ಎಸ್‌ಸಿ, ಎಸ್‌ಟಿ ಕುಂದುಕೊರತೆ ಸಭೆ


ಚಾಮರಾಜನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ.ಜಾತಿ ಹಾಗೂ ವರ್ಗದ ಕುಂದುಕೊರತೆ ಸಭೆಯಲ್ಲಿ ಎಸ್ಪಿ ಬಿ.ಟಿ.ಕವಿತಾ ಮಾತನಾಡಿದರು.

ಚಾಮರಾಜನಗರ, ಫೆ.23–ಜಿಲ್ಲೆಯಲ್ಲಿ ಇತ್ತೀಚೆಗೆ ಗಾಂಜಾ ಬೆಳೆಯುವುದು, ಸಾಗಣೆ ಮಾಡುವ ಪ್ರಕರಣಗಳು ಹೆಚ್ಚು ದಾಖಲಾಗುತ್ತಿದ್ದು, ಈ ನಿಟ್ಟಿನಲ್ಲಿ ಚಾಮರಾಜನಗರವನ್ನು ಗಾಂಜಾ ಮುಕ್ತ ಜಿಲ್ಲೆಯನ್ನಾಗಿಸಲು ಪೊಲೀಸ್ ಇಲಾಖೆ ಕಟಿಬದ್ಧವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ನಡೆದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಹಾಗೂ ವರ್ಗದ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 2020ನೇ ಸಾಲಿನಲ್ಲಿ 27 ಪ್ರಕರಣ, 2021ನೇ ಸಾಲಿನಲ್ಲಿ 26, 2022ನೇ ಸಾಲಿನಲ್ಲಿ 28, 2023ನೇ ಸಾಲಿನಲ್ಲಿ 38, 2024ನೇ ಸಾಲಿನಲ್ಲಿ 37 ಹಾಗೂ 2025ರ ಜನವರಿಯಲ್ಲಿ 16, ಫೆಬ್ರವರಿಯಲ್ಲಿ 5 ಗಾಂಜಾ ಗಿಡ ಬೆಳೆದಿರುವ ಪ್ರಕರಣ ದಾಖಲಾಗಿವೆ ಎಂದು ಮಾಹಿತಿ ನೀಡಿದರು.

ಕಾಲೇಜುಗಳಲ್ಲಿ ಮಾದಕ ವಸ್ತು ಮಾರಾಟ ನಡೆಯುತ್ತಿದೆ ಎಂಬ ಅನೇಕ ದೂರುಗಳು ಕೇಳಿ ಬಂದಿವೆ. ಹೀಗಾಗಿ ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇದರ ತಡೆಗೆ ನಾರ್ಕೋಟಿಕ್ ಡಾಗ್ ನಿಯೋಜಿಸಲಾಗಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಸೇವನೆ ಕುರಿತು ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಮುಖಂಡ ಹೊನ್ನೂರು ಕೃಷ್ಣಮೂರ್ತಿ ಮಾತನಾಡಿ, ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ವ್ಹೀಲಿಂಗ್ ಹಾವಳಿ ಹೆಚ್ಚಾಗಿದೆ. ಇದರಿಂದ ಜನಸಾಮಾನ್ಯರ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಪೊಲೀಸರು ವ್ಹೀಲಿಂಗ್ ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಪರಿಶಿಷ್ಟ ಜಾತಿ, ಪಂಗಡದವರು ವಾಸ ಮಾಡುವ ಬಡಾವಣೆಯ ಅಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟವಾಗುತ್ತಿದ್ದು, ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮುಖಂಡ ಸಿದ್ದಯ್ಯನಪುರ ಶಿವರಾಜು ಮಾತನಾಡಿ, ಚಾಮರಾಜನಗರ ಸತ್ಯಮಂಗಲ ರಸ್ತೆ, ದೊಡ್ಡರಾಯಪೇಟೆ, ಮೂಡ್ಲುಪುರ ಬೈಪಾಸ್‌ನಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ. ಸುಗಮ ರಸ್ತೆ ಸಂಚಾರಕ್ಕೆ ಪೊಲೀಸ್ ಇಲಾಖೆಯಿಂದ ಅನೂಕೂಲ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಎಸ್ಪಿ ಬಿ.ಟಿ.ಕವಿತಾ ಪ್ರತಿಕ್ರಿಯಿಸಿ, ಈ ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಸಭೆ ನಡೆದಿದ್ದು, ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು ಎಂದರು. ಇದೇ ವೇಳೆ ಜಿಲ್ಲೆಯ ವಿವಿಧೆಡೆಯಿಂದ ಭಾಗವಹಿಸಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮುಖಂಡರು ಕುಂದುಕೊರತೆಗಳನ್ನು ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಡಿವೈಎಸ್‌ಪಿ ವಿ.ಲಕ್ಷ್ಮಯ್ಯ, ಎಎಸ್‌ಪಿ ಶಶಿಧರ್, ಜಿಲ್ಲಾ ಪರಿಶಿಷ್ಟ ವರ್ಗಗಳ ಇಲಾಖೆ ಕಲ್ಯಾಣಾಧಿಕಾರಿ ಬಿಂದ್ಯಾ, ಸಹಾಯಕ ನಿರ್ದೇಶಕ ನಂಜುಂಡೇಗೌಡ, ಪೊಲೀಸ್ ಉಪನಿರೀಕ್ಷಕರು ಹಾಜರಿದ್ದರು.

ಎರಡು ವರ್ಷದಲ್ಲಿ 92 ದೌರ್ಜನ್ಯ ಪ್ರಕರಣ

ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯಲ್ಲಿ 92 ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, ಬಹುತೇಕ ಎಲ್ಲಾ ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ತಿಳಿಸಿದರು.

ಸಭೆಯಲ್ಲಿ ಡಿಎಸ್‌ಎಸ್ ಮೈಸೂರು ವಿಭಾಗೀಯ ಸಂಘಟನಾ ಕಾರ್ಯದರ್ಶಿ ದೊಡ್ಡಿಂದುವಾಡಿ ಸಿದ್ದರಾಜು ಮಾತನಾಡಿ, ಜಿಲ್ಲೆಯಲ್ಲಿ ದಲಿತರ ಮೇಲೆ ಎಷ್ಟು ದೌರ್ಜನ್ಯ ನಡೆದಿವೆ. ಎಷ್ಟು ಪ್ರಕರಣಕ್ಕೆ ಪರಿಹಾರ ಒದಗಿಸಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಎಸ್‌ಪಿ, 2023ನೇ ಸಾಲಿನಲ್ಲಿ 49, 2024ನೇ ಸಾಲಿನಲ್ಲಿ 37 ಹಾಗೂ 2025ರಲ್ಲಿ 6 ಪ್ರಕರಣಗಳು ದಾಖಲಾಗಿವೆ. ಬಹುತೇಕ ಪ್ರಕರಣಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಕೊಡಿಸಲಾಗಿದೆ ಎಂದು ತಿಳಿಸಿದರು.

ಬೈಕ್ ಡಿಕ್ಕಿ: ಮ.ಬೆಟ್ಟದ ಯಾತ್ರಾರ್ಥಿ ಸಾವು


ಸ್ವಾಮಿ

ಕೊಳ್ಳೇಗಾಲ, ಫೆ.23–ಶಿವರಾತ್ರಿ ಜಾತ್ರೆ ಹಿನ್ನೆಲೆಯಲ್ಲಿ ಮಹದೇಶ್ವರಬೆಟ್ಟಕ್ಕೆ ಮೈಸೂರಿನ ರಮ್ಮನಹಳ್ಳಿ ಗ್ರಾಮದಿಂದ ಪಾದಯಾತ್ರೆ ಯಾತ್ರಾರ್ಥಿಗಳಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿರುವ ಘಟನೆ ತಾಲೂಕಿನ ಮಧುವನಹಳ್ಳಿ ಗ್ರಾಮದ ಸಮೀಪ ನಡೆದಿದೆ.

ಮೈಸೂರಿನ ರಮ್ಮನಹಳ್ಳಿ ಗ್ರಾಮದ ಸ್ವಾಮಿ(37) ಮೃತಪಟ್ಟಿದ್ದು, ರಮ್ಮನಹಳ್ಳಿ ಚಿಕ್ಕಮಾದು, ಮರಿ ಗೋಪಾಲಿ, ಟಾಟಾ ಬಿರ್ಲಾ, ಪ್ರಜ್ವಲ್ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಮ್ಮನಹಳ್ಳಿ ಗ್ರಾಮದಿಂದ ನೂರಾರು ಭಕ್ತರು ಶಿವರಾತ್ರಿ ಹಬ್ಬದ ಪ್ರಯುಕ್ತ ಮ.ಬೆಟ್ಟ ತೆರಳಲು ಹರಕೆ ಹೊತ್ತು ಕಲ್ಲೂರು, ಮುಳ್ಳೂರು ಮಾರ್ಗವಾಗಿ ಮಧುವನಹಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಳಿ ತೆರಳುತ್ತಿದ್ದರು. ಈ ವೇಳೆ ಬೆಂಗಳೂರಿನಿಂದ ಮಾರ್ಟಳ್ಳಿಗೆ ಹೋಗುತ್ತಿದ್ದ ಬೈಕ್ ಸವಾರರು ಯಾತ್ರಿಗಳ ಗುಂಪಿಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಸ್ವಾಮಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇಬ್ಬರು ಪಾದಚಾರಿಗಳು ಹಾಗೂ ಬೈಕ್ ಸವಾರರಿಬ್ಬರು ಗಾಯಗೊಂಡಿದ್ದಾರೆ. ಡಿವೈಎಸ್ಪಿ ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಾದಯ್ಯ, ಎಸ್‌ಐ ಸುಪ್ರೀತ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3 ತಿಂಗಳಲ್ಲಿ ಯಳಂದೂರು ಪಪಂ ವ್ಯಾಪ್ತಿಯಲ್ಲಿ ಎಲ್ಲರಿಗೂ ಇ-ಖಾತಾ



ಯಳಂದೂರು ಪಟ್ಟಣ ಪಂಚಾಯಿತಿಯಲ್ಲಿ ಇ–ಖಾತಾ ಅಭಿಯಾನ ನಡೆಸಲಾಯಿತು.

ಯಳಂದೂರು, ಫೆ.23–ರಾಜ್ಯದ ನಗರ ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಬಾಕಿ ಎಲ್ಲಾ ಆಸ್ತಿಗಳಿಗೆ ಮೂರು ತಿಂಗಳ ಒಳಗೆ ಇ–ಖಾತಾ ನೀಡಲು ಪೌರಾಡಳಿತ ಇಲಾಖೆ ಸಿದ್ಧತೆ ನಡೆಸಿದ್ದು, ಈ ಸಂಬಂಧ ಪಟ್ಟಣ ಪಂಚಾಯಿತಿಯಲ್ಲಿ ಇ–ಖಾತಾ ಅಭಿಯಾನ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಮಹೇಶ್ ಕುಮಾರ್ ಮಾತನಾಡಿ, ಮೇ10ರೊಳಗೆ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿ ಆಸ್ತಿಗಳಿಗೆ ಇ–ಖಾತಾ ನೀಡಲು ಅಭಿಯಾನ ನಡೆಸುವಂತೆ ಸೂಚನೆ ನೀಡಲಾಗಿದೆ. ಇ–ಖಾತಾ ಪಡೆಯಲು ಬೇಕಾದ ದಾಖಲೆಗಳನ್ನು ಮಾಹಿತಿ ನೀಡಲು ಸಹಾಯವಾಣಿ ಸ್ಥಾಪಿಸಲಾಗುವುದು. ಎ ಮತ್ತು ಬಿ ರಿಜಿಸ್ಟರ್‌ನಲ್ಲಿ ಇ–ಖಾತಾ ನೀಡಲಾಗುವುದು. ಇದಕ್ಕೆ ಪ್ರತ್ಯೇಕ ನಿಯಮಗಳಿದ್ದು, ಪಟ್ಟಣ ಪಂಚಾಯಿತಿಯಲ್ಲಿ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದರು.

ಎ ರಿಜಿಸ್ಟರ್‌ನಲ್ಲಿ ಗ್ರಾಮ ಠಾಣಾ, ನಿಗಮ ಮಂಡಳಿಗಳಿಂದ ನೀಡಲಾದ ಹಕ್ಕುಪತ್ರ, ಕಂದಾಯ ಇಲಾಖೆಯಿಂದ 94 ಸಿಸಿ ಅಡಿ ನೀಡಲಾದ ಹಕ್ಕುಪತ್ರ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ಬಡಾವಣೆಯಲ್ಲಿನ ಸ್ವತ್ತು, ಬಿ ರಿಜಿಸ್ಟರ್‌ನಲ್ಲಿ ಭೂ ಪರಿವರ್ತನೆಯಾದ ಬಡಾವಣೆಗಳ ನಿವೇಶನ, ಕಟ್ಟಡ ಹಾಗೂ ಭೂ ಪರಿವರ್ತನೆಯಾಗದೇ ಉಪವಿಭಜನೆ ಮಾಡಿ ನಿವೇಶನಗಳಾಗಿ ಮಾರಾಟದ ನಿವೇಶನ, ಕಟ್ಟಡಗಳಿಗೆ ಇ–ಖಾತಾ ಪಡೆಯಬಹುದು. ಹಾಗಾಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕಟ್ಟಡ ಮತ್ತು ನಿವೇಶನ ಮಾಲೀಕರು ಆಸ್ತಿಗಳಿಗೆ ಸಂಬಂಧಪಟ್ಟ ಪೂರಕ ದಾಖಲೆಗಳನ್ನು ಒದಗಿಸಿ, ಸ್ವತ್ತುಗಳಿಗೆ ಸಂಬಂಧಪಟ್ಟ ಬಾಕಿ, ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿ ನಮೂನೆ–3 ಮತ್ತು ನಮೂನೆ 3ಎಗಳನ್ನು ನಿಗದಿತ ಅವಧಿಯೊಳಗೆ ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಪಪಂ ಅಧ್ಯಕ್ಷೆ ಲಕ್ಷ್ಮೀ ಉಪಾಧ್ಯಕ್ಷೆ ಶಾಂತಮ್ಮ, ಸದಸ್ಯರಾದ ಮಹೇಶ್, ಮಹದೇವ ನಾಯಕ, ಮಂಜು, ನಾಮನಿರ್ದೇಶಿತ ಸದಸ್ಯರಾದ ಮುನವ್ವರ್ ಬೇಗ್, ಶ್ರೀಕಂಠಸ್ವಾಮಿ ಸಿಬ್ಬಂದಿ ಸುರೇಶ್, ಮಂಜುನಾಥ್, ಜಯಲಕ್ಷ್ಮಿ, ಮಲ್ಲಿಕಾರ್ಜುನ, ಮಹೇಶ್ ಅನೇಕರು ಇದ್ದರು.

ಶಿಕ್ಷಕ ರತ್ನ ಪ್ರಶಸ್ತಿ ವಿಜೇತ ಸುನೀಲ್‌ದೇವ್ ಕುಮಾರ್‌ಗೆ ಸನ್ಮಾನ


ಸೇವಾರತ್ನ ಪ್ರಶಸ್ತಿಗೆ ಭಾಜನರಾದ ಕೆಸ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಸುನೀಲ್ ದೇವ್‌ಕುಮಾರ್ ಅವರನ್ನು ಪ್ರಜಾಸತ್ತಾತ್ಮಕ ಒಕ್ಕೂಟದ ವತಿಯಿಂದ ಸನ್ಮಾನಿಸಲಾಯಿತು.

ಯಳಂದೂರು: ತಾಲೂಕಿನ ಕೆಸ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಸುನೀಲ್‌ದೇವ್ ಕುಮಾರ್ ಅವರಿಗೆ ಶಿಕ್ಷಕ ರತ್ನ ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ತಾಲೂಕು ಪ್ರಜಾ ಸತ್ತಾತ್ಮಕ ನೌಕರರ ಒಕ್ಕೂಟದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಬಸವಣ್ಣ ಮಾತನಾಡಿ, ಸುನೀಲ್‌ದೇವ್ ಕುಮಾರ್‌ಗೆ ಪ್ರಶಸ್ತಿ ಲಭಿಸಿರುವುದು ತಾಲೂಕಿಗೆ ಹೆಮ್ಮೆ. ಇವರು ಮಕ್ಕಳಿಗೆ ನೀಡುತ್ತಿರುವ ಪ್ರಾಮಾಣಿಕ ಸೇವೆಗೆ ಪ್ರಶಸ್ತಿ ಸಂದಿದೆ. ಅನೇಕ ವರ್ಷಗಳಿಂದಲೂ ಇವರು ತಾಲೂಕಿನಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳ ಕಲಿಕೆಯಲ್ಲಿ ಇವರ ಸೇವೆ ಗಣನೀಯ. ಇವರ ಸೇವೆ ಇತರರಿಗೆ ಮಾದರಿಯಾಗಲಿ ಎಂದು ಆಶಿಸಿದರು.

ಒಕ್ಕೂಟದ ಸದಸ್ಯರಾದ ಸತೀಶ್, ರೇಚಣ್ಣ, ಜಯಶಂಕರ್, ರಾಜೇಶ್, ವರದರಾಜು, ದೊರೆಸ್ವಾಮಿ, ಬಸವಣ್ಣ, ನಾಗರಾಜು ಇತರರು ಹಾಜರಿದ್ದರು.

ವಾಲ್ಮೀಕಿ, ಭಗೀರಥ, ಕನಕದಾಸರ ಪುತ್ಥಳಿ ನಿರ್ಮಾಣಕ್ಕೆ ಅನುಮತಿ

ಚಾಮರಾಜನಗರ, ಫೆ.23–ಜಿಲ್ಲೆಯ ನಾಯಕ ಸಮುದಾಯದ ಹತ್ತು ವರ್ಷಗಳ ಬೇಡಿಕೆಯಾಗಿದ್ದ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಶ್ರೀವಾಲ್ಮೀಕಿ ಪುತ್ಥಳಿ ನಿರ್ಮಾಣದ ಜೊತೆಗೆ ಶ್ರೀಭಗೀರಥ ಹಾಗೂ ಶ್ರೀ ಕನಕದಾಸರ ಪುತ್ಥಳಿ ನಿರ್ಮಿಸಲು ಸರ್ಕಾರ ಒಪ್ಪಿಗೆ ನೀಡಿದೆ. ಇದಕ್ಕೆ ನಾಯಕ ಸಮುದಾಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತದೆ ಎಂದು ತಾಲೂಕು ನಾಯಕ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಪು.ಶ್ರೀನಿವಾಸನಾಯಕ ಹಾಗೂ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಅಕ್ಟೋಬರ್ 17ರಂದು ಜಿಲ್ಲಾಡಳಿತದಿಂದ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಸಮುದಾಯ ಬಹಿಷ್ಕಾರ ಮಾಡಿ, ಪ್ರತ್ಯೇಕವಾಗಿ ವಾಲ್ಮೀಕಿ ಜಯಂತಿ ಆಚರಣೆ ಮಾಡಲಾಗಿತ್ತು. ಜೊತೆಗೆ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂಡು ಸರ್ಕಾರ ಹಾಗೂ ಜಿಲ್ಲಾಡಳಿತದ ಗಮನ ಸೆಳೆದು 2 ತಿಂಗಳ ಗಡುವು ನೀಡಲಾಗಿತ್ತು. ಸಮುದಾಯದ ಒಗ್ಗಟ್ಟು ಪ್ರದರ್ಶನ ಹಾಗೂ ವಾಲ್ಮೀಕಿ ಪುತ್ಥಳಿ ನಿರ್ಮಾಣವಾಗಬೇಕೆಂಬ ನಮ್ಮ ಸಂಕಲ್ಪವನ್ನು ಸರ್ಕಾರ ಈಡೇರಿಸಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು, ಜಿಲ್ಲೆಯ ಶಾಸಕರು ಹಾಗೂ ಸಂಸದರು ಜಿಲ್ಲಾಡಳಿತ ಭವನದ ಮುಂಭಾಗ ಸೂಕ್ತ ಸ್ಥಳದಲ್ಲಿ ವಾಲ್ಮೀಕಿ ಸೇರಿದಂತೆ ಮೂವರು ಮಹಾಪುರುಷರ ಪುತ್ಥಳಿಯನ್ನು ಸ್ಥಾಪಿಸಲು ನಿರ್ಣಯ ಮಾಡಿದೆ. ಪುತ್ಥಳಿ ನಿರ್ಮಾಣಕ್ಕೆ ತಲಾ 50 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ಹೀಗಾಗಿ ಜಿಲ್ಲಾಡಳಿತ ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಪುತ್ಥಳಿಗಳ ನಿರ್ಮಾಣಕ್ಕೆ ಜಾಗ ನಿಗದಿ ಗೊಳಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರಸಭಾ ಅಧ್ಯಕ್ಷ ಸುರೇಶ್, ಮುಖಂಡರಾದ ಚೆಂಗುಮಣಿ, ಸೋಮನಾಯಕ, ವೆಂಕಟೇಶ್‌ನಾಯಕ, ಮಾದೇಶ್ ಹಾಜರಿದ್ದರು.


ಸುದ್ದಿಗೋಷ್ಠಿಯಲ್ಲಿ ಚಾಮರಾಜನಗರ ತಾಲೂಕು ನಾಯಕ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಪು.ಶ್ರೀನಿವಾಸ ನಾಯಕ ಮಾತನಾಡಿದರು.

ಕೆಎಸ್ಐಸಿ ಜಾಗ ಕ್ರೀಡಾಂಗಣಕ್ಕೆ ನೀಡಿದರೆ

ಕೆಎಸ್ಐಸಿ ಉಳಿಸಿ, ಕ್ರೀಡಾಂಗಣ ನಿರ್ಮಿಸಿ ಹೋರಾಟ

ದಸಂಸ (ಬಣ ರಹಿತ) ಜಿಲ್ಲಾ ಸಂಚಾಲಕ ಸಿ.ಉಮಾ ಮಹಾದೇವ ಎಚ್ಚರಿಕೆ

ತಿ.ನರಸೀಪುರ, ಫೆ.23– ತಾಲೂಕು ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಸ್ಐಸಿ ಜಾಗ ನೀಡಿದರೇ 'ಕೆಎಸ್ಐಸಿ ಉಳಿಸಿ ಕ್ರೀಡಾಂಗಣ ನಿರ್ಮಿಸಿ ಹೋರಾಟ' ನಡೆಸಲಾಗುವುದು ಎಂದು ದಲಿತ ಸಂಘರ್ಷ ಸಮಿತಿ (ಬಣ ರಹಿತ) ಜಿಲ್ಲಾ ಸಂಚಾಲಕ ಸಿ.ಉಮಾ ಮಹಾದೇವ ಎಚ್ಚರಿಸಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ದಲಿತ ಸಂಘರ್ಷ ಸಮಿತಿ (ಬಣ ರಹಿತ) ವತಿಯಿಂದ ನಡೆದ ಕೆಎಸ್ಐಸಿ ಉಳಿಸಿ ಸಭೆ ಬಳಿಕ ಮಾತನಾಡಿದ ಅವರು, ಸರ್ಕಾರ ಹೊಸದಾಗಿ ಯಾವುದೇ ಉದ್ಯೋಗ ಸೃಷ್ಟಿಸುವಂತಹ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿಲ್ಲ. ಅಂತಹದರಲ್ಲಿ ತಿ.ನರಸೀಪುರದಲ್ಲಿ ಮಹಾರಾಜರ ಕಾಲದಲ್ಲಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮಕ್ಕೆ ಅದರ ಅಭಿವೃದ್ಧಿಯನ್ನು ಮುಂದಾಲೋಚಿಸಿಕೊಂಡು ಬಿಟ್ಟಿರುವ ಜಾಗವನ್ನು ಕ್ರೀಡಾಂಗಣಕ್ಕೆ ಪಡೆಯ ಬೇಕೆಂದು ಏಕಾಏಕಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹಾಗೂ ಜಿಲ್ಲಾಧಿಕಾರಿಗಳು ಕೆಎಸ್ಐಸಿ ಜಾಗವನ್ನು ಕ್ರೀಡಾಂಗಣ ನಿರ್ಮಾಣಕ್ಕೆ 6 ಎಕರೆ ಜಾಗ ಕೊಡಲು ನಿರ್ಧರಿಸಿರುವುದು ಸರಿಯಲ್ಲ ಎಂದರು.

ನಮ್ಮ ಮಕ್ಕಳಿಗೆ, ಕ್ರೀಡಾ ಪ್ರೇಮಿಗಳಿಗೆ ಕ್ರೀಡಾಂಗಣದ ಅವಶ್ಯಕತೆ ಇದೆ. ಅದರ ನಿರ್ಮಾಣಕ್ಕೆ ತಿ.ನರಸೀಪುರದ ಪ್ರತಿಯೊಬ್ಬರ ಬೆಂಬಲವು ಇದೆ. ಆದರೆ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮಕ್ಕೆ ಸೇರಿದ ಜಾಗವನ್ನು ವಶಕ್ಕೆ ಪಡೆಯುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.



ತಿ.ನರಸೀಪುರದಲ್ಲಿ ದಲಿತ ಸಂಘರ್ಷ ಸಮಿತಿ (ಬಣ ರಹಿತ) ವತಿಯಿಂದ ನಡೆದ ಕೆಎಸ್ಐಸಿ ಉಳಿಸಿ ಸಭೆಯಲ್ಲಿ ಜಿಲ್ಲಾ ಸಂಚಾಲಕ ಸಿ.ಉಮಾ ಮಹಾದೇವ ಮಾತನಾಡಿದರು.

ಶಾಸಕರು, ಸಚಿವರ ಬಳಿ ಉದ್ಯೋಗ ಕೇಳಿಕೊಂಡು ಹೋಗುವ ತಿ.ನರಸೀಪುರ ಜನತೆಗೆ ಮೊದಲು ಲೆಟರ್ ಕೊಡುವುದು ಕೆಎಸ್ಐಸಿಗೆ. ಹೀಗಿರುವಾಗ ಮುಂದಿನ ದಿನಗಳಲ್ಲಿ ಅದನ್ನು ಅಭಿವೃದ್ಧಿಗೊಳಿಸಿ ನೂರಾರು ಮಂದಿಗೆ ಉದ್ಯೋಗ ನೀಡುವ ಸಂಸ್ಥೆಯಾಗಿ ಮಾಡಬೇಕಾದ ಸರ್ಕಾರ ಅದರ ಜಾಗವನ್ನು ಕ್ರೀಡಾಂಗಣಕ್ಕೆ ಬಿಟ್ಟು ಕೊಡುವುದು ಸೂಕ್ತವಲ್ಲ ಎಂದರು.

ಒಂದು ಕ್ರೀಡಾಂಗಣಕ್ಕೆ ಕ್ರೀಡಾಂಗಣದಷ್ಟೇ ಜಾಗ ಅದರ ಪಾರ್ಕಿಂಗ್ ವ್ಯವಸ್ಥೆಗೆ ಬೇಕಾಗುತ್ತದೆ. ಅದು ಕೇವಲ ತಾಲೂಕು ಮಟ್ಟದ ಕ್ರೀಡಾಂಗಣ ಎನ್ನುವ ಆಲೋಚನೆ ಬಿಟ್ಟು ಕನಿಷ್ಠ ಮುಂದಿನ 100 ವರ್ಷದ ಬೆಳವಣಿಗೆ ಗಮನದಲ್ಲಿ ಇಟ್ಟುಕೊಂಡು ನಿರ್ಮಾಣ ಮಾಡಬೇಕು. ತಾಲೂಕಿನ ತಲಕಾಡು ಭಾಗದ ಮೆದನಿ, ಬಣವೆ, ಮಡವಾಡಿ ಭಾಗದಲ್ಲಿ 800 ಎಕರೆಯಷ್ಟು ಫಲವತ್ತಾದ ಸರ್ಕಾರಿ ಭೂಮಿ ಭೂಗಳ್ಳರ ಪಾಲಾಗಿದೆ. ನಿಲಸೋಗೆ ಮತ್ತು ಕೇತುಪುರ ವ್ಯಾಪ್ತಿಯಲ್ಲಿ ಸರ್ಕಾರದ ಜಮೀನು ಇದೆ. ಆದ್ದರಿಂದ ಸರ್ಕಾರ ರೈತರ ಮನವೊಲಿಸಿ ಅಲ್ಲಿ ಎಪಿಎಂಸಿಗೆ ಜಾಗ ಬಿಟ್ಟುಕೊಟ್ಟು ಇಲ್ಲಿನ ಅದರ ಜಾಗವನ್ನು ವಶಕ್ಕೆ ಪಡೆದು ತಿ.ನರಸೀಪುರದ ಪಟ್ಟಣದಲ್ಲಿ ಕ್ರೀಡಾಂಗಣಕ್ಕೆ ಬಳಸಿಕೊಳ್ಳಲಿ. ಸರ್ಕಾರಕ್ಕೆ ಎಪಿಎಂಸಿಯವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ದೊಡ್ಡ ಸಮಸ್ಯೆಯೇ ಅಲ್ಲ ಎಂದರು.

ಕರ್ನಾಟಕ ರೇಷ್ಮೆ ಉದ್ಯಮ ಈಗಷ್ಟೇ ಚೇತರಿಕೆಯಾಗುತ್ತಿದ್ದು, ನರಸೀಪುರದ ರೇಷ್ಮೆ ನೂಲು ತೆಗೆಯುವ ಘಟಕಕ್ಕೆ ಇನ್ನೂ ಹೆಚ್ಚಿನ ಯಂತ್ರಗಳು ಬರಲಿದ್ದು ಅದಕ್ಕೆ ಈಗಿರುವಷ್ಟೇ ಜಾಗ ಬೇಕಾಗಿದೆ. ಇದಕ್ಕಾಗಿ ನಿಗಮವು ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಕೆಎಸ್ಐಸಿ ರೇಷ್ಮೆ ಸೀರೆ ದೇಶಾದ್ಯಂತ ಹೆಸರು ಗಳಿಸಿದ್ದು ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿದೆ. ಹೀಗಿರುವಾಗ ಅದರ ಅಭಿವೃದ್ಧಿಗೆ ಮೊನ್ನೆಯಷ್ಟೇ ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವರು ಮತ್ತು ಕೆಎಸ್ಐಸಿ ನಿಗಮದ ಬೋರ್ಡ್ ಚೇರ್ಮನ್ ಹಾಗೂ ಉನ್ನತ ಅಧಿಕಾರಿಗಳು ವಿಯಟ್ನಾಂ ದೇಶಕ್ಕೆ ತೆರಳಿ ಅಲ್ಲಿನ ರೇಷ್ಮೆ ಕೃಷಿ ಹಾಗೂ ಸಿಲ್ಕ್ ಸೀರೆ ನೆಯ್ಗೆ ಘಟಕಗಳಿಗೆ ಭೇಟಿ ಕೊಟ್ಟು ನಮ್ಮ ಕರ್ನಾಟಕದಲ್ಲಿ ರೇಷ್ಮೆ ಕೃಷಿ ಮತ್ತು ಸೀರೆ ಉತ್ಪಾದನೆ ಮತ್ತು ಅಭಿವೃದ್ಧಿಗೆ ಸಂಬಂಧ ಪಟ್ಟಂತೆ ಮಾತುಕತೆ ಮಾಡುತ್ತಿದ್ದಾರೆ. ಹೀಗಿರುವಾಗ ಜನಪ್ರತಿನಿಧಿಗಳು ಏಕಪಕ್ಷೀಯ ನಿರ್ಧಾರ ಕೈಗೊಳ್ಳುವುದು ಎಷ್ಟು ಸರಿ. ಮೇಲಾಗಿ ಕಾರ್ಖಾನೆ ಪಕ್ಕ ಕ್ರೀಡಾಂಗಣ ನಿರ್ಮಾಣ ಸರಿಯಲ್ಲ. ಅಲ್ಲದೇ ಈಗ ವಶಕ್ಕೆ ಪಡೆಯಲು ಉದ್ದೇಶಿಸಿರುವ ಜಾಗ ಕ್ರೀಡಾಂಗಣಕ್ಕೆ ಸಾಕಾಗುವುದಿಲ್ಲ. ಒಂದು ವೇಳೆ ಅಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದರೆ ಅಲ್ಲಿ ಹೊಡೆದ ಚೆಂಡು ಭೈರಾಪುರ ಅಥವಾ ಗೋಪಾಲಪುರದ ಮನೆಗಳ ಮೇಲೆ ಬೀಳುತ್ತದೆ. ಇದು ಅವೈಜ್ಞಾನಿಕವಾಗಿದೆ ಎಂದರು.

ಈಗಾಗಲೇ ರೇಷ್ಮೆ ಮಾರುಕಟ್ಟೆ ಕಟ್ಟಡ ಜಾಗ ತೆಗೆದುಕೊಂಡು ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಮಾಡಲಾಗಿದೆ. ಈಗ ರೇಷ್ಮೆ ಫ್ಯಾಕ್ಟರಿ ಜಾಗವನ್ನು ವಶಕ್ಕೆ ಪಡೆದು ಕ್ರೀಡಾಂಗಣ ಮಾಡುತ್ತೇವೆ ಅನ್ನುವುದು ತರವಲ್ಲ. ಇದು ತಮ್ಮನಿಗೆ ಕಣ್ಣು ಕುರುಡಾಗಿದೆ ಅಂತ ಜೀವಂತ ಇರುವ ಅಣ್ಣನ ಕಣ್ಣು ತೆಗೆದು ಹಾಕಿದಂತಾಗುತ್ತದೆ. ಆದ್ದರಿಂದ ಸದರಿ ಯೋಚನೆ ಕೈಬಿಡಬೇಕು. ಇದಕ್ಕೆ ದಲಿತ ಸಂಘರ್ಷ ಸಮಿತಿ (ಬಣ ರಹಿತ) ಇದಕ್ಕೆ ವ್ಯಾಪಕ ವಿರೋಧ ವ್ಯಕ್ತಪಡಿಸುತ್ತದೆ ಮತ್ತು ಈ ನಿಟ್ಟಿನಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ವೇಳೆ ಜಿಲ್ಲಾ ಸಂಘಟನಾ ಸಂಚಾಲಕ ಆಲತ್ತೂರು ಶಿವರಾಜು, ಮೂಡಹಳ್ಳಿ ಮಹದೇವ್, ಅಶೋಕ್ ಕೆ.ಎಂ.ವಾಡಿ, ಚಂದ್ರು ಅಶೋಕಪುರಂ, ಮಹೇಶ್ ಸುತ್ತೂರು, ತಾಲೂಕು ಸಂಚಾಲಕ ಶಿವಪ್ರಕಾಶ್ ಕೇತುಪುರ, ಚಂದಳ್ಳಿ ಮಲ್ಲೇಶ್, ರಘು, ನಿರಂಜನ್, ಪ್ರದೀಪ್, ಮನೋರಂಜನ್, ನೇತ್ರಾವತಿ, ಪವಿತ್ರ, ಸುಮಿತ್ರಾ, ನಂದಿನಿ, ಕಲಾ, ರೂಪ, ಪಲ್ಲವಿ ಮತ್ತಿತರರಿದ್ದರು.

ಕೋಟೆಯಲ್ಲಿ ಅಗ್ನಿ ಅವಘಡಗಳ ಅರಿವು ಕಾರ್ಯಕ್ರಮ



ಹೆಚ್.ಡಿ.ಕೋಟೆಯಲ್ಲಿ ಅಗ್ನಿ ಅವಘಡಗಳ ಅರಿವು ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಫೆ23– ಬೆಂಗಳೂರಿನ ಕಾರ್ಲ್ಟನ್ ಟವರ್‌ನಲ್ಲಿ 2010ರಲ್ಲಿ ನಡೆದ ಅಗ್ನಿ ದುರಂತದಲ್ಲಿ 9 ಮಂದಿ ಸಾವನ್ನಪ್ಪಿದ್ದರು. ಅಲ್ಲದೇ ರಾಜ್ಯದ ವಿವಿಧೆಡೆ ನಡೆದ ಅಗ್ನಿ ಅವಘಡದಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಪ್ರತಿ ವರ್ಷ ಅಗ್ನಿಶಾಮಕ ಇಲಾಖೆ ಫೆ.23ರಂದು ಅಗ್ನಿ ಅವಘಡಗಳ ಅರಿವು ಮತ್ತು ಅಗ್ನಿ ಅನಾಹುತ ತಡೆಗಟ್ಟುವ ದಿನ ರಾಜ್ಯಾದ್ಯಂತ ಆಚರಿಸುತ್ತದೆ. ಅದರಂತೆ ಭಾನುವಾರ ಪಟ್ಟಣದ ಅಗ್ನಿಶಾಮಕ ಠಾಣೆ ವತಿಯಿಂದ ಕೋಟೆ ಪಟ್ಟಣದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ, ಪೆಟ್ರೋಲ್ ಬಂಕ್ ಹಾಗೂ ಸಾರ್ವಜನಿಕರ ತಾಣಗಳಲ್ಲಿ ಅರಿವು ಶಿಬಿರ ಹಮ್ಮಿಕೊಳ್ಳಲಾಯಿತು.

ಈ ವೇಳೆ ಸಾರ್ವಜನಿಕರಿಗೆ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಜಿ.ಸೋಮಣ್ಣ ಅವರು ಅಗ್ನಿ ಶಮನದ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭ ಅಗ್ನಿಶಾಮಕ ಸಿಬ್ಬಂದಿಗಳಾದ ಅಶೋಕ್, ಪುಂಡಲೀಕ ಲಮಾಣಿ, ಹೇಮಂತ್ ಕುಮಾರ್, ಸುನೀಲ್ ಕುಮಾರ್, ಬಾಲಕೃಷ್ಣ, ಯಲ್ಲಪ್ಪ ಉಪಸ್ಥಿತರಿದ್ದರು.

ಹಜರತ್ ಸೈದಾನಿ ಬಿಬಿ ಮಾ ಗಂಧೋತ್ಸವ



ಬೆಳಲೆ ಗ್ರಾಮದಲ್ಲಿ ಹಜರತ್ ಸೈದಾನಿ ಬಿಬಿ ಮಾ ಗಂಧೋತ್ಸವ ನಡೆಯಿತು.

ನಂಜನಗೂಡು, ಫೆ.23– ತಾಲೂಕಿನ ಬೆಳಲೆ ಗ್ರಾಮದಲ್ಲಿ ಹಿಂದೂ ಮತ್ತು ಮುಸ್ಲಿಂ ಭಾವೈಕ್ಯತೆಗೆ ಹೆಸರಾದ ಹಜರತ್ ಸೈದಾನಿ ಬಿಬಿ ಮಾ ಅವರ ಗಂಧೋತ್ಸವ ಸಂಭ್ರಮದಿಂದ ನಡೆಯಿತು.

ಹುಲ್ಲಹಳ್ಳಿಯ ಜಾಮಿಯಾ ಮಸೀದಿಯಿಂದ ಪಲ್ಲಕ್ಕಿಯಲ್ಲಿ ಗಂಧವನ್ನು ಇರಿಸಿ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಸಾಗಿ ನಂತರ ದರ್ಗಾ ಶರೀಫ್‌ಗೆ ಕೊಂಡು ಹೋಗಿ ವಿಠಲಪುರದ ಗುರುಗಳಾದ ಹಜರತ್ ಸೈಯದ್ ಷಾ ಮಹಮ್ಮದ್ ಉಸ್ಮಾನ್ ಪಾಷಾ ಖಾದ್ರಿ ತಂಡದಿಂದ ಗಂಧವನ್ನು ಅರ್ಪಿಸಲಾಯಿತು.

ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಹುಲ್ಲಹಳ್ಳಿ ಶಾಂತ ಮಲ್ಲಿಕಾರ್ಜುನ ವಿರಕ್ತ ಮಠಾಧ್ಯಕ್ಷ ಇಮ್ಮಡಿ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ, ಪವಿತ್ರವಾದ ಗಂಧದ ಮಹೋತ್ಸವದಲ್ಲಿ ಮುಸ್ಲಿಂ ಬಾಂಧವರಲ್ಲದೆ ಹೆಚ್ಚಾಗಿ ಹಿಂದೂಗಳೂ ಭಾಗವಹಿಸುತ್ತಾರೆ. ತಮ್ಮ ಕಷ್ಟಗಳಿಗೆ ಪರಿಹಾರ ಪಡೆದುಕೊಳ್ಳಲು ದರ್ಗಾದಲ್ಲಿ ಪ್ರಾರ್ಥನೆ ಮಾಡುತ್ತಾರೆ. ನಾವು 3 ಬಾರಿ ಶಿವನಿಗೆ ಪ್ರಾರ್ಥನೆ ಸಲ್ಲಿಸುತ್ತೇವೆ. ಮುಸ್ಲಿಂಮರು 5 ಬಾರಿ ನಮಾಜ್ ಮಾಡುವ ಮೂಲಕ ಪ್ರಾರ್ಥನೆ ಸಲ್ಲಿಸುತ್ತಾರೆ ಎಂದರು.

ಶಾಸಕ ದರ್ಶನ್ ಮಾತನಾಡಿ, ಮಾನವ ಕುಲಕ್ಕೆ ಯಾವುದೇ ಜಾತಿ ಇರುವುದಿಲ್ಲ. ಮಹೋತ್ಸವದಲ್ಲಿ ಎಲ್ಲಾ ಜಾತಿ, ಧರ್ಮಗಳ ಗುರುಗಳು ಭಾಗವಹಿಸಿರುವ ಹಿನ್ನೆಲೆಯಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯತೆ ಎತ್ತಿ ಹಿಡಿದಿದೆ ಎಂದರು.

ಕಾರ್ಯಕ್ರಮದಲ್ಲಿ ದರ್ಗಾ ಗುರುಗಳಾದ ಕೆ.ಆರ್.ಹುಸೇನ್ ದಮ್ಮಿ ರಂಜಾಲಾಡಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭೆ ಉಪಾಧ್ಯಕ್ಷೆ ರಿಹನಾ ಬಾನು, ನೂರ್ ಅಹ್ಮದ್, ಗ್ರಾಪಂ ಸದಸ್ಯರಾದ ಅನ್ಸರ್ ಅಹಮ್ಮದ್, ಜಾಮಿಯಾ ಮಸೀದಿ ಅಧ್ಯಕ್ಷ ಮುಶೀರ್ ಅಹಮ್ಮದ್, ಜಾವೀದ್ ಅಹ್ಮದ್, ಅನ್ಸರ್ ಅಹಮದ್, ಸಮೀವುಲ್ಲಾ, ಅಬ್ದುಲ್ ಖಾದರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ ಉಪಸ್ಥಿತರಿದ್ದರು.

ಯುವಕರು ಕಾಂಗ್ರೆಸ್ ಪಕ್ಷದ ಸಂಘಟನೆಗೆ ಮುಂದಾಗಿ



ಸರಗೂರು ಬ್ಲಾಕ್ ಯೂತ್ ಕಾಂಗ್ರೆಸ್ ಅಧ್ಯಕ್ಷ ನವೀನ್ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ಫೆ.23– ಯುವಕರು ಕಾಂಗ್ರೆಸ್ ಪಕ್ಷದ ಸಂಘಟನೆಗೆ ಮುಂದಾಗಬೇಕು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರಗೂರು ಬ್ಲಾಕ್ ಯೂತ್ ಕಾಂಗ್ರೆಸ್ ನೂತನ ಅಧ್ಯಕ್ಷ ನವೀನ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಪಕ್ಷದ ವರಿಷ್ಠರು ನೀಡಿರುವ ಹುದ್ದೆ, ಸಮಾಜದ ಹಿರಿಯರು ಹಾಗೂ ಮುಖಂಡರು, ಕಾರ್ಯಕರ್ತರು ಕೊಟ್ಟ ಸಲಹೆ ಪಡೆದು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯ ಚಿನ್ನಣ್ಣ, ಮುಖಂಡರಾದ ಸೋಮಣ್ಣ, ಅಭಿ ಉಪಸ್ಥಿತರಿದ್ದರು.

ಅಡಗೂರು ಗ್ರಾಪಂಗೆ ನಿಂಗರಾಜು ಅಧ್ಯಕ್ಷ

ಕೆ.ಆರ್.ನಗರ, ಫೆ.23– ತಾಲೂಕಿನ ಅಡಗೂರು ಗ್ರಾಪಂ ಅಧ್ಯಕ್ಷರಾಗಿ ಎಂ.ಎಸ್.ನಿಂಗರಾಜು ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಮಹದೇವ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಎಂ.ಎಸ್.ನಿಂಗರಾಜು ಮತ್ತು ಎ.ಪಿ.ಉಮೇಶ್‌ಬಾಬು ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 7 ಮತ ಪಡೆದ ಎಂ.ಎಸ್.ನಿಂಗರಾಜು, 6 ಮತ ಗಳಿಸಿದ ಎ.ಪಿ.ಉಮೇಶ್ ಬಾಬು ಅವರನ್ನು 1 ಮತದ ಅಂತರದಿಂದ ಪರಾಭವಗೊಳಿಸಿ ಅಧ್ಯಕ್ಷರಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಎಂ.ಎಸ್.ನಿಂಗರಾಜು ಮಾತನಾಡಿ, ನನ್ನ ಆಯ್ಕೆಗೆ ಸಹಕಾರ ನೀಡಿದ ಶಾಸಕ ಡಿ.ರವಿಶಂಕರ್ ಮತ್ತು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮತ್ತು ತಾಪಂ ಮಾಜಿ ಅಧ್ಯಕ್ಷ ಎಂ.ಹೆಚ್.ಸ್ವಾಮಿ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಗ್ರಾಮಸ್ಥರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರಲ್ಲದೆ



ಅಡಗೂರು ಗ್ರಾಪಂ ಅಧ್ಯಕ್ಷ ಎಂ.ಎಸ್.ನಿಂಗರಾಜು ಅವರನ್ನು ಮುಖಂಡರು ಅಭಿನಂದಿಸಿದರು.

ನನ್ನ ಅಧಿಕಾರವಧಿಯಲ್ಲಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳನ್ನು ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಸುಮಿತ್ರ, ಸದಸ್ಯರಾದ ಸುನೀತಾ, ಎಂ.ಕುಮಾರಿ, ಶ್ವೇತಾ, ಪಾರ್ವತಮ್ಮ, ಡಿ.ಟಿ.ಮಹೇಶ್, ಡಿ.ವಿ.ಮಂಜುನಾಥ್, ಶಿವರಾಜಮ್ಮ, ಮಹದೇವ, ಸಣ್ಣಸ್ವಾಮಿ, ಪ್ರಿಯಾಂಕ, ಪಿಡಿಓ ರವಿಕುಮಾರ್, ಇದ್ದರು.

ಚುನಾವಣಾಧಿಕಾರಿಯಾಗಿ ಸಿಡಿಪಿಓ ಸಿಎಂ ಅಣ್ಣಯ್ಯ ಕಾರ್ಯನಿರ್ವಹಿಸಿದರು. ಅಧ್ಯಕ್ಷರ ಆಯ್ಕೆ ಪ್ರಕಟವಾಗುತ್ತಿದ್ದಂತೆ ಮುಖಂಡರಾದ ಎಂ.ಹೆಚ್.ಸ್ವಾಮಿ, ತಮ್ಮಣ್ಣೇಗೌಡ, ಕೆಂಪೇಗೌಡ, ರಾಜೇಶ್, ಭೈರಪ್ಪ ನಾಯಕ, ಡಿ.ಸಿ.ರವಿ, ಡಿ.ಆರ್.ರಾಹುಲ್, ಎಂ.ಎಸ್.ಪಾಂಡು, ಎಂ.ವೈ.ಸ್ವಾಮಿ, ಪ್ರಕಾಶ್, ಪಾರ್ಥೇಗೌಡ, ಜಾಣೇಗೌಡ ಮತ್ತಿತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ದಾಸೋಹ ಕಾಯಕದಿಂದ ಮನುಷ್ಯನಿಗೆ ಮೋಕ್ಷ

ಮಲ್ಕುಂಡಿ, ಫೆ.23– ದಾಸೋಹ ಕಾಯಕ ಮನುಷ್ಯನನ್ನು ಮೋಕ್ಷದ ಹಾದಿಗೆ ಕೊಂಡ್ಯೊಯಲಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ಸಮೀಪದ ಹಲ್ಲರೆ ಗ್ರಾಮದ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ನಂದಿಧ್ವಜ ಲೋಕಾರ್ಪಣೆ ಹಾಗೂ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೃಷ್ಟಿಯಲ್ಲಿ ಹೊಸತನ್ನು ಸೃಷ್ಟಿಸುವ ಶಕ್ತಿ ಯಾರಿಗೂ ಇಲ್ಲ. ಆದರೆ ಪ್ರಕೃತಿದತ್ತವಾಗಿರುವುದನ್ನು ಮರುಸ್ಥಾಪಿಸುವುದು ಸಾಧ್ಯವಿದೆ. ಸಾಂಪ್ರದಾಯಿಕವಾಗಿ ಸರಳತೆಯಿಂದ ಧರ್ಮವನ್ನು ಆಚರಣೆ ಮಾಡಬೇಕೆಂದು ಪವಾಡ ಪುರುಷ ಗುರುಮಲ್ಲೇಶ್ವರರು ಅಂದಿನ ಕಾಲದಲ್ಲಿಯೇ ತಿಳಿಸಿಕೊಟ್ಟರು. ಅವರ ಹೆಸರಲ್ಲಿ ದಾಸೋಹ ಕಾಯಕವನ್ನು ಮಠಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಮಾತನಾಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಮಠ ಕಟ್ಟಿ ನಿತ್ಯ ದಾಸೋಹ ಕಾರ್ಯ ನಿರ್ವಹಿಸುವುದು ನಿಜಕ್ಕೂ ಸವಾಲಿನ ಕಾರ್ಯ. ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಗುರುಮಲ್ಲೇಶ್ವರ ಹೆಸರಿನಲ್ಲಿ ಮಠ ಕಟ್ಟಿ ಜೀರ್ಣೋದ್ಧಾರಗೊಳಿಸಿರುವ ಬಸವಣ್ಣ ಸ್ವಾಮೀಜಿಯವರ ಶ್ರಮ ನಿಜಕ್ಕೂ ಮೆಚ್ಚುವಂತಹದ್ದು. ಭಕ್ತರನ್ನು ಒಗ್ಗೂಡಿಸಿ ದಾಸೋಹ ಕಾರ್ಯ ನಡೆಸುತ್ತಿರುವುದು ಮಠ ಮಾನ್ಯಗಳ ಹಿರಿಮೆ ಹೆಚ್ಚಿದೆ ಎಂದು ತಿಳಿಸಿದರು.

ಮಾಜಿ ಶಾಸಕರಾದ ಬಿ.ಹರ್ಷ ವರ್ಧನ್, ಕಳಲೆ ಕೇಶವಮೂರ್ತಿ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ದೇವನೂರು ಗುರುಮಲ್ಲೇಶ್ವರ ಮಠಾಧ್ಯಕ್ಷ ಮಹಾಂತ ಸ್ವಾಮೀಜಿ, ಮುರುಘ ರಾಜೇಂದ್ರ ವಿರಕ್ತ ಮಠಾಧ್ಯಕ್ಷ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತ ಮಠಾಧ್ಯಕ್ಷ ಇಮ್ಮಡಿ ಚೆನ್ನಮಲ್ಲದೇಶಿಕೇಂದ್ರ ಸ್ವಾಮೀಜಿ, ಹಲ್ಲರೆ ಗುರು ಮಲ್ಲೇಶ್ವರ ಮಠಾಧ್ಯಕ್ಷ ಬಸವಣ್ಣ ಸ್ವಾಮೀಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಮಹೇಶ್, ಶ್ರೀಕಂಠಶ್ವೇರ ದೇವಸ್ಥಾನದ ಮಾಜಿ ಅಧ್ಯಕ್ಷ ಇಂಧನ್ ಬಾಬು, ವೀರಶೈವ ಮಹಾಸಭಾ ಘಟಕದ ತಾಲೂಕು ಅಧ್ಯಕ್ಷ ಕೆಂಪಣ್ಣ, ಬುಲೆಟ್ ಮಹದೇವಪ್ಪ ಸೇರಿದಂತೆ ಹಲವು ಮಠಾಧೀಶರು ಹಾಜರಿದ್ದರು.

ಪ್ರತಿಯೊಬ್ಬರೂ ಅನಾರೋಗ್ಯ ನಿರ್ಲಕ್ಷಿಸಬಾರದು

ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್

ತಿ.ನರಸೀಪುರ, ಫೆ.23– ಆಧುನಿಕ ಯುಗದಲ್ಲಿ ಪ್ರತಿಯೊಬ್ಬರಿಗೂ ಹುಟ್ಟಿನೊಂದಿಗೆ ಅನಾರೋಗ್ಯ ಜೊತೆಯಾಗಿ ಬರುವುದರಿಂದ ಆರೋಗ್ಯದ ಬಗ್ಗೆ ಉದಾಸೀನ ಹಾಗೂ ಅನಾರೋಗ್ಯ ನಿರ್ಲಕ್ಷಿಸಬಾರದು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ತಿಳಿಸಿದರು.

ತಾಲೂಕಿನ ಕಟ್ಟೆಕೊಪ್ಪಲು ಗ್ರಾಮದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಾರ್ಡ್ ಇರುವ ಕಟ್ಟಡ ಕಾರ್ಮಿಕರಿಗೆ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಶಿಬಿರಗಳನ್ನು ಗ್ರಾಮೀಣ ಪ್ರದೇಶದ ಎಲ್ಲಾ ಕಡೆ ನಡೆಸಿದರೆ ಗ್ರಾಮೀಣ ಜನರಿಗೂ ಉಪಯೋಗ ವಾಗುತ್ತದೆ. ಎಲ್ಲಾ ವರ್ಗದ ಜನರು ಇದರ ಸದುಪಯೋಗ ಪಡೆಯಬೇಕು ಎಂದರು.

ಜೀವನ ಶೈಲಿ ಬದಲಾಗಿದ್ದರಿಂದ 3 ದಶಕಗಳಿಂದ ಕೆಲವು ಜನರಲ್ಲಷ್ಟೇ ಕಾಣಿಸಿಕೊಳ್ಳುತ್ತಿದ್ದ ಸ್ವಾಭಾವಿಕ ಕಾಯಿಲೆಗಳು ಎಲ್ಲರಲ್ಲೂ ಕಾಣಿಸಿಕೊಂಡು ಸಾಮಾನ್ಯ ಜನರನ್ನೂ ಬಾಧಿಸುವುದು ನೋಡುತ್ತಿದ್ದೇವೆ ಎಂದರು.

ನಮ್ಮ ಗ್ರಾಮೀಣ ಜನರ ಆರೋಗ್ಯದ ಸ್ಥಿತಿ ಬಿಗಡಾಯಿಸಿ ಕುಸಿದು ಬೀಳುವವರೆಗೂ ಆಸ್ಪತ್ರೆಯತ್ತ ಸುಳಿಯುವುದೇ ಇಲ್ಲ. ಆಹಾರ ಮತ್ತು ಪರಿಸರದಲ್ಲಿನ ಗುಣಮಟ್ಟ ಕ್ಷೀಣಿಸಿರುವುದರಿಂದ ನಗರವಾಸಿಗಳಂತೆ ಹಳ್ಳಿಗಳ ಜನರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಇದರಿಂದ ಕಾಯಿಲೆಯ ಗುಣ ಲಕ್ಷಣಗಳು ಕಂಡು ಬಂದರೆ ಆರಂಭದಲ್ಲೇ ಗುಣಪಡಿಸಿಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.



ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಮಾತನಾಡಿದರು.

> ಜನರು ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಹಾಗೂ ಖಾಸಗಿ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸಬೇಕೆಂದರೆ ಹೆಚ್ಚು ಹಣ ಖರ್ಚಾಗುತ್ತದೆ. ಈಗ ನಿಮ್ಮೂರಿಗೆ ಶಿಬಿರ ಬಂದಿರುವುದರಿಂದ ನೀವು ಹೆಚ್ಚಾಗಿ ಗೊತ್ತಿಲ್ಲದವರನ್ನು ಕರೆದುಕೊಂಡು ಬಂದು ಇಂತಹ ಶಿಬಿರಗಳನ್ನು ಉಪಯೋಗಿಸಿಕೊಂಡು ಯಶಸ್ವಿಗೊಳಿಸಬೇಕು.
>
> – **ಶಿವಸಿದ್ದು**, ಕಾರ್ಮಿಕ ವಿಭಾಗದ ಅಧ್ಯಕ್ಷ.

ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚೆನ್ನಕೇಶವ ಮಾತನಾಡಿ, ದೊಡ್ಡಮಟ್ಟದ ಚಿಕಿತ್ಸಾ ಶಿಬಿರಗಳು ಯಶಸ್ವಿಯಾಗಿ ನಡೆದ ಬಳಿಕ ಇದೇ ಮೊದಲ ಬಾರಿಗೆ ಕಟ್ಟೆ ಕೊಪ್ಪಲು ಗ್ರಾಮದಲ್ಲಿ ಗ್ರಾಮೀಣ ಜನರಿಗೆ ಸಂಚಾರಿ ಆರೋಗ್ಯ ಚಿಕಿತ್ಸಾ ಶಿಬಿರವನ್ನು ವಿಧ್ಯುಕ್ತವಾಗಿ ಆರಂಭಿಸುತ್ತಿದ್ದೇವೆ ಎಂದರು.

ಇದೇ ವೇಳೆ ಆರೋಗ್ಯ ಚಿಕಿತ್ಸಾ ಶಿಬಿರದಲ್ಲಿ ನೂರಾರು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದರು. ಅಲ್ಲದೆ ತಪಾಸಣೆಗೆ ಒಳಗದವರಿಗೆ ತರಬೇತಿ ಸಹ ನೀಡಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಎ.ಎನ್.ಸ್ವಾಮಿ, ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ಜಿಲ್ಲಾಧ್ಯಕ್ಷ ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಹನುಮನನಾಳು ಡೈರಿ ಅಧ್ಯಕ್ಷ ಮರೀಗೌಡ, ಮೈಮಲ್ ಮಾಜಿ ನಿರ್ದೇಶಕ ಕೆ.ಬಿ.ಪ್ರಭಾಕರ್, ಮುಖಂಡರಾದ ಶಿವಣ್ಣ, ಮಹೇಂದ್ರ, ಕೃಷ್ಣ, ಕಾರ್ಮಿಕ ಇಲಾಖೆಯ ನಿರೀಕ್ಷಕ ಮಂಜುನಾಥ, ಸದಾನಂದ, ವೈದ್ಯರು ಹಾಜರಿದ್ದರು.



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಜಮಾಲ್ ಬಿಬಿ ಮಾ ಗೋರಿಗೆ ಪೂಜೆ ಸಲ್ಲಿಸಿದರು.

ವಿಜೃಂಭಣೆಯ ಆಂಜನೇಯಸ್ವಾಮಿ ಪಲ್ಲಕ್ಕಿ ಉತ್ಸವ

ಹುಣಸೂರು, ಫೆ.23– ಹಿಂದೂ–ಮುಸ್ಲಿಂ ಭಾವೈಕ್ಯತೆಯ ಪ್ರತೀಕವಾಗಿರುವ ತಾಲೂಕಿನ ರತ್ನಪುರಿ ಆಂಜನೇಯಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ವಿಜೃಂಭಣೆಯಿಂದ ನಡೆದ ಆಂಜನೇಯಸ್ವಾಮಿ ಪಲ್ಲಕ್ಕಿ ಉತ್ಸವಕ್ಕೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಚಾಲನೆ ನೀಡಿದರು.

ದೇವಾಲಯದ ಆವರಣದಿಂದ ಹೊರಟ ಆಂಜನೇಯಸ್ವಾಮಿ ಉತ್ಸವ ಮೂರ್ತಿ ಪಲ್ಲಕ್ಕಿ ಉತ್ಸವ ಮೆರವಣಿಗೆಗೆ ನಂದಿ ಕಂಬ, ಕಂಸಾಳೆ, ನಗಾರಿ, ತಮಟೆ, ಡೊಳ್ಳು ಕುಣಿತ, ಕೇರಳದ ಚಂಡೆ ಮೇಳ, ವೀರಗಾಸೆ, ಪೂಜಾ ಕುಣಿತ, ಗೊಂಬೆ ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳು ಮೆರುಗು ನೀಡಿದವು. ಮೆರವಣಿಗೆ ಮಸೀದಿ ಮುಂಭಾಗ ಬಂದಾಗ ಮುಸ್ಲಿಂ ಮುಖಂಡರು ಪಾಲ್ಗೊಂಡು ಗಮನ ಸೆಳೆದರು. ರಸ್ತೆಬದಿಯಲ್ಲಿ ನೆರೆದಿದ್ದ ಭಕ್ತರು ಉತ್ಸವ ಕಣ್ತುಂಬಿಕೊಂಡರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ತಾಲೂಕಿನಲ್ಲಿ ನಡೆಯುತ್ತಿರುವ ಈ ಜಾತ್ರೆ ಭಾವೈಕ್ಯದ ಪ್ರತೀಕ. ಎರಡೂ ಧರ್ಮಗಳು ಈ ಜಾತ್ರೆಯಲ್ಲಿ ಪ್ರೀತಿ, ಭಾತೃತ್ವದಿಂದ ಪಾಲ್ಗೊಳ್ಳಲಿದ್ದು, ರಾಜ್ಯಕ್ಕೆ ಮಾದರಿಯಾಗಿದೆ ಎಂದರು.

ಜಾತ್ರೆ ಆಯೋಜಕರು ವರ್ಷದಿಂದ ವರ್ಷಕ್ಕೆ ಜಾತ್ರೆಯನ್ನು ವಿಭಿನ್ನವಾಗಿ ಆಚರಿಸುತ್ತಿದ್ದಾರೆ. ಜಾತ್ರೆ ಅಂಗವಾಗಿ ಆಯೋಜಿಸಿರುವ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕುಸ್ತಿ ಪಟುಗಳು ರತ್ನಪುರಿಗೆ ಆಗಮಿಸಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ರತ್ನಪುರಿ ಗ್ರಾಮ ಈ ಹಿಂದಿನಿಂದಲೂ ಕಲೆಗೆ ಬೆಲೆ ನೀಡುತ್ತಿದೆ. ಇಡೀ ರಾಜ್ಯದಲ್ಲೇ ಹಿಂದೂ–ಮುಸ್ಲಿಂ ಭಾವೈಕ್ಯತೆ ಮೆರೆಯುವ ವಿಶಿಷ್ಟ ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿರುವುದು ಸಂತಸ ತಂದಿದೆ ಎಂದರು. ಇದೇ ವೇಳೆ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಆಂಜನೇಯಸ್ವಾಮಿ ಮತ್ತು ಜಮಾಲ್ ಬಿಬಿ ಮಾ ಗೋರಿಗೆ ಪೂಜೆ ಸಲ್ಲಿಸಿದರು.



ಉತ್ಸವದಲ್ಲಿ ಗಮನ ಸೆಳೆದ ಆಂಜನೇಯಸ್ವಾಮಿ ಮೂರ್ತಿಗಳು ಹಾಗೂ ಕಲಾ ತಂಡಗಳು.

ಕುಸ್ತಿ ಪಂದ್ಯಾವಳಿಗೆ ಚಾಲನೆ: ಜಾತ್ರೆ ಹಾಗೂ ಉರುಸ್ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರ–ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಗೆ ರಾಷ್ಟ್ರೀಯ ಕ್ರೀಡಾಪಟು ಪ್ರಸನ್ನ, ಮುಖಂಡರಾದ ರಾಮದಾಸ್ ಚಾಲನೆ ನೀಡಿದರು. ಅಡಿಕೆ ವ್ಯಾಪಾರಿ ಸತೀಶ್ ಪಾಪಣ್ಣ, ಜಾತ್ರಾ ಸಮಿತಿ ಅಧ್ಯಕ್ಷ ಆರ್.ಪ್ರಭಾಕರ್, ಸಹಕಾರ್ಯದರ್ಶಿ ರಾಜು, ಗ್ರಾಪಂ ಮಾಜಿ ಅಧ್ಯಕ್ಷ ನಂದೀಶ್, ಸದಸ್ಯರಾದ ಮೋಹನ್, ದೇವರಾಜ್, ಮನುಕುಮಾರ್, ಪ್ರೇಮೇಗೌಡ ಇದ್ದರು.

ಮೆರವಣಿಗೆಯಲ್ಲಿ ಜಾತ್ರೋತ್ಸವ ಸಮಿತಿ ಅಧ್ಯಕ್ಷ ಪ್ರಭಾಕರ್, ಸಹ ಕಾರ್ಯದರ್ಶಿ ರಾಜು, ಸುದರ್ಶನ್ ಸಿಂಗ್, ಜಿಪಂ ಮಾಜಿ ಸದಸ್ಯ ಸುರೇಂದ್ರ, ತಾಪಂ ಮಾಜಿ ಸದಸ್ಯ ಅಜ್ಗರ್ ಪಾಷ, ಪ್ರೇಮೇಗೌಡ, ಗ್ರಾಪಂ ಅಧ್ಯಕ್ಷ ನಾಗೇಶ್ ರಾವ್ ಮೆಂಗಾಣಿ, ವಿ.ಮಹದೇವ್, ಗ್ರಾಪಂ ಮಾಜಿ ಅಧ್ಯಕ್ಷರಾದ ನಂದೀಶ್, ವೀರಭದ್ರಸ್ವಾಮಿ, ಸದಸ್ಯರಾದ ವಿಜೇಂದ್ರ ಕುಮಾರ್, ಮೋಹನ್ ಆಚಾರಿ, ಮನುಕುಮಾರ್, ಅಲ್ತಾಫ್ ಷರೀಫ್, ದೇವರಾಜ್, ಮಂಜು, ಮುಖಂಡರಾದ ಆನಂದಸ್ವಾಮಿ, ಪ್ರಸನ್ನ, ಮಹದೇವ ಸ್ವಾಮಿ, ಕರುಣ, ಹರೀಶ್, ಉದ್ಯಮಿ ಕೃಷ್ಣ, ಸತೀಶ್ ಪಾಪಣ್ಣ, ಸ್ವಾಮಿ, ನಾರಾಯಣ ಗೌಡ, ಮಹೇಶ್, ದಯಾನಂದ್, ಸುಂದರ್ ರಾಜ್ ಸೇರಿದಂತೆ ಸಾವಿರಾರು ಹನುಮ ಭಕ್ತರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಸಂತ ಸೇವಾಲಾಲ್ ಜಯಂತಿ

ಬಂಜಾರ ಸಮುದಾಯವು ಸಂಘಟಿತ ಹೋರಾಟದಿಂದ ಅವಕಾಶ ಗಿಟ್ಟಿಸಿಕೊಳ್ಳಬೇಕು

ಶಾಸಕ ಕೆ.ಹರೀಶ್ ಗೌಡ ಸಲಹೆ

ಮೈಸೂರು,ಫೆ.23(ಎಂಟಿವೈ)– ಸಂಘಟಿತರಾಗಿ ಹೋರಾಟ ಮಾಡುವ ಮೂಲಕ ಬಂಜಾರ ಸಮುದಾಯ ಹಕ್ಕಿನೊಂದಿಗೆ ಅವಕಾಶ ಗಿಟ್ಟಿಸಿಕೊಳ್ಳಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣ ಸಮುದಾಯವಾಗಿರುವ ಬಂಜಾರ ಸಮುದಾಯ ಸಮಾಜದಲ್ಲಿ ಹಿಂದುಳಿದಿದೆ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಜನಸಂಖ್ಯೆ ಇರುವಂತಹ ಸಮುದಾಯ ಮೈಸೂರಿನ ಭಾಗಗಳಲ್ಲಿ ಏಳರಿಂದ ಎಂಟು ಸಾವಿರ ಜನಸಂಖ್ಯೆ ಹೊಂದಿದೆ. ಚಾಮರಾಜ ಕ್ಷೇತ್ರದಲ್ಲಿ ಬಂಜಾರ ಸಮುದಾಯದವರಿಗೆ ಸಮುದಾಯ ಭವನವನ್ನು ಲೋಕಾರ್ಪಣೆ ಮಾಡಿದ್ದೇವೆ. ಬಂಜಾರ ಸಮುದಾಯ ವಾಸಿಸುವ ಸ್ಥಳದಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಲಂಬಾಣಿ ಸಮುದಾಯ ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದರಲ್ಲಿಯೂ ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲಂಬಾಣಿ ಸಮುದಾಯಗಳಿಗೆ ಸ್ಥಾನ ಮಾನ ನೀಡಬೇಕು ಎಂಬ ದೃಷ್ಟಿಯಿಂದ ಬಂಜಾರ ಸಮುದಾಯಗಳಿಗೆ ಉಪ ನಿರ್ದೇಶಕರನ್ನು ನೇಮಕ ಮಾಡಿದ್ದಾರೆ. ಬಂಜಾರ ಸಮುದಾಯದ ಪ್ರಾಧಿಕಾರವನ್ನು ನಮ್ಮ ಕಾಂಗ್ರೆಸ್ ಸರ್ಕಾರ ರಚಿಸಿದೆ. ನಮ್ಮ ಸರ್ಕಾರ ಕಡಿಮೆ ಜನಸಂಖ್ಯೆ ಇರುವ ಸಮುದಾಯಗಳು ಹಾಗೂ ಅಲ್ಪಸಂಖ್ಯಾತ ಸಮುದಾಯಗಳನ್ನು ಮೇಲೆತ್ತುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಮಹನೀಯರ ಜಯಂತಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಮಹತ್ತರ ಸಂದೇಶಗಳ ಜ್ಞಾನ ಸಂಪಾದಿಸಬಹುದು. 280 ವರ್ಷಗಳ ಹಿಂದೆ ಸಂತ ಸೇವಾಲಾಲ್ ಮಾಡಿರುವಂತಹ ಕೆಲಸಗಳು ಇಂದಿಗೂ ಅನುಕರಣೀಯ. ಅವರ ಸಮಾಜಮುಖಿ ಕಾರ್ಯವನ್ನು ಪ್ರಚಾರ ಮಾಡಲು ಯಾವುದೇ ಮಾಧ್ಯಮಗಳು ಇರಲಿಲ್ಲ. ಅವರ ಪುಸ್ತಕಗಳನ್ನು ಪ್ರಚಾರ ಮಾಡಲು ಯಾರೂ ಇರಲಿಲ್ಲ. ಅಂತಹ ಕಾಲದಲ್ಲಿಯೇ ಸಂತ ಸೇವಾಲಾಲ್ ಅವರು ಎಷ್ಟೋ ಜನರ ಮನಸ್ಸುಗಳನ್ನು ಗೆದ್ದಿದ್ದಾರೆ ಎಂದು ತಿಳಿಸಿದರು.

ಯಾವುದೇ ಸಮಾಜ ರಾಜಕೀಯವಾಗಿ, ಧಾರ್ಮಿಕವಾಗಿ ಶಕ್ತಿಯುತವಾಗಿ ಬೆಳೆಯಬೇಕಾದರೆ ಸಂಘಟನೆಯೊಂದಿಗೆ ಶಕ್ತಿ ಹಾಗೂ ಬುದ್ಧಿವಂತಿಕೆ ಪ್ರದರ್ಶಿಸಬೇಕು. ಲಂಬಾಣಿ ಸಮುದಾಯದಲ್ಲಿ ಮಹಿಳೆಯರಿಗೆ ಹೆಚ್ಚು ಆದ್ಯತೆ ಕೊಟ್ಟಿರುವುದು ಶ್ಲಾಘನೀಯ. ಮಹಿಳೆಯರನ್ನು ಗೌರವಿಸಿದರೆ ನೂರು ದೇವರನ್ನು ಪೂಜೆ ಮಾಡಿದಂತಾಗುತ್ತದೆ. ಎಲ್ಲಾ ಸಮುದಾಯಗಳೂ ಏಳಿಗೆ ಸಾಧಿಸಬೇಕು. ಬಲಿಷ್ಠವಾಗಿ ಬೆಳೆಯಬೇಕು. ಪ್ರತಿಯೊಬ್ಬ ಸಾಧಕರ ನುಡಿಮುತ್ತುಗಳನ್ನು, ಸಂದೇಶಗಳನ್ನು ಸ್ವೀಕರಿಸಬೇಕು. ಸಂತ ಸೇವಾಲಾಲ್ ಪುಸ್ತಕಗಳನ್ನು ಓದಬೇಕು. ಸಂತ ಸೇವಾಲಾಲ್ ಆಗದಿದ್ದರೂ ಪರವಾಗಿಲ್ಲ ನಿಮ್ಮಲ್ಲಿ ಒಬ್ಬನಾದರೂ ಸಂತ ಸೇವಾಲಾಲ್ ಅವರ ರೀತಿ ಬೆಳೆಯಬೇಕು ಎಂದು ಹೇಳಿದರು.

ಇದೇ ವೇಳೆ ಕಲಬುರ್ಗಿ ಜಿಲ್ಲೆಯ ಅಬಕಾರಿ ಅಧೀಕ್ಷಕ ಶ್ರೀ ರಾಮ್ ದೇವ ಸೋಥ್ ಅವರು ಸಂತ ಸೇವಾಲಾಲ್ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಇದಕ್ಕೂ ಲಂಬಾಣಿ ಸಮುದಾಯ ಲೆಂಗಿ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಬಂಜಾರ ಶ್ರೀ ಶಕ್ತಿ ಪೀಠದ ಶಿವಪ್ರಕಾಶ ಮಹಾರಾಜ್ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್, ಬಂಜಾರಾ ಸೇವಾ ಸಂಘದ ಅಧ್ಯಕ್ಷ ಎಂ.ಸುಂದರ್, ಉಪಾಧ್ಯಕ್ಷ ತೇಜಾನಾಯಕ್, ಕಾರ್ಯದರ್ಶಿ ಎಂ.ಅನಿಲ್, ಬಂಜಾರ ಸಮುದಾಯದ ಖಜಾಂಚಿ ಕಾವೇರಿ ಬಾಯಿ, ಬಂಜಾರ ಮಹಿಳಾ ಸಂಘದ ಅಧ್ಯಕ್ಷೆ ಧರಣಿಭಾಯಿ ಸುದರ್ಶನ್ ಮತ್ತಿತರ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಸಂತ ಸೇವಾಲಾಲ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶ್ರೀ ಶಕ್ತಿ ಪೀಠದ ಶಿವಪ್ರಕಾಶ ಮಹಾರಾಜ್ ಸ್ವಾಮೀಜಿ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ತಂಡೆಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗೇಮ್ ಚೇಂಜರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ನಿಲವುಕು ಎನಮೇಲ್ ಎನ್ನಡಿ ಕೋಪಂ(ತ)	4 ಪ್ರದರ್ಶನಗಳು
ಸಂಗಂ	
ವಿಷ್ಣುಪ್ರಿಯ (ಕ)	4 ಪ್ರದರ್ಶನಗಳು
ಲಿಡೋ	
ಡಾಕು ಮಹಾರಾಜ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಇದಮೊಯರ್ಚಿ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಸಿರಂಬುವಿನ ಗಾಯಕ್ಕೆ ಚಿಕಿತ್ಸೆ



ಮೈಸೂರು, ಫೆ.23– ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.28ರವರೆಗೆ ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಕಾಲುಗಳಲ್ಲಿ ರಕ್ತ ಸಂಚಾರದ ಅಕ್ಷಮತೆಯಿಂದ ಉಂಟಾಗುವ ಗಾಯಗಳನ್ನು ವೀನಸ್ ಅಲ್ಸರ್ ಎನ್ನುತ್ತಾರೆ. ಈ ಸಮಸ್ಯೆಯಿಂದ ಬಳಲುವವರಿಗೆ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 96635 91100 ಸಂಪರ್ಕಿಸಬಹುದು.

ಏಷ್ಯನ್ ಅಂಡರ್-14 ಟೆನಿಸ್ ಪಂದ್ಯಾವಳಿ

ಮೈಸೂರಿನ ಪದ್ಮಪ್ರಿಯಾ, ದಿಯಾ ಜೋಡಿ ಚಾಂಪಿಯನ್ಸ್

ಮೈಸೂರು, ಫೆ.23(ಎಂಟಿವೈ)– ಹೈದರಾಬಾದ್‌ನ ಅಹಮದಾಬಾದ್‌ನಲ್ಲಿ ನಡೆದ ಏಷ್ಯನ್ ಅಂಡರ್–14 ಟೆನಿಸ್ ಟೂರ್ನಮೆಂಟ್‌ನಲ್ಲಿ ಮೈಸೂರಿನ ಅರಣ್ಯಾಧಿಕಾರಿ ದಂಪತಿ ಪುತ್ರಿ ಪದ್ಮಪ್ರಿಯಾ ರಮೇಶ್ ಕುಮಾರ್ ಹಾಗೂ ದಿಯಾ ರವಿಕುಮಾರ್ ಬಾಲಕಿಯರ ಡಬಲ್ಸ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ ಮಟ್ಟದ ಫೈನಲ್ ಪಂದ್ಯದಲ್ಲಿ ಅಗ್ರ ಶ್ರೇಯಾಂಕಿತ ಜೋಡಿಯಾದ ಮೈಸೂರಿನ ಪದ್ಮಪ್ರಿಯಾ ಮತ್ತು ದಿಯಾ, ಎರಡನೇ ಶ್ರೇಯಾಂಕಿತ ಜೋಡಿ ಮರಿಯಾ ಪಟೇಲ್ ಮತ್ತು ಆರಾಧನಾ ತೆಹ್ಲಾನ್ ವಿರುದ್ಧ 6–3, 6–3 ಸೆಟ್ ಅಂತರದಲ್ಲಿ ಜಯಗಳಿಸುವ ಮೂಲಕ ಡಬ್ಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇದಕ್ಕೂ ಮೊದಲು, ಈ ಜೋಡಿ ಸೆಮಿಫೈನಲ್‌ನಲ್ಲಿ 6–7 (2–7), 6–3, 10–7 ಅಂತರದಲ್ಲಿ ಸಹೇಜ್ ಲಖತ್ (ಯುಎಸ್) ಮತ್ತು ಭಾರತದ ಕೃಷಿಕಾ ಗೌತಮ್ ಜೋಡಿಯ ವಿರುದ್ಧ ಜಯಗಳಿಸಿ ರೋಚಕ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿತ್ತು.

ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್ ಕುಮಾರ್ ಹಾಗೂ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ಟೆನ್ನಿಸ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿ ಭವಿಷ್ಯದ ಟೆನ್ನಿಸ್ ತಾರೆಯಾಗುವ ಭರವಸೆ ಮೂಡಿಸಿದ್ದಾರೆ. ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಏಷ್ಯನ್ ಜೂನಿಯರ್ ಪಂದ್ಯಾವಳಿಯಲ್ಲೂ ಪದ್ಮಪ್ರಿಯಾ ಉತ್ತಮ ಪ್ರದರ್ಶನ ನೀಡಿ ಡಬಲ್ಸ್‌ನಲ್ಲಿ ಗೆಲುವು ಸಾಧಿಸಿದ್ದರು. ಈಗಾಗಲೇ ವಿವಿಧ ಹಂತ ಪಂದ್ಯಾವಳಿಯಲ್ಲಿ ಹಲವು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ



ಅಹಮದಾಬಾದ್‌ನಲ್ಲಿ ನಡೆದ ಏಷ್ಯನ್ ಅಂಡರ್–14 ಟೆನಿಸ್ ಟೂರ್ನಮೆಂಟ್‌ನಲ್ಲಿ ಬಾಲಕಿಯರ ಡಬಲ್ಸ್ ಪ್ರಶಸ್ತಿ ತನ್ನದಾಗಿಸಿಕೊಂಡ ಪದ್ಮಪ್ರಿಯಾ ರಮೇಶ್ ಕುಮಾರ್ ಹಾಗೂ ದಿಯಾ ರವಿಕುಮಾರ್.

ಕುವೆಂಪು, ದ.ರಾ.ಬೇಂದ್ರೆ ಕನ್ನಡ ಸಾಹಿತ್ಯ ಲೋಕದ ಕಣ್ಣುಗಳಿದ್ದಂತೆ

ಕಸಾಪ ರಾಜ್ಯಾಧ್ಯಕ್ಷ ಡಾ॥ ಮಹೇಶ್ ಜೋಷಿ ಅಭಿಮತ

ಮೈಸೂರು,ಫೆ.23(ಎಂಟಿವೈ)– ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿರುವ ರಾಷ್ಟ್ರಕವಿ ಕುವೆಂಪು ಹಾಗೂ ದ.ರಾ. ಬೇಂದ್ರೆ ಕನ್ನಡ ಸಾಹಿತ್ಯ ಲೋಕಕ್ಕೆ ಎರಡು ಕಣ್ಣುಗಳಂತೆ ಇದ್ದರು ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಷಿ ಬಣ್ಣಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಗ್ರಾಮಾಂತರ ಬುದ್ಧಿಜೀವಿಗಳ ಬಳಗ, ಅಖಿಲ ಭಾರತೀಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ ಸಂಯುಕ್ತಾಶ್ರಯದಲ್ಲಿ ನಡೆದ ಬಳಗದ 40ನೇ ವಾರ್ಷಿಕೋತ್ಸವ ಮತ್ತು ರಾಷ್ಟ್ರಕವಿ ಕುವೆಂಪು ಸಾಹಿತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕುವೆಂಪು ಕಾಯಕದ ಕವಿ. ಜಾತಿ ನಿಂದನೆಯನ್ನು ಕಟುವಾಗಿ ಖಂಡಿಸಿ ಮೂಢನಂಬಿಕೆ ಧಿಕ್ಕರಿಸುವ ಮೂಲಕ ಸಮಾನತೆಯ ಸಂದೇಶ ಸಾರಿದವರು. ವಿಶ್ವಮಾನವತೆಯ ಸಂದೇಶದೊಂದಿಗೆ ಜಗದ ಮತ್ತು ಯುಗದ ಕವಿ ಎನಿಸಿದರು. ಅಲ್ಲದೆ, ಅಧ್ಯಾತ್ಮ ಹಾಗೂ ವೈಚಾರಿಕತೆಯ ಸಮನ್ವಯ ಕಾಪಾಡಿದವರು ಎಂದರು.

ಬುದ್ಧಿಜೀವಿಗಳೆಂದರೆ ಬೆಂಗಳೂರು ಅಥವಾ ದೊಡ್ಡ ನಗರಗಳಿಗೆ ಕೇಂದ್ರೀಕೃತ ಎಂಬ ಮಾತಿದೆ. ಗ್ರಾಮಾಂತರದಲ್ಲೂ ಇದ್ದಾರೆ ಎಂಬುದನ್ನು ಗ್ರಾಮಾಂತರ ಬುದ್ಧಿಜೀವಿಗಳ ಬಳಗವು ನಾಲ್ಕು ದಶಕಗಳಿಂದಲೂ ನಿರೂಪಿಸಿದೆ. ಪುಣ್ಯ ಮಾಡಿದವರು ಕರ್ನಾಟಕದಲ್ಲಿ ಹುಟ್ಟುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಪುಣ್ಯ ಮಾಡಿದವರ ಮಾತೃಭಾಷೆ ಕನ್ನಡ ಆಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಆರು ಕೃತಿಗಳ ಬಿಡುಗಡೆ: ಕೊಡಗಿನ ಕವಿ ಎಂ.ಡಿ. ಅಯ್ಯಪ್ಪ ಅವರ 'ಹೃದಯರಾಗ' ಕೃತಿಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೆ.ಕೃಷ್ಣಕುಮಾರ್, ಪುಣೆಯ ಲೇಖಕಿ ಹೇಮಮಳಗಿ ಅವರ 'ಹೃದಯ' ಕಾದಂಬರಿಯನ್ನು ಕವಯತ್ರಿ ಡಾ. ಲತಾ ರಾಜಶೇಖರ್, ರತ್ನ ಚಂದ್ರಶೇಖರ್ ಅವರ 'ಕಾವ್ಯ ಲಹರಿ' ಕೃತಿಯನ್ನು ರಂಗ ಕರ್ಮಿ ಡಾ.ಹೆಚ್.ಎ. ಪಾರ್ಶ್ವನಾಥ, ವಕೀಲ ಬಿ.ಕೆ.ನೂತನ ಕುಮಾರ್ ಅವರ 'ಮೊದಲ ತೊದಲು' ಕೃತಿಯನ್ನು ನ್ಯಾಯವಾದಿ ರೇವಣ್ಣ ಬಳ್ಳಾರಿ, ಪುಣೆಯ ಹೇಮಾ ಮಳಗಿ ಅವರ 'ಕವನ ಸಂಗಮ' ಕೃತಿಯನ್ನು ಸಾಹಿತಿ ಪುಷ್ಪಾ ಅಯ್ಯಂಗಾರ್, 'ಕಾವ್ಯ ಧಾರೆ' ಕೃತಿಯನ್ನು ಸಾಹಿತಿ ಡಾ.ಜೆ.ಲೋಹಿತ್ ಬಿಡುಗಡೆ ಮಾಡಿದರು.

ವಿವಿಧ ಪ್ರಶಸ್ತಿ ಪ್ರದಾನ: ಕಾರ್ಯಕ್ರಮದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ವಿವಿಧ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಾವೇರಿಯ ಪರಿಸರ ಚಿಂತಕ ಜಗದೀಶ್ ಮಹಾರಾಜ್ ಪೇಟ್, ರಂಗ ಕರ್ಮಿ ಡಾ.ಹೆಚ್.ಎ. ಪಾರ್ಶ್ವನಾಥ ಅವರಿಗೆ ಹಿರಿಯ ಸಾಹಿತಿ ಪ್ರೊ ಎಚ್‌ಎಸ್‌ಕೆ ಅವರ ನೆನಪಿನ ಶತಮಾನೋತ್ಸವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಸುವರ್ಣ ಕರ್ನಾಟಕ ಪ್ರಶಸ್ತಿಯನ್ನು ಕವಯತ್ರಿ ಡಾ. ಲತಾ ರಾಜಶೇಖರ್, ವೈದ್ಯಕೀಯ ಸೇವೆಗಾಗಿ ಕೆ.ಆರ್. ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ನರೇಂದ್ರ, ಸಾಹಿತ್ಯ ಹಾಗೂ ಸಮಾಜ ಸೇವೆಗಾಗಿ ಪುಷ್ಪಾ ಅಯ್ಯಂಗಾರ್ ಹಾಗೂ ವೈದೇಹಿ ಅಯ್ಯಂಗಾರ್ ಅವರಿಗೆ ಪ್ರದಾನ ಮಾಡಲಾಯಿತು.

ಅಲ್ಲದೆ, ಅಪೂರ್ವ ದಂಪತಿಗಳಿಗೆ ಪ್ರಶಸ್ತಿ, ವಿಶ್ವಮಾನ್ಯ ಕನ್ನಡಿಗ ಪ್ರಶಸ್ತಿ, ರಾಷ್ಟ್ರಕವಿ ಕುವೆಂಪು ಚೇತನ ಪ್ರಶಸ್ತಿಯನ್ನು ಸಾಧನೆ ಮಾಡಿದವರಿಗೆ ಪ್ರಧಾನ ಮಾಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರನ್ನು ಕುರಿತಂತೆ ರಾಜ್ಯ ಪ. ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯ ಅಧಿಕಾರಿ ಡಿ.ಜಿ.ಗುರುಶಾಂತಪ್ಪ ಉಪನ್ಯಾಸ ನೀಡಿದರು. ಸಾಮೂಹಿಕ ನೇತ್ರದಾನ ಕಾರ್ಯಕ್ರಮ ವೈದ್ಯರಾದ ಡಾ.ಕೆ.ಆರ್. ಗೌತಮ್ ಉದ್ಘಾಟಿಸಿದರು. ಪರಿಸರ ಜಾಗೃತಿ ಕಾರ್ಯಕ್ರಮವನ್ನು ರೈತ ಮುಖಂಡ ಸರಗೂರು ನಟರಾಜ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗ್ರಾಮಾಂತರ ಬುದ್ಧಿಜೀವಿ ಬಳಗದ ಅಧ್ಯಕ್ಷ ಧೇರ್ಯ ರಾಮಕುಮಾರ್, ಲೇಖಕಿ ಸೌಜನ್ಯ ಶರತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಗ್ರಾಮಾಂತರ ಬುದ್ಧಿಜೀವಿಗಳ ಬಳಗ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಾವೇರಿಯ ಪರಿಸರ ಚಿಂತಕ ಜಗದೀಶ್ ಮಹಾರಾಜ್ ಪೇಟ್, ರಂಗ ಕರ್ಮಿ ಡಾ.ಹೆಚ್.ಎ. ಪಾರ್ಶ್ವನಾಥ ಅವರಿಗೆ ಹಿರಿಯ ಸಾಹಿತಿ ಪ್ರೊ.ಎಚ್‌ಎಸ್‌ಕೆ ಅವರ ನೆನಪಿನ ಶತಮಾನೋತ್ಸವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ದೆಹಲಿ ವಿಧಾನಸಭೆಯ ಹಂಗಾಮಿ ಸ್ಪೀಕರ್ ಆಗಿ ಅರವಿಂದರ್ ಸಿಂಗ್ ಲವ್ಲಿ ನೇಮಕ


ನವದೆಹಲಿ, ಫೆ.23– ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಬಿಜೆಪಿ ಶಾಸಕ ಅರವಿಂದರ್ ಸಿಂಗ್ ಲವ್ಲಿ ಅವರನ್ನು ವಿಧಾನಸಭೆಯ ಹಂಗಾಮಿ ಸ್ಪೀಕರ್ ಆಗಿ ನೇಮಕ ಮಾಡಿದ್ದಾರೆ.

ಫೆ.24 ರಂದು ದೆಹಲಿ ನೂತನ ಸರ್ಕಾರದ ಮೊದಲ ಅಧಿವೇಶನ ನಡೆಯಲಿದ್ದು, ಬೆಳಿಗ್ಗೆ 11 ಗಂಟೆಗೆ ಹೊಸದಾಗಿ ಚುನಾಯಿತರಾದ ಶಾಸಕರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಬಳಿಕ ಮಧ್ಯಾಹ್ನ 2 ಗಂಟೆಗೆ ಸ್ಪೀಕರ್ ಆಯ್ಕೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಫೆ.25ರಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ವಿಧಾನಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಮಹಾಲೇಖಪಾಲರ ವರದಿಗಳನ್ನು (ಸಿಎಜಿ) ಮಂಡಿಸಲಾಗುವುದು. ಫೆ.26ರಂದು ಲೆಫ್ಟಿನೆಂಟ್ ಗವರ್ನರ್ ಅವರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ನಡೆಯಲಿದೆ. ನಂತರ ದೆಹಲಿ ವಿಧಾನಸಭೆಯ ಉಪಸಭಾಪತಿ ಅವರನ್ನು ಆಯ್ಕೆ ಮಾಡಲಾಗುವುದು ಎಂದು ಮೂಲಗಳು ಹೇಳಿವೆ.

ದೇಶ – ವಿದೇಶ

ಅಭಿವೃದ್ಧಿಯಲ್ಲಿ ಭಾರತವನ್ನು ಮೀರಿಸದಿದ್ದರೆ ನನ್ನ ಹೆಸರು ಶೆಹಬಾಜ್ ಷರೀಫ್ ಅಲ್ಲ: ಪಾಕ್ ಪ್ರಧಾನಿ ಸವಾಲು



ಡೇರಾಘಾಜಿ ಖಾನ್: ಪಾಕಿಸ್ತಾನವು ಪ್ರಗತಿಯಲ್ಲಿ ಭಾರತವನ್ನು ಮೀರಿಸದಿದ್ದರೆ ನನ್ನ ಹೆಸರು ಶೆಹಬಾಜ್ ಷರೀಫ್ ಅಲ್ಲ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ. ಡೇರಾ ಘಾಜಿ ಖಾನ್‌ನಲ್ಲಿ ಶನಿವಾರ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತಾಡಿದ ಅವರು, ನಾವು ಭಾರತವನ್ನು ಹಿಂದೆ ಬಿಡದಿದ್ದರೆ, ನನ್ನ ಹೆಸರು ಶೆಹಬಾಜ್ ಷರೀಫ್ ಅಲ್ಲ. ನಾವು ಪಾಕಿಸ್ತಾನವನ್ನು ಶ್ರೇಷ್ಠ ರಾಷ್ಟ್ರವನ್ನಾಗಿ ಮಾಡುತ್ತೇವೆ ಮತ್ತು ಭಾರತಕ್ಕಿಂತ ಮುಂದೆ ಸಾಗುತ್ತೇವೆ ಎಂದು ಭಾರತವನ್ನು ಹಿಂದಿಕ್ಕುವ ದೃಢಸಂಕಲ್ಪವನ್ನು ವ್ಯಕ್ತಪಡಿಸಿದ್ದಾರೆ.

ಇದಕ್ಕೂ ಮುನ್ನ ಡೇರಾ ಘಾಜಿ ಖಾನ್‌ನಲ್ಲಿ ಅವರು ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಪಾಕಿಸ್ತಾನವನ್ನು ಪ್ರಸ್ತುತ ಸವಾಲುಗಳಿಂದ ಹೊರತಂದು ಶ್ರೇಷ್ಠ ರಾಷ್ಟ್ರವನ್ನಾಗಿ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ಇದರೊಂದಿಗೆ ಪಾಕಿಸ್ತಾನದ ಭವಿಷ್ಯವು ಶ್ರೇಷ್ಠತೆಗಾಗಿ ಉದ್ದೇಶಿಸಲಾಗಿದೆ ಎಂದು ಪ್ರಧಾನಿ ವಿಶ್ವಾಸದಿಂದ ಘೋಷಿಸಿ, ಸಮೃದ್ಧಿಯತ್ತ ಕೊಂಡೊಯ್ಯುವ ಭರವಸೆ ನೀಡಿದರು.

ಶ್ವಾಸಕೋಶದ ಸಮಸ್ಯೆ: ಪೋಪ್ ಫ್ರಾನ್ಸಿಸ್ ಆರೋಗ್ಯ ಗಂಭೀರ



ರೋಮ್(ಇಟಲಿ): ನ್ಯೂಮೋನಿಯಾ ಮತ್ತು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ ಪೋಪ್ ಫ್ರಾನ್ಸಿಸ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ವ್ಯಾಟಿಕನ್ ಮಾಹಿತಿ ನೀಡಿದೆ.

ತೀವ್ರ ಉಸಿರಾಟ ಸಮಸ್ಯೆಯಿಂದ ಬಳಲುತ್ತಿರುವ 88 ವರ್ಷ ವಯಸ್ಸಿನ ಪೋಪ್ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಉಸಿರಾಟದ ಸಮಸ್ಯೆ ಹಿನ್ನೆಲೆಯಲ್ಲಿ ಆಕ್ಸಿಜನ್ ಪೂರೈಸಲಾಗುತ್ತಿದೆ. ಹಾಗೆಯೇ ಪ್ಲೇಟ್‌ಲೆಟ್ಸ್ ಕಡಿಮೆಯಾಗಿದ್ದರಿಂದ ರಕ್ತ ನೀಡಲಾಗುತ್ತಿದೆ ಎಂದು ವ್ಯಾಟಿಕನ್ ತಿಳಿಸಿದೆ.

ಫೆ.14ರಂದು ಆಸ್ಪತ್ರೆಗೆ ದಾಖಲಾದ ಬಳಿಕ ಇದೇ ಮೊದಲ ಸಲ ಪೋಪ್ ಗಂಭೀರವಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ಲಿಖಿತವಾಗಿ ತಿಳಿಸಲಾಗಿದೆ. ಪೋಪ್‌ಗೆ ನೋವು ಹೆಚ್ಚಿರುವುದರಿಂದ ಅವರನ್ನು ಆರ್ಮ್ ಚೇರ್‌ನಲ್ಲಿಯೇ ನಿನ್ನೆ ಇರಿಸಲಾಗಿತ್ತು. ವಯಸ್ಸು, ದುರ್ಬಲತೆ ಮತ್ತು ದೀರ್ಘಕಾಲದಿಂದ ಇರುವ ಶ್ವಾಸಕೋಶ ಸಮಸ್ಯೆಯಿಂದ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದು, ಈಗಲೇ ಏನೂ ಹೇಳಲಾಗುವುದಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

ಕೇಜ್ರಿವಾಲ್ ಸಮ್ಮುಖದಲ್ಲಿ ಎಎಪಿ ಸೇರಿದ ಪಂಜಾಬಿ ನಟಿ ಸೋನಿಯಾ ಮಾನ್



ಚಂಡೀಗಢ: ಪಂಜಾಬಿ ನಟಿ ಮತ್ತು ಕೀರ್ತಿ ಕಿಸಾನ್ ಯೂನಿಯನ್ ನಾಯಕ ಬಲದೇವ್ ಸಿಂಗ್ ಅವರ ಪುತ್ರಿ ಸೋನಿಯಾ ಮಾನ್ ಭಾನುವಾರ ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ.

ಮಾನ್ ಪಂಜಾಬಿ ನಟಿಯಾಗಿದ್ದು, ಅವರು ಬಹು ಭಾಷೆಗಳಲ್ಲಿ ವಿವಿಧ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಸೋನಿಯಾ ಅವರು ಮಲಯಾಳಂ, ಹಿಂದಿ, ತೆಲುಗು ಮತ್ತು ಮರಾಠಿ ಸೇರಿದಂತೆ ವಿವಿಧ ಭಾಷೆಗಳ ಹಲವು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. 'ಹೈಡ್ ಎನ್' ಸೀಕ್' ಎಂಬ ಮಲಯಾಳಂ ಚಿತ್ರದ ಮೂಲಕ ಅವರು ನಟನೆಗೆ ಪದಾರ್ಪಣೆ ಮಾಡಿದರು. 2014ರಲ್ಲಿ ಕಹಿನ್ ಹೈ ಮೇರಾ ಪ್ಯಾರ್ ಎಂಬ ಚಿತ್ರದ ಮೂಲಕ ಬಾಲಿವುಡ್‌ಗೆ ಪದಾರ್ಪಣೆ ಮಾಡಿದರು. 2020 ರಲ್ಲಿ ಹ್ಯಾಪಿ ಹಾರ್ಡಿ ಮತ್ತು ಹೀರ್ ಚಿತ್ರಗಳಲ್ಲಿ ನಟಿಸಿದ್ದಾರೆ. ಸಿನಿಮಾಗಳ ಹೊರತಾಗಿ, ಅವರು 2018ರಲ್ಲಿ ಸತ್ತ ಗಾಯಕ ಸಿಧು ಮೂಸೆವಾಲಾ ಸೇರಿದಂತೆ ಪ್ರಸಿದ್ಧ ಗಾಯಕರೊಂದಿಗೆ ಹಾಡಿದ್ದಾರೆ. ಆಕೆಯ ತಂದೆ ಬಲದೇವ್ ಸಿಂಗ್ ಅವರು ರೈತ ನಾಯಕ ಮತ್ತು ಕಾರ್ಯಕರ್ತರಾಗಿದ್ದರು.

ಬಿಡುಗಡೆ ವೇಳೆ ಹಮಾಸ್ ಕಾರ್ಯಕರ್ತರ ಹಣೆಗೆ ಮುತ್ತಿಟ್ಟ ಇಸ್ರೇಲಿ ಒತ್ತೆಯಾಳು

ಗಾಜಾ: ಇಂದು ನಡೆದ ಒತ್ತೆಯಾಳುಗಳ ವಿನಿಮಯದಲ್ಲಿ, ಹಮಾಸ್ ಉಗ್ರಗಾಮಿ ಗುಂಪಿನ ನಿಯಂತ್ರಣದಲ್ಲಿದ್ದ ಇನ್ನೂ ಮೂವರು ಇಸ್ರೇಲಿ ಒತ್ತೆಯಾಳುಗಳನ್ನು ಹಸ್ತಾಂತರಿಸಲಾಯಿತು. ಕೇಂದ್ರ ಪಟ್ಟಣವಾದ ನುಸೈರಾತ್‌ನಲ್ಲಿ ನೂರಾರು ಪ್ಯಾಲೆಸ್ಟೀನಿಯನ್ನರು ನೋಡುತ್ತಿದ್ದಂತೆ ಮೂವರು ಇಸ್ರೇಲಿ ಪುರುಷರಾದ ಓಮರ್ ವೆಂಕರ್ಟ್, ಓಮರ್ ಶೆಮ್ ಟೋವ್ ಮತ್ತು ಎಲಿಯಾ ಕೊಹೆನ್ ಅವರನ್ನು ವೇದಿಕೆಯ ಮೇಲೆ ಪೋಸ್ ನೀಡುವಂತೆ ಮಾಡಲಾಯಿತು. ಆಗ ಓಮರ್ ಶೆಮ್ ಟೋವ್ ಮತ್ತು ವೆಂಕರ್ಟ್ ಮುಗುಳ್ನಗುತ್ತಾ ಜನರತ್ತ ಕೈ ಬೀಸಿದರು. ಓಮರ್ ಶೆಮ್ ಟೋವ್ ಹಮಾಸ್ ಕಾರ್ಯಕರ್ತರೊಬ್ಬರ ಹಣೆಗೆ ಮುತ್ತಿಟ್ಟಿರುವ ವಿಡಿಯೋ ವೈರಲ್ ಆಗಿದೆ.

ಬಳಿಕ ಆ ಮೂವರನ್ನು ರೆಡ್‌ಕ್ರಾಸ್ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಇಸ್ರೇಲಿ ಒತ್ತೆಯಾಳು ಓಮರ್ ಶೆಮ್ ಟೋವ್ ವೇದಿಕೆಯ ಮೇಲೆ ಕೈ ಬೀಸುತ್ತಾ ಇಬ್ಬರು ಹಮಾಸ್ ಸದಸ್ಯರ ಹಣೆಗೆ ಮುತ್ತಿಟ್ಟಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ನಮ್ಮ ಮಗ ಅತಿಯಾದ ಸಂತೋಷವನ್ನು ಈ ರೀತಿ ಅಭಿವ್ಯಕ್ತಪಡಿಸಿದ್ದಾನೆ ಎಂದು ಆತನ ತಂದೆ ಹೇಳಿದ್ದಾರೆ.

ನಾಯಿಯ ವಿಚಾರವಾಗಿ ವಿವಾದ: ಮಹಿಳೆ ಮೇಲೆ ಕಾರು ಹತ್ತಿಸಿ ಬರ್ಬರ ಹತ್ಯೆ

ಗೋವಾ: ಸಾಕು ನಾಯಿಯ ವಿಚಾರದಲ್ಲಿ ತೀವ್ರ ವಾಗ್ವಾದ ನಡೆದ ಪರಿಣಾಮ ಗೋವಾಗೆ ಪ್ರವಾಸಕ್ಕೆಂದು ಬಂದಿದ್ದ ವ್ಯಕ್ತಿ ಸ್ಥಳೀಯ ಮಹಿಳೆ ಮೇಲೆ ಕಾರು ಹತ್ತಿಸಿ ಬರ್ಬರ ಹತ್ಯೆ ಮಾಡಿರುವ ಘಟನೆ ವರದಿಯಾಗಿದೆ.

ಹತ್ಯೆ ಆರೋಪದ ಮೇಲೆ ದೆಹಲಿಯ ಪ್ರವಾಸಿಗನನ್ನು ಗೋವಾದಲ್ಲಿ ಬಂಧಿಸಲಾಗಿದೆ. ಮಾಂಡ್ರೆಮ್‌ನಲ್ಲಿ ಸ್ಥಳೀಯ ಮಹಿಳೆಯೊಬ್ಬರು ಪ್ರವಾಸಿ ಕುಟುಂಬಕ್ಕೆ ನಾಯಿಯನ್ನು ತಮ್ಮ ಮನೆಯ ಬಳಿ ತರದಂತೆ ವಿನಂತಿಸಿಕೊಂಡ ನಂತರ ಈ ಘಟನೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರವಾಸಿ ಗುಂಪಿನಲ್ಲಿದ್ದ ಓರ್ವ ಮಹಿಳೆ ಫೆರ್ನಾಂಡಿಸ್ ಅವರ ಕೂದಲನ್ನು ಎಳೆದರು ಮತ್ತು ಆಕೆ ಕೆಳಗೆ ಬಿದ್ದರು. ಸ್ವಲ್ಪ ಸಮಯದ ನಂತರ, ಪ್ರವಾಸಿಗರಲ್ಲಿ ಒಬ್ಬರಾದ ದೀಪಕ್ ಬಾತ್ರಾ ಅತಿ ವೇಗದಲ್ಲಿ ಅವರ ಮೇಲೆ ಕಾರು ಚಾಲನೆ ಮಾಡಿ ಡಿಕ್ಕಿ ಹೊಡೆದರು ಎಂದು ಮೂಲಗಳು ತಿಳಿಸಿವೆ. ಕಾರು ಬಲಿಪಶುವಿನ ದೇಹವನ್ನು ಸುಮಾರು 10 ಮೀಟರ್‌ಗಳಷ್ಟು ಎಳೆದೊಯ್ದಿತು ಮತ್ತು ಮಹಿಳೆಯ ಮಗ ಜೋಸೆಫ್ ರಕ್ಷಣೆ ಮಾಡಲು ಪ್ರಯತ್ನಿಸಿದಾಗ ಅವರ ಭುಜಕ್ಕೆ ಗಾಯವಾಗಿದೆ. ಗೋವಾ ಪೊಲೀಸರು ದೀಪಕ್ ಬಾತ್ರಾ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿಯ ಮಹಿಳಾ ಅಧಿವೇಶನ

ಸಾಹಿತ್ಯವೆಂಬುದು ಸಕಾರಾತ್ಮಕ ಚಿಂತನೆಗಳಿಗೆ ದೀವಿಗೆ

ಮೈಸೂರು ಆಕಾಶವಾಣಿ ನಿಲಯದ ನಿವೃತ್ತ ನಿರ್ದೇಶಕಿ ವಿಜಯಾ ಹರನ್ ಅಭಿಮತ



ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿ ಮಹಿಳಾ ಪ್ರಕಾರದ ಮೊದಲ ಅಧಿವೇಶನವನ್ನು ಮೈಸೂರು ಆಕಾಶವಾಣಿಯ ನಿವೃತ್ತ ನಿಲಯದ ನಿರ್ದೇಶಕಿ ಶ್ರೀಮತಿ ವಿಜಯ ಹರನ್ ಉದ್ಘಾಟಿಸಿದರು.

ಮೈಸೂರು,ಫೆ.23–ಸಾಹಿತ್ಯಕ್ಕೆ ಅದರದೇ ಆದ ಘನತೆ ಗಾಂಭೀರ್ಯತೆ ವಿಚಾರಶೀಲತೆಯಿದೆ. ಅದರ ಚಿಂತನೆಯಿಂದ ಸಕಾರಾತ್ಮಕ ವಿಚಾರಗಳು ಹೆಚ್ಚುತ್ತವೆ ಎಂದು ಮೈಸೂರು ಆಕಾಶವಾಣಿಯ ನಿಲಯದ ನಿವೃತ್ತ ನಿರ್ದೇಶಕಿ ಶ್ರೀಮತಿ ವಿಜಯಹರನ್ ಅಭಿಪ್ರಾಯಪಟ್ಟರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಶಾಲೆಯಲ್ಲಿ ಭಾನುವಾರ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿಯ ಮಹಿಳಾ ಪ್ರಕಾರದ ಮೊದಲ ಅಧಿವೇಶನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಾ, ವೃತ್ತಿ ಪ್ರವೃತ್ತಿಗಳ ಜೊತೆಗೂಡಿ ಕೆಲಸ ಮಾಡುವುದೂ ಒಂದು ಕಲೆ, ಮಹಿಳೆಯರಿಗೆ ಆ ಕಲೆ ಕರತಲಾಮಲಕವಾಗಿರುತ್ತದೆ ಎಂದರು.

ಮುಖ್ಯ ಅತಿಥಿ ಡಾ.ವಿ.ಸೌಭಾಗ್ಯಲಕ್ಷ್ಮಿ ಮಾತನಾಡುತ್ತಾ, ಸಣ್ಣಕಥೆಗಳನ್ನು ಬರೆಯುವುದೂ ಒಂದು ಕಲೆ, ಸಣ್ಣದೊಂದು ಘಟನೆಯನ್ನು ಸವಿಸ್ತಾರಗೊಳಿಸುತ್ತ ಓದುಗರಿಗೆ ಸಂದರ್ಭದ ಅರಿವು ಮೂಡಿಸುವುದು ಸವಾಲೇ ಸರಿ ಎಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಮೈಸೂರು ಜಿಲ್ಲಾ ಸಮಿತಿಯ ಮಾಧ್ಯಮ ಪ್ರಮುಖ್ ಹಾಗೂ ಲೇಖಕಿ ಶ್ರೀಮತಿ ಗಾಯತ್ರಿ ಸುಂದರೇಶ್‌ರವರು ಮಹಿಳೆ ಮತ್ತು ಹಾಸ್ಯ ಪ್ರವೃತ್ತಿ ಎಂಬ ವಿಚಾರ ಕುರಿತು ಮಾತನಾಡುತ್ತಾ, ಹಾಸ್ಯ ಲೇಖನದ ಮೊದಲ ಮಹಿಳಾ ಸಾಹಿತಿ ಟಿ.ಸುನಂದಮ್ಮನವರ ಬರಹ ಗಳಲ್ಲಿ ನಗುವಿನ ಅರಮನೆಯೇ ನೆಲೆಸಿರುತ್ತಿತ್ತು. ಪ್ರೊ.ಭುವನೇಶ್ವರಿ ಹೆಗಡೆ, ನುಗ್ಗೇನ ಹಳ್ಳಿ ಪಂಕಜರಂತ ಮಹಿಳೆಯರು ಹಾಸ್ಯ ಬರಹದ ಮುನ್ನುಡಿಗೆ ಅಡಿಪಾಯ ಹಾಕಿದಂತಹವರು ಎಂದರು.

ಶ್ರೀಮತಿ ಧರಿತ್ರಿ ಆನಂದರಾವ್ ಗಮಕ ಮತ್ತು ಸಾಹಿತ್ಯ ಎಂಬ ವಿಚಾರದ ಕುರಿತು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಮಿತಿಯ ಹದಿಮೂರನೆ ಕೂಟ ಸರಸ್ವತಿಪುರಂ ಸಾಹಿತ್ಯಕೂಟ ಮತ್ತು ಪರಿಷದ್‌ನ ಡಿಜಿಟಲ್ ಮಾಹಿತಿ ಕಣಜವನ್ನು ಲೋಕಾರ್ಪಣೆಗೊಳಿಸಲಾಯಿತು.

ನಂತರ ಮಹಿಳೆಯರಿಂದ ಲಾವಣಿ, ಭಾವಗೀತೆ ಮತ್ತು ಭಕ್ತಿಗೀತೆಗಳ ಗಾಯನ ಕಾರ್ಯಕ್ರಮವಿತ್ತು. ಶ್ರೀಗಂಧವಲಯ ಅಧ್ಯಕ್ಷ ಡಾ.ವಿ.ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಅಧ್ಯಕ್ಷ ಶೇಷಾದ್ರಿ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಶ್ರೇಷ್ಠ ಕವಿತೆಯ ಹುಟ್ಟಿಗೆ ಕವಿ ಪ್ರಾಮಾಣಿಕನಾಗಿರಬೇಕು

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ ಅಭಿಮತ



ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ನೀಲಗಿರಿ ಎಂ.ತಳವಾರ ಮಾತನಾಡಿದರು.

ಮೈಸೂರು: ಯಾವ ಉತ್ತಮ ಕವಿತೆಯೂ ಅನಾಯಾಸವಾಗಿ ಹುಟ್ಟುವುದಿಲ್ಲ. ಒಂದು ಶ್ರೇಷ್ಠ ಕವಿತೆಯ ಹುಟ್ಟಿಗೆ ಕವಿಯೂ ಪ್ರಾಮಾಣಿಕನಾಗಿರಬೇಕು ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ.ತಳವಾರ ಅಭಿಪ್ರಾಯಪಟ್ಟರು.

ಕ್ರಿಯಾ ಅಭಿವ್ಯಕ್ತಿ ಸಂಘಟನೆಯ ವತಿಯಿಂದ ನಗರದ ಬೋಗಾದಿಯಲ್ಲಿರುವ ಕ್ರಿಯಾ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ.ನೀ.ಗೂ.ರಮೇಶ್ ಅವರ 'ಗಾಂಧೀಮರ ಸಂಕಲನದ ಕವಿತೆಗಳ ಓದು' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಗಾಂಧೀಮರ' ಸಂಕಲನವು ಪ್ರಬುದ್ಧ ಕವಿತೆಗಳ ಸಂಕಲನವಾಗಿದ್ದು, ತನ್ನ ವೈಚಾರಿಕ ನಿಲುವುಗಳಿಂದಾಗಿ ವರ್ತಮಾನದ ಕಾವ್ಯದ ಸಂದರ್ಭದಲ್ಲಿ ಮಹತ್ವದ ಸ್ಥಾನ ಪಡೆದುಕೊಳ್ಳುತ್ತದೆ. ಸಮಕಾಲಿನ ಕವಿಗಳ ಕವಿತೆಗಳನ್ನು ಓದಿ, ಅರ್ಥೈಸಿ ಮುಂದಿನ ತಲೆಮಾರಿಗೆ ತಲುಪಿಸುವುದು ನಾಗರಿಕ ಸಮಾಜದ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಒಂದು ಕವಿತೆಯ ಹುಟ್ಟಿನ ಹಿಂದೆ ಕವಿಯ ಮಹಾ ತಪಸ್ಸೇ ಇರುತ್ತದೆ. ಅಂತಹ ಕವಿತೆಗಳನ್ನು ಓದುವ ಪರಿಪಾಠವು ಸಾಹಿತ್ಯಕ್ಕೆ ಹೊಸ ದಿಕ್ಕನ್ನು ತೋರುತ್ತದೆ. ಕವಿತೆಯ ವಿಶೇಷ ಗುಣವೆಂದರೆ ಅದು ಕವಿ ಮತ್ತು ಓದುಗ ಇಬ್ಬರನ್ನೂ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಟಿ.ಸತೀಶ್ ಜವರೇಗೌಡ ಮಾತನಾಡಿ, ಹೊಸ ಕೃತಿಯ ಪ್ರಕಟಣೆಯ ಸಂಭ್ರಮ ಕೇವಲ ಅದರ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸೀಮಿತವಾಗಬಾರದು. ಆ ಹೊಸ ಕೃತಿಯ ಓದು, ಚರ್ಚೆ, ಸಂವಾದಗಳ ಮೂಲಕ ಅದು ಜನರನ್ನು ತಲುಪಬೇಕಾದ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಬಿ.ಸಿ.ದೊಡ್ಡೇಗೌಡ, ಪುನೀತ್ ಎಸ್.ಪಾಳೇಕರ್, ಮಂಜುಳಾ ಭದ್ರೇಗೌಡ, ರಶ್ಮಿ ಕೆ. ವಿಶ್ವನಾಥ್, ಎಂ.ಎಸ್.ಸಂಧ್ಯಾರಾಣಿ, ಕಿರಣ್ ಕುಮಾರ್ ದೇಸಾಯಿ, ಸ್ವಾಮಿ ದಂಡಿನಕೆರೆ, ವಿ.ಶ್ರೀಧರ್, ಮನುಪ್ರಸಾದ್, ಚಂದಿಕಾ, ಸಂಪತ್ ಕಟ್ಟಿ ಮತ್ತಿತರರು ಡಾ.ನೀ.ಗೂ. ರಮೇಶ್ ಅವರ 'ಗಾಂಧೀಮರ' ಸಂಕಲನದಲ್ಲಿನ ಕವಿತೆಗಳನ್ನು ಓದಿ ವಿಶ್ಲೇಷಣೆ ಮಾಡಿದರು. ಕಾರ್ಯಕ್ರಮದಲ್ಲಿ ಕ್ರಿಯಾ ಸಂಸ್ಥೆಯ ಸಂಸ್ಥಾಪಕ ಪ್ರಸನ್ನಕುಮಾರ್ ಕೆರಗೋಡು, ಡಾ.ವೈ.ಡಿ.ರಾಜಣ್ಣ, ಡಾ.ಪಳನಿಸ್ವಾಮಿ, ಡಾ.ನೀ.ಗೂ. ರಮೇಶ್, ಕುಮಾರ್, ಸುಪ್ರಿಯಾ ಉಪಸ್ಥಿತರಿದ್ದರು.

ಆದಿಚುಂಚನಗಿರಿ ಮಹಿಳಾ ಒಕ್ಕಲಿಗ ಸಮಾಜದ ವಾರ್ಷಿಕೋತ್ಸವ...



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಮಹಿಳಾ ಒಕ್ಕಲಿಗ ಸಮಾಜ ಸಂಘದ ವಾರ್ಷಿಕೋತ್ಸವ ಸಮಾರಂಭವನ್ನು ಸವಿತಗೌಡ ಅವರ ಅಧ್ಯಕ್ಷತೆಯಲ್ಲಿ ಖಾಸಗಿ ಹೋಟಲ್‌ನಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ದಿ ಮೈಸೂರ್ ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷೆ ರಾಜೇಶ್ವರಿ, ಪದಾಧಿಕಾರಿಗಳಾದ ರಾಜೇಶ್ವರಿ, ಲತಾ ರಮೇಶ, ಸವಿತ ಜಗದೀಶ, ಸರೋಜ, ಸುನಂದ, ಗಿರಿಜಾ, ಲಕ್ಷ್ಮಿ, ವಿಜಯ, ಮಮತ, ಉಮಾ, ಜಾಹ್ನವಿ ದಿನೇಶ್ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕುಂಭಮೇಳದಿಂದ ಹಿಂತಿರುಗುತ್ತಿದ್ದ ಟ್ರಕ್‌ಗೆ ಜೀಪ್ ಡಿಕ್ಕಿ; 3 ಸಾವು

ಬಿಹಾರ: ಮಹಾ ಕುಂಭಮೇಳದಿಂದ ಹಿಂತಿರುಗುತ್ತಿದ್ದಾಗ ಟ್ರಕ್‌ಗೆ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿದ್ದು, 4 ಮಂದಿ ಗಾಯಗೊಂಡಿರುವ ಘಟನೆ ಬಿಹಾರದ ಕೈಮೂರ್ ಜಿಲ್ಲೆಯಲ್ಲಿ ನಡೆದಿದೆ. ಜಿಲ್ಲೆಯ ಚಿಲ್ಬಿಲಿ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಜಮುಯಿ ಕಡೆಗೆ ಹೋಗುತ್ತಿದ್ದ ಜೀಪ್ ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ, ಮತ್ತೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಇತರ ನಾಲ್ವರು ಗಾಯಗೊಂಡಿದ್ದಾರೆ ಎಂದು ಉಪವಿಭಾಗದ ಪೊಲೀಸ್ ಅಧಿಕಾರಿ ಪ್ರದೀಪ್ ಕುಮಾರ್, ಮೊಹಾನಿಯಾ ತಿಳಿಸಿದ್ದಾರೆ.

ಎಎಪಿ ಆಡಳಿತದಲ್ಲಿ ದೆಹಲಿ ಬೊಕ್ಕಸ ಖಾಲಿ: ಸಿಎಂ ರೇಖಾ ಆರೋಪ

ನವದೆಹಲಿ: ಈ ಹಿಂದೆ ಆಡಳಿತ ನಡೆಸಿರುವ




ಎಎಪಿ ಪಕ್ಷ ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡಿದೆ ಎಂದು ಆರೋಪಿಸಿರುವ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ವಿಸ್ತೃತವಾಗಿ ಯೋಜಿಸಿ ಮಹಿಳೆಯರಿಗೆ ಪ್ರತಿ ತಿಂಗಳು 2,500 ಹಣ ನೀಡುವ ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿದರು.

ದೆಹಲಿ ವಿಧಾನಸಭೆ ಅಧಿವೇಶನದ ಹಿನ್ನೆಲೆ ಪಕ್ಷದ ಕಚೇರಿಯಲ್ಲಿ ಬಿಜೆಪಿ ಶಾಸಕರೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ಮಹಿಳಾ ಸಮೃದ್ಧಿ ಯೋಜನೆಯಡಿ ಮಹಿಳೆಯರಿಗೆ ಪ್ರತಿ ತಿಂಗಳು 2,500 ನೀಡುವ ಯೋಜನೆಯ ಕುರಿತು ಅಧಿಕಾರಿಗಳೊಂದಿಗೆ ವಿವಿಧ ಹಂತದಲ್ಲಿ ಸಭೆ ನಡೆಸಲಾಗಿದೆ. ಹಿಂದಿನ ಸರ್ಕಾರ ಬಿಟ್ಟುಹೋದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಿದಾಗ, ರಾಜ್ಯದ ಬೊಕ್ಕಸ ಖಾಲಿಯಾಗಿರುವುದು ಗೊತ್ತಾಗಿದೆ. ಹೀಗಿದ್ದರೂ, ಖಂಡಿತವಾಗಿಯೂ ಯೋಜನೆಯನ್ನು ಜಾರಿಗೊಳಿಸಿ ಅರ್ಹ ಮಹಿಳೆಯರಿಗೆ ಹಣ ಸಿಗುವಂತೆ ಮಾಡಲಾಗುತ್ತದೆ ಎಂದರು.

ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚದೇವ್ ಮಾತನಾಡಿ, ದೆಹಲಿಯ ಅಭಿವೃದ್ಧಿ ಮತ್ತು ಜನರ ಸಮಸ್ಯೆಗಳನ್ನು ನಿವಾರಿಸುವುದೇ ಬಿಜೆಪಿ ಸರ್ಕಾರದ ಕಾರ್ಯಸೂಚಿಯಾಗಿದೆ ಎಂದು ಹೇಳಿದರು.

ಮಹಾಕುಂಭಮೇಳದಲ್ಲಿ ಕೇರಳದ ರಾಜ್ಯಪಾಲ ಕುಟುಂಬ ಸಮೇತ ಭಾಗಿ; ಸಂಗಮದಲ್ಲಿ ಪುಣ್ಯ ಸ್ನಾನ

ಮಹಾಕುಂಭ ನಗರ: ಪ್ರಯಾಗ್‌ರಾಜ್‌ನಲ್ಲಿ



ನಡೆಯುತ್ತಿರುವ ಮಹಾ ಕುಂಭಮೇಳಕ್ಕೆ ಭೇಟಿ ನೀಡಿರುವ ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಮತ್ತು ಅವರ ಕುಟುಂಬ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದೆ. 'ಮಹಾ ಕುಂಭಮೇಳವು ದೇಶದ ಪ್ರಾಚೀನ ಸಂಪ್ರದಾಯಗಳನ್ನು ಸಾಕಾರಗೊಳಿಸುತ್ತದೆ. ಧಾರ್ಮಿಕ ಸಭೆಯು ಏಕತೆಯನ್ನು ಸಂಕೇತಿಸುತ್ತದೆ. ಪ್ರಪಂಚದಾದ್ಯಂತ ಇರುವ ಲಕ್ಷಾಂತರ ಭಕ್ತರನ್ನು ಆಕರ್ಷಿಸುತ್ತದೆ' ಎಂದು ಅವರು ಹೇಳಿದ್ದಾರೆ.

ಪ್ರಾಚೀನ ಸಂಪ್ರದಾಯಗಳನ್ನು ಪುನಶ್ಚೇತನಗೊಳಿಸುವ ಪ್ರಯತ್ನಗಳಿಗಾಗಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ರಾಜೇಂದ್ರ ಶ್ಲಾಘಿಸಿದ್ದಾರೆ. ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ (ಎನ್‌ಎಸ್‌ಇಸಿ)ದ ಸಿಇಒ ಆಶಿಶ್ ಚೌಹಾಣ್ ಮತ್ತು ಅವರ ಪತ್ನಿ ಸೋನಲ್ ಚೌಹಾಣ್ ಅವರು ಮಹಾ ಕುಂಭಮೇಳದಲ್ಲಿ ಭಾಗಿಯಾಗಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಕೂಡ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದ್ದಾರೆ.

PUBLIC NOTICE

Our client intends to purchase the notice schedule property from its owner Mr. Amogh R.V, S/o Mr. R.S. Vishwanath, aged about 33 years, residing at Kuvempunagar, Mysuru.

The above referred Mr. Amogh. R.V, is the absolute owner in possession of the Notice schedule property and is having valid and marketable title over the same and the same is free from encumbrance. In that view of the matter, hereby given this Notice to the Public that, if any person/s having any claim, right, title, interest or any objection/s and/or opposing the sale transaction in whatsoever manner may lodge his/her/their objections/s with relevant documentary proof to the undersigned within 7 days from the date of this publication, failing which, it will be presumed that no other person/s has got any right over the schedule property and our client will proceed to complete the sale transaction thinking that it is free from encumbrances.

SCHEDULE : ALL THAT PIECE AND PARCEL of the Immovable MUDA Property bearing Site No. 1313, situated at 3rd Stage, Devanur Extension, (Rajiv Nagar), N.R. Mohalla, Mysuru measuring East to West 15.00 Mtrs and North to South 24.00 Mtrs. in all measuring 360.00 Sq Mtrs and bounded on:- EAST BY: property bearing no. 1314, WEST BY : property bearing no. 1312 ,NORTH BY : property bearing no. 1302 , SOUTH BY : 9 mtrs road

For VIJU ASSOCIATES
Sd/- (P.T. Ponnappa) Advocate,
Office # 34/16, I Floor, No. 4, N.P.D. Complex, Opp. Bhagavan Pathology Laboratory, South Cross, Shivarampet, Mysuru , Mob No: 9880025685

MYSURU , DATE:23.02.2025

ಶ್ರೀ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘ ರಿ.,

ಕನಕ ಭವನ, ಹುಣಸೂರು–ಬೇಗೂರು ರಸ್ತೆ,
ಗದ್ದಿಗೆ ಸರ್ಕಲ್, ಹೆಚ್.ಡಿ.ಕೋಟೆ ಟೌನ್– 571114
ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
(ರಿ.ನಂ.100/93–94)

ಮಾನ್ಯ ಸದಸ್ಯ ಬಂಧುಗಳೇ,

ಶ್ರೀ ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘ (ರಿ.) ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲ್ಲೂಕು ಸಂಘದ ಉಪಾಧ್ಯಕ್ಷರಾದ **ಶ್ರೀ ಆರ್.ಎಂ. ವೀರೇಗೌಡ**ರವರ ಅಧ್ಯಕ್ಷತೆಯಲ್ಲಿ ದಿನಾಂಕ : 25–02–2025ರ ಮಂಗಳವಾರ ಬೆಳಿಗ್ಗೆ 11–00ಗಂಟೆಗೆ **ಕನಕ ಭವನ,** ಹುಣಸೂರು–ಬೇಗೂರು ರಸ್ತೆ, ಗದ್ದಿಗೆ ಸರ್ಕಲ್, ಹೆಚ್.ಡಿ.ಕೋಟೆ ಟೌನ್‌ನಲ್ಲಿ ಸಂಘದ ವಿಶೇಷ ಸರ್ವಸದಸ್ಯರ ಮಹಾಸಭೆಯನ್ನು ಕರೆಯಲಾಗಿದೆ.

ಮಾನ್ಯ ಸದಸ್ಯ ಬಂಧುಗಳು ತಪ್ಪದೇ ಈ ವಿಶೇಷ ಸರ್ವಸದಸ್ಯರ ಮಹಾಸಭೆಗೆ ಹಾಜರಾಗಿ ತಮ್ಮ ಅಮೂಲ್ಯ ಸಲಹೆಗಳನ್ನು ಕೊಟ್ಟು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ತಮ್ಮಲ್ಲಿ ವಿನಂತಿಸಲಾಗಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಚಿಕ್ಕಣ್ಣ ಎಂ., ಪ್ರಧಾನ ಕಾರ್ಯದರ್ಶಿ

ವಿಶೇಷ ಸೂಚನೆ : ಸಭೆಗೆ ಹಾಜರಾಗುವ ಸದಸ್ಯರು ಆಹ್ವಾನ ಪತ್ರಿಕೆಯನ್ನು ವಿಶೇಷ ಸರ್ವ ಸದಸ್ಯರ ಸಭೆಗೆ ತಪ್ಪದೆ ತರತಕ್ಕದ್ದು ಮತ್ತು ಅಜೀವ ಸದಸ್ಯರಿಗೆ ಮಾತ್ರ ಸಭೆಗೆ ಪ್ರವೇಶ.

